# ಯುಗದನಿ

★ ದೈವ ವಿಶ್ವಾಸ

★ ಇಸ್ಲಾಂ—ನವೀನ ಪಾಶ್ಚಾತ್ಯರ ನೋಟದಲ್ಲಿ

★ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ

★ ಯೇಸು ವಿವಾಹಿತರಾಗಿದ್ದರು

★ ವಿಚಿತ್ರವಾದ ಮೌದೂದಿ ಸಮಾನತೆ

★ ಇಸ್ಲಾಂ ಮತ ತತ್ತ್ವಜ್ಞಾನ


ತ್ರೈಮಾಸಿಕ

ಎಪ್ರಿಲ್ 1982

ಬೆಲೆ: ರೂ. 1-00


ಯಾವನು ಇಹಲೋಕದ ಪ್ರತಿಫಲವನ್ನು ಮೋಹಿಸುತ್ತಾನೋ, ಅವನಿಗೆ ನಾವು ಅದರಿಂದ ನೀಡುವೆವು; ಯಾವನು ಪರಲೋಕದ ಪ್ರತಿಫಲವನ್ನು ಕಾಂಕ್ಷಿಸುತ್ತಾನೋ, ಅವನಿಗೆ ನಾವು ಅದರಿಂದ ನೀಡುವೆವು; ಕೃತಜ್ಞತೆ ಸೂಚಿಸುವವರಿಗೆ ನಾವು ನಿಶ್ಚಯವಾಗಿಯೂ ಪ್ರತಿಫಲ ನೀಡುವೆವು.

—ಪವಿತ್ರ ಖುರ್‌ಆನ್ [3 : 146]

# ಯುಗರಶ್ಮಿ [ತ್ರೈಮಾಸಿಕ]

ಬಿಡಿಪ್ರತಿ : **ರೂ. 1-00** ವಾರ್ಷಿಕ ಚಂದಾ ; **ರೂ. 4-00**

**ವಿಷಯ ಸೂಚಿಕೆ :**


| | ಪುಟ |
|---|---|
| * ನನ್ನ ನಿಯೋಗೋದ್ದೇಶ ... ... | 1 |
| * ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... ... | 2 |
| * ದೈವ ವಿಶ್ವಾಸ ... ... | 3 |
| * ಇಸ್ಲಾಂ ಮತ್ತು ವಿಜ್ಞಾನ ... ... | 8 |
| * ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ—3 ... ... | 12 |
| * ಯೇಸು ವಿವಾಹಿತರಾಗಿದ್ದರು ... ... | 16 |
| * ಹದೀಸ್ ವ್ಯಾಖ್ಯಾನ—ಆಖಿರುಲ್ ಅಂಬಿಯಾ ... ... | 18 |
| * ವಿಚಿತ್ರವಾದ ಮೌದೂದಿ ಸಮಾನತೆ ... ... | 20 |
| * ಸಂಪಾದಕರಿಗೆ ಪತ್ರ ... ... | 22 |
| * ಚುಟುಕು-ಚೂರು ... ... | 23 |
| * ಅಹ್ಮದಿಯಾ ವಾರ್ತೆಗಳು ... ... | 24 |
| * ಪುಸ್ತಕ ವಿಭಾಗ—ಇಸ್ಲಾಂ ಮತ ತತ್ತ್ವಜ್ಞಾನ | |



**Statement about Ownership and other particulars about the Newspaper YUGARASHMI Quarterly**

**FORM IV (See Rule 8)**

| | | |
|---|---|---|
| 1 | Place of publication | Mangalore |
| 2 | Periodicity of its publication | Quarterly |
| 3 | Printer's name | U. Ramesh Anchan |
| | Whether citizen of India? | Yes |
| | Address | Karavali Printers, Azizuddin Road Bunder, Mangalore-575 001 |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23/1008, Ansari Road. Bunder, Mangalore-575 001 |
| 5 | Editor's name | Muhammad Yusuf |
| | Whether citizen of India? | Yes |
| | Address | 10-23/1008, Ansari Road, Bunder. Mangalore-575 001 |
| 6 | Names and address of individuals who own the newspaper and partners or shareholders holding more than one percent of the capital | Jamath Ahmadiyya. 10-23/1008, Ansari Road, Bunder, Mangalore-575 001 |

I, Muhammad Yusuf hereby declare that the particulars given above are true to the best of my knowledge and belief.

Dated : 31—3—1982

Sd./- **Muhammad Yusuf**

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ

ಸಂಪಾದಕ : ಮುಹಮ್ಮದ್ ಯೂಸುಫ್

ಸಂಪುಟ : 7 | ಮಾರ್ಚ್–ಏಪ್ರಿಲ್ 1982 / ಅಮಾನ್–ಶಹಾದತ್ 1361 | ಸಂಚಿಕೆ : 4

## ನನ್ನ ನಿಯೋಗೋದ್ದೇಶ

ಈ ದು:ಖಕರವಾದ ದುಸ್ಥಿತಿಗೆ ಪರಿಹಾರ ಕಾಣಲಿಕ್ಕೂ ಮನುಷ್ಯ ವಂಶವನ್ನು ಪವಿತ್ರವಾದ ಏಕದೇವ ತತ್ವದೆಡೆಗೆ ಕೊಂಡೊಯ್ಯಲಿಕ್ಕೂ ದೇವನು ನನ್ನನ್ನು ನಿಯೋಜಿಸಿದ್ದಾನೆ. ಅದರ ಪ್ರಕಾರ ನಾನು ನಿಮಗೆ ಎಲ್ಲಾ ಸಂಗತಿಗಳನ್ನೂ ವಿವರಿಸಿ ಕೊಟ್ಟಿರುವೆನು. ಸತ್ಯವಿಶ್ವಾಸವನ್ನು ದೃಢಪಡಿಸಲಿಕ್ಕೂ ದೇವಾಸ್ತಿತ್ವವನ್ನು ಲೋಕದಲ್ಲಿ ಬಹಿರಂಗಪಡಿಸಲಿಕ್ಕಾಗಿಯೂ ನನ್ನನ್ನು ಕಳುಹಿಸಲಾಗಿದೆ. ಏಕೆಂದರೆ ಸತ್ಯವಿಶ್ವಾಸ ಶುಷ್ಕಿಸಿ ಪರಲೋಕ ಜೀವಿತ ಒಂದು ಕಟ್ಟುಕಥೆಯಾಗಿ ಮಾತ್ರಬಾಕಿಯುಳಿದಿದೆ. ತಮ್ಮ ಜನ್ಮಸಾಫಲ್ಯ ಈ ಭೌತಿಕ ಲೋಕದಲ್ಲೇ ಕೈಗೂಡಬೇಕಾಗಿದೆಯೆಂದೂ ತಮಗೆ ದೇವನಲ್ಲಾಗಲಿ ಪರಲೋಕ ಜೀವಿತದಲ್ಲಾಗಲಿ ವಿಶ್ವಾಸವಿಲ್ಲವೆಂಬ ರೀತಿಯಲ್ಲಿಯೂ ಜನರು ವರ್ತಿಸುತ್ತಾರೆ. ದೇವ ಮತ್ತು ಆತ್ಮದ ಕುರಿತು ಅವರು ಮಾತನಾಡುವರಾದರೂ ಅವರ ಹೃದಯಗಳಲ್ಲಿ ಈ ಲೋಕದ ಮೇಲಿನ ಪ್ರೀತಿ ತುಂಬಿಕೊಂಡಿದೆ. ಪ್ರವಾದಿ ಯೇಸು ತನ್ನ ಕಾಲದಲ್ಲಿ ಯೆಹೂದ್ಯರನ್ನು ಈ ರೀತಿಯಲ್ಲೇ ಕಂಡಿದ್ದರು. ನಾನಿಂದು ಲೋಕವನ್ನು ಕಾಣುವುದು ಸಹ ಅದೇ ರೀತಿಯಲ್ಲಾಗಿದೆ. ಸತ್ಯವಿಶ್ವಾಸದ ಕೊರತೆಯ ಕಾರಣದಿಂದ ಯೆಹೂದ್ಯರ ಹೃದಯಗಳಿಂದ ದೈವಪ್ರೇಮ ಹೇಗೆ ಮಾಯವಾಗಿ ಧಾರ್ಮಿಕತೆ ನಾಶಹೊಂದಿತೋ ಅದೇ ರೀತಿ ಈ ಕಾಲದಲ್ಲೂ ಜನರ ಹೃದಯಗಳಿಂದ ದೇವನ ಮೇಲಿನ ಪ್ರೀತಿ ನಾಶವಾಗಿದೆ. ನಾನು ಸತ್ಯವನ್ನೂ ವಿಶ್ವಾಸವನ್ನೂ ಮರಳಿ ತರಲಿಕ್ಕಾಗಿಯೂ ದೈವಪ್ರೇಮ ಮತ್ತು ದೈವಭಯ ಜನರ ಹೃದಯಗಳಲ್ಲಿ ಪುನಃ ಸ್ಥಾಪಿಸಲಿಕ್ಕಾಗಿಯೂ ಕಳುಹಿಸಲ್ಪಟ್ಟಿದ್ದೇನೆ. ನನ್ನ ಜೀವನೋದ್ದೇಶ ಇದು ಮಾತ್ರವಾಗಿದೆ. ಸ್ವರ್ಗೀಯ ಶಕ್ತಿಗಳು ಈ ಲೋಕವನ್ನು ಮರಳಿ ಸಮೀಪಿಸುವುವೆಂದು ದೇವನು ನನಗೆ ತಿಳಿಸಿಕೊಟ್ಟಿರುವನು. ಒಟ್ಟಿನಲ್ಲಿ, ನಾನು ಈ ಸಂಗತಿಗಳನ್ನೆಲ್ಲಾ ನೆನಪಿಸಲಿಕ್ಕಾಗಿ ಬಂದಿರುವೆನು. ಈ ಉದ್ದೇಶ ಸಿದ್ಧಿಗಾಗಿಯೇ ನಾನು ನಿಯುಕ್ತನಾಗಿರುವೆನು. (ಕಿತಾಬುಲ್ ಬರಿಯ್ಯ, ಪುಟ 253–256)

—ಹಝ್ರತ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಸ್ಥಾಪಕರು.

# ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ವಿಶ್ವಾಸಿಯ ವಾಗ್ದಾನ ಕೈಯಲ್ಲಿ ಸಿಕ್ಕಿದ ವಸ್ತುವಿನಂತೆ.

2. ಅನ್ಯನ ಅನುಭವದಿಂದ ಪಾಠ ಕಲಿಯುವವನು ಸೌಭಾಗ್ಯವಂತ.

3. ಸ್ವಂತ ಸ್ಥಿತಿಯನ್ನು ತಿಳಿದಿರುವವನು ನಾಶ ಹೊಂದುವುದಿಲ್ಲ.

4. ಬೆಂಕಿ ನಿಮ್ಮ ಶತ್ರು; ನೀವು ನಿದ್ರಿಸಲು ಹೋಗುವಾಗ ಅವನ್ನು ನಂದಿಸಿರಿ.

3. ಮೂರು ಮಂದಿ ಯಾತ್ರೆ ಮಾಡುವಾಗ ಒಬ್ಬನನ್ನು ನಾಯಕನನ್ನಾಗಿ ಮಾಡಿರಿ.

4. ಕುದುರೆಯ ಮೇಲೆ ಹತ್ತಿಕೊಂಡು ಬಂದರೆ ಸಹ ಯಾಚಕನೊಡನೆ ಒಂದು ಧರ್ಮವಿದೆ.

5. ಪುನರುತ್ಥಾನ ದಿನದಂದು ಮೊತ್ತ ಮೊದಲಿಗೆ ಪ್ರಶ್ನಿಸಲ್ಪಡುವುದು ಕೊಲೆಪಾತಕದ ಕುರಿತಾಗಿರಬಹುದು.

6. ಏನೂ ತ್ರಾಸ ಉಂಟುಮಾಡದ ವಿವಾಹ ಅತ್ಯಂತ ಅನುಗ್ರಹೀತ.

7. ಸಮ್ಮತನೀಯ ಕಾರ್ಯಗಳಲ್ಲಿ ಅಲ್ಲಾಹನಿಗೆ ಅತ್ಯಂತ ಅಸಂತುಷ್ಟಿಯನ್ನುಂಟು ಮಾಡುವುದು ವಿವಾಹ ವಿಚ್ಛೇದವಾಗಿದೆ.

8. ಎರಡು ಔಷಧಿಗಳು ನಿಮಗೆ ನೀಡಲ್ಪಟ್ಟಿವೆ– ಜೇನು ಮತ್ತು ಖುರ್‌ಆನ್.

9. ಆರೋಗ್ಯವು ಸಂಪತ್ತಿಗಿಂತ ಶ್ರೇಷ್ಠ.

10. ಇಹ ಲೋಕದಲ್ಲಿ ಹೊಟ್ಟೆ ಬಿರಿಯುವಷ್ಟು ತಿನ್ನುವವನು ಪುನರುತ್ಥಾನ ದಿನದಂದು ಅತ್ಯಂತ ಹಸಿದವನಾಗುವನು.


## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

**ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

**ಪುಟ: 60** **ಬೆಲೆ: ಒಂದು ರೂಪಾಯಿ** **ಅಂಚೆ ವೆಚ್ಚ: ಉಚಿತ**

**ಬರೆಯಿರಿ:** Book Secretary, Ahmadiyya Muslim Mission,
10-23/1008 Ansari Road, Bunder, Mangalore–575 001.

# ದೈವ ವಿಶ್ವಾಸ

★ ಮೌಲಾನಾ ಬಿ. ಅಬ್ದುಲ್ಲಾ H. A.

ದೈವವಿಶ್ವಾಸ ಸಕಲ ಧರ್ಮಗಳ ಮೂಲ ತತ್ವವಾಗಿದೆ. ನಾವು ಈ ಲೋಕಕ್ಕೆ ಸ್ವಂತ ಇಚ್ಛೆಯಿಂದ ಬಂದವರಲ್ಲವೆಂದೂ ನಮ್ಮ ಸೃಷ್ಟಿಕರ್ತ ಹಾಗೂ ಈ ಪ್ರಪಂಚದ ನಿಯಾಮಕನಾದ ಒಬ್ಬ ಸರ್ವನಾಥನಿದ್ದಾನೆಂದೂ ಅವನನ್ನು ಗಳಿಸುವುದೇ ನಮ್ಮ ಜೀವಿತೋದ್ದೇಶವೆಂಬುದೂ ಎಲ್ಲಾ ಮತ ಸಿದ್ಧಾಂತಗಳ ಪ್ರಧಾನ ಅಂಶ. ಬೇರೊಂದು ರೀತಿಯಲ್ಲಿ ಹೇಳುವುದಾದರೆ, ಮತಗಳ ಎಲ್ಲಾ ಸಿದ್ಧಾಂತಗಳೂ ಉಪದೇಶಗಳೂ ಈ ಆಸ್ತಿಕ ತತ್ವವನ್ನು ಕೇಂದ್ರೀಕರಿಸಿಕೊಂಡು ಸುತ್ತುತ್ತಿವೆ. ಲೋಕದ ವಿವಿಧ ಕಡೆಗಳಲ್ಲಿ ಹಲವು ಕಾಲಘಟ್ಟಗಳಲ್ಲಿ ಅವತರಿಸುತ್ತಿದ್ದ ಆದರ್ಶ ಪುರುಷರಾದ ಧರ್ಮೋಪದೇಶಕರಲ್ಲಿ ಪ್ರತಿಯೊಬ್ಬರ ಸತ್ಯಭೋಧನೆಗಳ ಪ್ರಧಾನ ಅಂಶ ಇದೇ ತತ್ವವಾಗಿದೆ. ಆ ಪುಣ್ಯಾತ್ಮರು ಈ ತತ್ವದ ಕುರಿತು ಉಪದೇಶಿಸಿದ್ದು ಮಾತ್ರವಲ್ಲ, ಇದೇ ಪರಮ ಸತ್ಯವೆಂದೂ ಅದನ್ನು ಗಳಿಸಲಿಕ್ಕಾಗಿಯೇ ಮನುಷ್ಯನು ಬದುಕಬೇಕಾಗಿದೆಯೆಂದೂ ಅವರು ತಮ್ಮ ಪರಿಪಾವನವಾದ ಜೀವಿತಚರ್ಯೆಗಳ ಮುಖಾಂತರ ತೋರಿಸಿಕೊಟ್ಟರು. ಮತವಿಶ್ವಾಸ ಮತ್ತು ಮತಸಿದ್ಧಾಂತಗಳ ಅತಿ ಸಾರವತ್ತಾದ ಅಂಶ ಈ ತತ್ವವನ್ನು ಆಧರಿಸಿಕೊಂಡಿದೆಯೆಂದು ಪವಿತ್ರ ಖುರ್‌ಆನ್ ಹಲವು ಕಡೆಗಳಲ್ಲಿ ನಮಗೆ ಬೋಧಿಸುತ್ತದೆ. ಒಂದೆಡೆ ಅದು ಹೀಗೆ ಹೇಳುತ್ತದೆ:

> (ಪ್ರವಾದಿಯೇ) ಹೇಳು : ನಾನು ನಿಮ್ಮ ಹಾಗೆಯೇ ಒಬ್ಬ ಮನುಷ್ಯನು ಮಾತ್ರ: ನಿಮ್ಮ ದೈವ ಏಕದೇವನೆಂದು ನನಗೆ ದಿವ್ಯ ಪ್ರಕಟನೆಯ ಮೂಲಕ ತಿಳಿಸಲಾಗುತ್ತಿದೆ. (18 : 111)

ಈ ವಾಕ್ಯದಲ್ಲಿ ಮುಹಮ್ಮದ್ ಪೈಗಂಬರರಿಗೆ ಲಭಿಸುತ್ತಿದ್ದ ದಿವ್ಯ ಪ್ರಕಟನೆಯು ದೇವನು ಏಕನೆಂದಾಗಿತ್ತೆಂದು ಹೇಳಿದುದು ಪೈಗಂಬರರಿಗೆ ಲಭಿಸಿದ ದಿವ್ಯ ಪ್ರಕಟನೆಗಳಲ್ಲಿ ಈ ಒಂದು ಸಂಗತಿ ಮಾತ್ರವೇ ಅಡಕವಾಗಿದೆ ಎಂಬುದರಿಂದಲ್ಲ. ಪವಿತ್ರಖುರ್‌ಆನಿನಲ್ಲಿ ಸಾರಗರ್ಭಿತವಾದ ಇನ್ನೂ ಅನೇಕ ತತ್ವಗಳು ಮತ್ತು ಅನುಸರಿಸಲು ಯೋಗ್ಯವಾದ ಹಲವು ವಿಶಿಷ್ಟ ಉಪದೇಶಗಳು ಅಡಕವಾಗಿದ್ದರೂ ಮುಹಮ್ಮದ್ ಪೈಗಂಬರರಿಗೆ ಏಕದೇವ ತತ್ವದ ಕುರಿತು ದಿವ್ಯಬೋಧನೆ ಸಿದ್ಧಿಸುತ್ತಿತ್ತೆಂದು ಪ್ರಸ್ತುತ ಖುರ್‌ಆನ್ ವಾಕ್ಯದಲ್ಲಿ ಹೇಳಿರುವುದು ಇನ್ನಿತರ ಸಂಗತಿಗಳೆಲ್ಲಾ ಈ ಪರಮವಾದ ತತ್ವದಲ್ಲಿ ಅಂತರ್ಲೀನವಾಗಿರುವುದರಿಂದಲೂ ಅದು ಬಾಕಿಯವುಗಳಿಗೆಲ್ಲಾ ಕೇಂದ್ರವಾಗಿರುವುದರಿಂದಲೂ ಆಗಿದೆ. ಸರ್ವ ಧರ್ಮೋಪದೇಶಕರ ಪ್ರಬೋಧನೆಗಳಲ್ಲಿ ಪ್ರಧಾನವಾದುದು ಈ ತತ್ವಸಾರವೇ ಆಗಿದೆಯೆಂದು ಪವಿತ್ರ ಖುರ್‌ಆನ್ ಹೇಳಿಕೊಡುವುದು ಈ ರೀತಿಯಾಗಿದೆ:

> ಸತ್ಯದೇವನನ್ನು ಆರಾಧಿಸಿರಿ ಹಾಗೂ ಪೈಶಾಚಿಕತೆಯಿಂದ ದೂರವಿರಿ ಎಂಬ ಉಪದೇಶ ಸಹಿತ ಎಲ್ಲಾ ಸಮುದಾಯದಲ್ಲೂ ಪ್ರವಾದಿಯನ್ನು ನಾವು ನಿಯೋಗಿಸಿದ್ದೇವೆ (16 : 37).

ಇದರಿಂದ, ಸಕಲ ಮತಾಚಾರ್ಯರ ಪ್ರಬೋಧನೆಗಳ ಸಾರಾಂಶ, ಈ ಪ್ರಪಂಚದ ಕಾರಣಕರ್ತನೂ ನಿಯಾಮಕನೂ ಆಗಿ ಒಬ್ಬ ದೇವನಿದ್ದಾನೆಂದೂ ಅವನನ್ನು ನಂಬಬೇಕೆಂದೂ ಅವನನ್ನು ಪಡೆಯಲಿಕ್ಕಾಗಿ ಅತ್ಯಂತ ಪರಿಶ್ರಮಿಸ ಬೇಕಾಗಿದೆಯೆಂದೂ ಮನವರಿಕೆಯಾಗುತ್ತದೆ. ಇಂದು ಲೋಕದಲ್ಲಿ ಗೋಚರಿಸಲ್ಪಡುವ ಮತಗಳು ಅವುಗಳ ನಿಜವಾದ ಉಪದೇಶಗಳಿಂದ ಬಹಳಷ್ಟು ವ್ಯತಿಕ್ರಮಿಸಿ ಕಾಲಾಂತರದಲ್ಲಿ ಅವುಗಳಲ್ಲಿ ಅನೇಕ ಮಾರ್ಪಾಟುಗಳು ಉಂಟಾದುದರಿಂದ ದೈವತತ್ವದ ಕುರಿತಾದ ವಿವರಣೆಯಲ್ಲಿ ಕೆಲವು ವ್ಯತ್ಯಾಸಗಳು ಕಂಡು ಬರುವುದಾದರೂ ಈ ಪ್ರಪಂಚದ ಮೂಲ ಕಾರಣನಾದ ಒಬ್ಬ ದೇವನಿದ್ದಾನೆ ಹಾಗೂ ಅವನನ್ನು ಪಡೆಯುವುದೇ ಮಾನವ ಜೀವಿತದ ಉದ್ದೇಶ ಎಂಬ ಉಪದೇಶದಲ್ಲಿ ಒಂದು ಏಕರೂಪತೆ ಕಂಡು ಬರು

ತ್ತದೆ. ಮನುಷ್ಯ ವಂಶದ ಆರಂಭದಿಂದಲೇ ಅವರಿಗೆ ಈ ಪರಮ ಸತ್ಯದ ಕುರಿತು ಅರಿವು ನೀಡಲಾಗಿತ್ತೆಂದೂ ಪ್ರಾಕೃತಾವಸ್ಥೆಯಲ್ಲಿ ಜೀವಿಸುತ್ತಿದ್ದವರಿಗೆ ಸಹ ಒಂದು ಮಹಾ ಶಕ್ತಿಯ ಮೇಲೆ ವಿಶ್ವಾಸವಿತ್ತೆಂದೂ ತಿಳಿದು ಬರುತ್ತದೆ. ಇಂದು ನಾಗರಿಕತೆ ಪರಾಕಾಷ್ಠೆಗೆ ತಲಪಿ ಅದೊಂದು ಭ್ರಮೆಯಾಗಿ ಪರಿಣಮಿಸಿದ ಫಲವಾಗಿ ದೈವವಿಶ್ವಾಸ ಮತ್ತು ಧರ್ಮನಿಷ್ಠೆ ಅಗತ್ಯವಿಲ್ಲವೆಂದು ಒಂದು ಪಂಗಡ ಜನರು ಘೋಷಿಸಲು ತೊಡಗಿದ್ದರೂ ಅಧಿಕಾಂಶ ಜನರು ದೈವವಿಶ್ವಾಸಿಗಳಾಗಿಯೇ ಕಂಡು ಬರುವುದು ಮತಗಳೆಲ್ಲಾ ಈ ತತ್ವದ ಕುರಿತು ಏಕಕಂಠವಾಗಿ ಪ್ರಬೋಧಿಸುವುದರಿಂದಲೇ ಆಗಿದೆ.

ಆದರೆ, ಮತಗಳು ದೈವತತ್ವದ ಕುರಿತು ಬೋಧಿಸುವುದರಿಂದ ಮತಸ್ಥರೆಲ್ಲ ತದ್ವಿಶ್ವಾಸಿಗಳಾಗಿ ತೋರುವರಾದರೂ ಅವರು ಯಥಾರ್ಥವಾದ ಧರ್ಮೋಪದೇಶದಿಂದಲೂ ಭಕ್ತಿ ಮಾರ್ಗದಿಂದಲೂ ಅಗಲಿ ಹೋಗಿರುವುದರ ಫಲವಾಗಿ ದೈವವಿಶ್ವಾಸ ಅವರ ಹೃದಯಗಳನ್ನು ಸ್ಪರ್ಶಿಸಿರುವುದಾಗಿ ಗೋಚರಿಸುವುದಿಲ್ಲ. ದೇವನ ಗುಣಗಳ ಕುರಿತು ಗಂಭೀರವಾಗಿ ಉದ್ಘೋಷಿಸುವವರು ಅನೇಕರಿದ್ದರೂ ಆ ಸರ್ವವಲ್ಲಭನನ್ನು ಯಥಾರ್ಥವಾಗಿ ನಂಬಿ, ಆ ವಿಶ್ವಾಸವನ್ನು ಬುನಾದಿಯಾಗಿರಿಸಿ ಜೀವನ ನಡೆಸುವವರ ಸಂಖ್ಯೆ ಬಹಳ ಕಮ್ಮಿಯೆಂದು ಹೇಳಿದರೆ ಅದು ಸತ್ಯವಿರುದ್ಧವಲ್ಲ. ದೇವನಲ್ಲಿ ನಿಜವಾದ ವಿಶ್ವಾಸವಿಟ್ಟಿರುವವನಿಗೆ ತನ್ನ ಕರ್ತನ ಸೃಷ್ಟಿಗಳಾಗಿರುವ ಮನುಷ್ಯ ಸಹೋದರರನ್ನು ಪ್ರೀತಿಸದಿರಲಿಕ್ಕಾಗಲಿ, ಅವರಿಗೆ ತನ್ನಿಂದಾದ ಸಹಾಯೋಪಕಾರಗಳನ್ನು ಮಾಡದಿರಲಿಕ್ಕಾಗಲಿ ಸಾಧ್ಯವಾಗಲಿಕ್ಕಿಲ್ಲ. ಮಾನವರೆಲ್ಲ ಒಬ್ಬನೇ ದೇವನ ಸೃಷ್ಟಿಗಳೆಂದಾದರೆ, ಆ ಕರ್ತನನ್ನು ನಿಜವಾಗಿಯೂ ನಂಬುವವರಿಗೆ ಅವನ ಸೃಷ್ಟಿಗಳನ್ನು ದ್ವೇಷಿಸಲಿಕ್ಕೆ ಸಾಧ್ಯವಾಗಲಿಕ್ಕಿಲ್ಲವಷ್ಟೇ. ವಾಸ್ತವವಾಗಿ ಒಬ್ಬನಿಗೆ ದೈವವಿಶ್ವಾಸ ಇದ್ದರೆ–ಯಾರೋ ಹೇಳಿದ್ದನ್ನು ಕೇಳಿನ, ಅಥವಾ ಮಾತಾಪಿತರಿಂದ ಬಂದ ಪರಂಪರಾಗತ ವಿಶ್ವಾಸವಲ್ಲ; ಅನುಭವಸಿದ್ಧ ವಿಶ್ವಾಸ, ಎಂದರೆ ಸ್ಥೂಲವಸ್ತುಗಳನ್ನು ಇಂದ್ರಿಯಗಳಿಂದ ಗ್ರಹಿಸುವಾಗ ಉಂಟಾಗುವಷ್ಟರ ಮಟ್ಟಿನ ವಿಶ್ವಾಸವಾದರೂ ಇದ್ದರೆ– ಅದರ ಫಲ ಆತನ ಜೀವನದಲ್ಲಿ ಪ್ರತಿಬಿಂಬಿಸಿ ಕಾಣಿಸುತ್ತದೆ. ಹೀಗೆ ವಿಶ್ವಾಸವುಳ್ಳವನು ಸಮಸೃಷ್ಟಿಗಳನ್ನು ಪ್ರೀತಿಸುತ್ತಾ ಅವರ ಕ್ಷೇಮವನ್ನು ಕಾಂಕ್ಷಿಸುತ್ತಾ ಅವರೊಡನೆ ಅನುಕಂಪ ತೋರಿಸುತ್ತಾ ಇರಬೇಕಲ್ಲದೆ ತದ್ವಿರುದ್ಧವಾಗಿ ವರ್ತಿಸುವರೆ ಸಾಧ್ಯವಿಲ್ಲ. ಪುಣ್ಯಾತ್ಮರಾದ ಧರ್ಮೋಪದೇಶಕರು ಸಮಸೃಷ್ಟಿಗಳೊಡನೆ ಅಸಾಮಾನ್ಯವಾದ ಆಸಕ್ತಿ ತೋರಿಸುತ್ತಿದ್ದುದು ಅವರಿಗೆ ದೇವನೊಡನಿರುವ ದೃಢ ವಿಶ್ವಾಸ ಮತ್ತು ಪ್ರೀತಿಯ ಕಾರಣದಿಂದಲೇ ಆಗಿತ್ತು.

ಇಂದು ದೈವವಿಶ್ವಾಸಿಗಳೆಂದು ಅಭಿಮಾನಿಸುವವರಲ್ಲಿ ಎಷ್ಟು ಮಂದಿಗೆ ಈ ತರದ ವಿಶ್ವಾಸವಿದೆಯೆಂದೂ ಎಷ್ಟು ಮಂದಿ ಆ ವಿಶ್ವಾಸವನ್ನು ತಮ್ಮ ಜೀವಿತದಲ್ಲಿ ಸಜೀವವಾಗಿರಿಸಿದ್ದಾರೆಂದೂ ಪರಿಶೀಲಿಸುವುದಾದರೆ ಪರಿತಪಿಸದೆ ನಿರ್ವಾಹವಿಲ್ಲ. ದೇವನನ್ನು ನಂಬುವವರೆಂದು ಹೇಳಿಕೊಳ್ಳುವವರು ಅಸಂಖ್ಯಾತ. ಆದರೆ ನಿಜವಾಗಿಯೂ ಆ ಸರ್ವೇಶ್ವರನನ್ನು ನಂಬುವವರು ಬಹು ವಿರಳ. ಮನುಷ್ಯರು ಸ್ವಯಂ ದೈವವಿಶ್ವಾಸಿಗಳೆಂದು ವಾದಿಸುತ್ತಾರೆ. ಆದರೆ ಆ ವಿಶ್ವಾಸ ಅವರನ್ನು ಅಕ್ರಮ-ಅನ್ಯಾಯಗಳಿಂದ ದೂರವಿರಿಸಲು ಪರ್ಯಾಪ್ತವಾಗಿ ಕಾಣುವುದಿಲ್ಲ. ಅವರು ದೈವವಿಶ್ವಾಸಿಗಳೆಂದು ಹೇಳಿಕೊಳ್ಳುತ್ತಿದ್ದಾರೆ; ಆದರೆ ಕಳ್ಳತನ, ವಂಚನೆ, ವ್ಯಭಿಚಾರ, ಪರದ್ರೋಹ, ಅಕ್ರಮ, ಸ್ವಾರ್ಥತೆ, ಅಹಂಭಾವ ಮುಂತಾದ ನೀಚಕೃತ್ಯಗಳಲ್ಲೇ ಅವರು ಕಾಲ ಕಳೆಯುತ್ತಾರೆ. ಮನುಷ್ಯರು ದೈವವಿಶ್ವಾಸಿಗಳೆಂದು ಘೋಷಿಸುತ್ತಾರೆ; ಆದರೆ ಸರ್ವಶಕ್ತನಾದ ದೇವನ ಆಜ್ಞಾನುಸಾರ ಜೀವನವನ್ನು ಕ್ರಮೀಕರಿಸಬೇಕೆಂದೂ ಅವನ ಆಜ್ಞೆಗಳಿಗೆ ವಿರುದ್ಧವಾಗಿ ವರ್ತಿಸಬಾರದೆಂದೂ ಅವರಿಗೆ ಲೇಶಮಾತ್ರವಾದರೂ ಯೋಚನೆ ಇರುವುದಾಗಿ ಗೋಚರಿಸುವುದಿಲ್ಲ. ಮನುಷ್ಯರು ಸ್ವಯಂ ದೈವವಿಶ್ವಾಸಿಗಳೆಂದು ಹೇಳಿಕೊಳ್ಳುತ್ತಾರೆ; ಆದರೆ ಆ ವಿಶ್ವೈಕನಾಥನು ತಮ್ಮನ್ನು ಯಾತಕ್ಕಾಗಿ ಸೃಷ್ಟಿಸಿರುವನೆಂದು ತಿಳಿದು ಅದರ ಪ್ರಕಾರ ಅವರು ಜೀವನ ನಡೆಸುವುದಿಲ್ಲ; ಅವನ ಶಿಕ್ಷೆಯ ಕುರಿತು ಅವರು ಭಯಪಡುವುದಿಲ್ಲ. ಮನುಷ್ಯರು ದೈವವಿಶ್ವಾಸದ ಬಗ್ಗೆ ಸಾರುತ್ತಾರೆ; ಆದರೆ ಆ ಸರ್ವಾಂತರ್ಯಾಮಿಯ ಕುರಿತುಳ್ಳ ಸ್ಮರಣೆ ಮತ್ತು ಚಿಂತೆ ಅವರ ಹೃದಯಾಂತರಾಳದಲ್ಲಿ ಪ್ರವೇಶಿಸುವುದಿಲ್ಲ. ಅವರು ದೇವನಲ್ಲಿ ನಂಬಿಕೆಯುಳ್ಳವರೆಂದು ಉಚ್ಚ ಸ್ವರದಲ್ಲಿ ಹೇಳುತ್ತಾರೆ; ಆದರೆ ಆತ್ಮಾರ್ಥವಾಗಿ ಆ ಲೋಕರಕ್ಷಕನನ್ನು ಪ್ರೀತಿಸಿಕೊಂಡು ಅವನ ಮೇಲಿನ ಪ್ರೀತಿಯನ್ನು ತಮ್ಮ ಜೀವಿತ ಲಕ್ಷ್ಯವಾಗಿ ಭಾವಿಸುವುದಿಲ್ಲ. ಹೀಗೆ ಜೀವಿತದಲ್ಲಿ ಯಾವ ಪರಿವರ್ತನೆಯನ್ನಾಗಲಿ ಉಂಟು ಮಾಡಲು ಪರ್ಯಾಪ್ತವಲ್ಲದ, ಅಧರಗಳಲ್ಲಿ ಮಾತ್ರವಿರುವ, ಈ ವಿಶ್ವಾಸ ಎಂದಿಗೂ ಯಥಾರ್ಥವಾದ ದೈವವಿಶ್ವಾಸ

ವಾಗಿರಲಿಕ್ಕಿಲ್ಲ. ಒಂದು ಹುತ್ತದಲ್ಲಿ ಸರ್ಪವುಂಟೆಂದು ಗೊತ್ತಿದ್ದರೆ ಯಾರೂ ಅದರೊಳಗೆ ಕೈಹಾಕಲು ತಯಾರಾಗಲಿಕ್ಕಿಲ್ಲವಷ್ಟೇ. ಎಷ್ಟು ರುಚಿಕರವಾದ ಪಾನೀಯವಾಗಿದ್ದರೂ ಅದರಲ್ಲಿ ವಿಷ ಮಿಶ್ರವಾಗಿದೆಯೆಂದು ತಿಳಿದರೆ, ಅತಿಯಾದ ಬಾಯಾರಿಕೆಯಿಂದ ಬಳಲಿ ಬೆಂಡಾದವನು ಸಹ ಅದನ್ನು ಕುಡಿಯಲಿಕ್ಕೆ ಸಿದ್ಧನಾಗಲಿಕ್ಕಿಲ್ಲ. ಜನರಿಗೆ ತಿಳಿದು ಬಿಡುವುದೆಂಬ ಹೆದರಿಕೆಯಿದ್ದರೆ, ಒಬ್ಬ ಕಳ್ಳನು ಎಷ್ಟು ಬೆಲೆ ಬಾಳುವ ವಸ್ತುವನ್ನಾದರೂ ಸರಿ, ಅದನ್ನು ಕದಿಯಲಿಕ್ಕೆ ಉದ್ಯುಕ್ತನಾಗಲಾರ. ಓರ್ವ ಮೆಜಿಸ್ಟ್ರೇಟನ ಆಜ್ಞೆಯನ್ನು ಉಲ್ಲಂಘಿಸಿದ ಪಕ್ಷದಲ್ಲಿ ಲಘುವಾದೊಂದು ಶಿಕ್ಷೆಯನ್ನು ಅನುಭವಿಸಬೇಕಾಗುವುದೆಂದು ತಿಳಿದವನು ಆಜ್ಞಾಲಂಘನ ಮಾಡಲು ತಯಾರಾಗಲಾರ. ಹೀಗೆ ಸಾಮಾನ್ಯ ವಿಚಾರಗಳಲ್ಲಿ ಕೂಡ ಮನುಷ್ಯನಿಗೆ ವಿಶ್ವಾಸವಿದ್ದ ಪಕ್ಷದಲ್ಲಿ ಅದರ ಫಲ ಅವನ ಜೀವಿತದ ನಡೆವಳಿಕೆಗಳಲ್ಲಿ ಕಂಡುಬರುತ್ತದೆ. ಆದರೆ, ದೈವವಿಶ್ವಾಸಿಗಳೆಂದು ಹೇಳುವವರು ತಾವು ಸರ್ಪಕ್ಕೂ ಪಾಷಾಣಕ್ಕೂ ಮನುಷ್ಯರಿಗೂ ಹೆದರುವ ರೀತಿಯಲ್ಲಿ ಸರ್ವಶಕ್ತನೂ ಸರ್ವಾಧಿಕಾರಿಯೆಂದೂ ನಂಬುವ ದೇವನಿಗೆ ಹೆದರುವುದಿಲ್ಲ. ಅವರು ತಮಗೆ ಅಲ್ಪಮಾತ್ರ ಉಪಕಾರ ಮಾಡಲು ಶಕ್ತನಾದ ಒಬ್ಬ ಸಂಬಂಧಿಯನ್ನಾಗಲಿ, ಯಜಮಾನನನ್ನಾಗಲಿ, ಮಾತಾಪಿತರನ್ನಾಗಲಿ ಗೌರವಿಸುವಂತೆಯೂ ಪ್ರೀತಿಸುವಂತೆಯೂ ಸರ್ವದಾತನೂ ಸರ್ವಗುಣ ಸಂಪನ್ನನೂ ಆಗಿರುವ ದೇವನನ್ನು ಪ್ರೀತಿಸುವುದಿಲ್ಲ. ಇಂತಹವರಿಗೆ ದೈವವಿಶ್ವಾಸವುಂಟೆಂದು ಹೇಳುವುದು ಪೊಳ್ಳು ಮಾತಲ್ಲವೇ? ನಿಜವಾದ ರೀತಿಯಲ್ಲಿ ಒಬ್ಬನು ದೇವನಲ್ಲಿ ನಂಬಿಕೆಯಿಟ್ಟಿದ್ದರೆ, ಖಂಡಿತವಾಗಿಯೂ ಆ ವಿಶ್ವಾಸ ಅವನ ಜೀವಿತದಲ್ಲಿ ಗಣ್ಯವಾದೊಂದು ಪರಿವರ್ತನೆ ಉಂಟುಮಾಡುವುದು. ಆದುದರಿಂದ ದೈವವಿಶ್ವಾಸಿಗಳೆಂದು ಹೆಮ್ಮೆಪಡುವವರೆಲ್ಲಾ ತಮ್ಮ ಜೀವಿತದಲ್ಲಿ ಒಂದು ಪರಿವರ್ತನೆ ಉಂಟುಮಾಡಲು ಆ ವಿಶ್ವಾಸ ಸಾಧಕವಾಗಿದೆಯೇ ಎಂದು ನೋಡಬೇಕಾಗಿದೆ. ದೇವನನ್ನು ನಾವು ನಂಬುವುದು ಆ ಸರ್ವೇಶ್ವರನಿಗೆ ಆ ಮೂಲಕ ಏನಾದರೂ ಗುಣಮಾಡಬೇಕೆಂದಲ್ಲ. ನಾವು ಅವನನ್ನು ನಂಬುವುದಿಲ್ಲವಾದರೆ ಅವನಿಗೆ ಅದರಿಂದ ಯಾವುದೇ ದೋಷವುಂಟಾಗುವುದಿಲ್ಲ. "ನೀವೂ ಭೂಮಿಯಲ್ಲಿರುವ ಸಕಲರೂ ನಿಷೇಧಿಸುವುದಾದರೂ ದೇವನು ಸ್ವಯಂಪೂರ್ಣನೂ ಸ್ತುತ್ಯರ್ಹನೂ ಆಗಿದ್ದಾನೆ" (14:8) ಎಂದು ಆ ಸರ್ವೇಶ್ವರನು ಪವಿತ್ರ ಖುರ್‌ಆನಿನಲ್ಲಿ ಸೂಚಿಸಿದ್ದಾನೆ. ಆದುದರಿಂದ ನಾವು ದೇವನ ಅಸ್ತಿತ್ವವನ್ನು ನಿರಾಕರಿಸುವುದಾದರೆ ಅವನು ನಾಸ್ತಿಯಾಗುವುದಿಲ್ಲ; ದೇವನಿದ್ದಾನೆಂದು ಹೇಳುವುದರಿಂದ ಅವನಿಗೆ ವಿಶೇಷವಾದೊಂದು ಮಹಾತ್ಮ್ಯೆ ಉಂಟಾಗುವುದೂ ಇಲ್ಲ. ಒಟ್ಟಾರೆ, ದೈವವಿಶ್ವಾಸ ಎಲ್ಲಾ ವಿಶ್ವಾಸ ಸಿದ್ಧಾಂತಗಳ ಕೇಂದ್ರವೆಂದೂ ಆ ಸರ್ವಶಕ್ತನನ್ನು ನಂಬಬೇಕಾದುದು ಅತ್ಯಗತ್ಯವೆಂದೂ ಹೇಳುವುದು, ಈ ವಿಶ್ವಾಸದಿಂದ ನಮ್ಮಲ್ಲಿ ಬಹಳ ಪರಿಶುದ್ಧವಾದೊಂದು ಪರಿವರ್ತನೆ ಮತ್ತು ಆತ್ಮೋನ್ನತಿ ಉಂಟಾಗಬೇಕೆಂಬುದರಿಂದಾಗಿದೆ.

ದೈವವಿಶ್ವಾಸಿಗಳೆಂದು ಹೇಳಿಕೊಳ್ಳುವವರ ಸ್ಥಿತಿ ಈ ರೀತಿ ಇರುವಾಗ ಬೇರೆ ಕೆಲವರು ದೇವನಿಲ್ಲವೆಂದೂ ದೇವನಿದ್ದಾನೆಂದು ನಂಬಿ ಪ್ರಯೋಜನವೇನೂ ಇಲ್ಲವೆಂದೂ ಹೇಳುತ್ತಾರೆ. ಇವರು ತಮ್ಮ ಈ ವಾದಕ್ಕೆ ಒಂದು ಆಧಾರವಾಗಿ ಹೇಳುವುದು ದೈವವಿಶ್ವಾಸಿಗಳೆಂದು ಹೇಳುವವರ ಜೀವನ ಕ್ರಮದ ಕುರಿತಾಗಿದೆ. ಆದ್ದರಿಂದ ದೈವವಿಶ್ವಾಸಿಯಾಗಿದ್ದುಕೊಂಡು ಧರ್ಮವಿರುದ್ಧವಾಗಿ ಜೀವನ ನಡೆಸುವವರು ಯಥಾರ್ಥ ದೈವವಿಶ್ವಾಸಿಗಳೆನಿಸುವುದಿಲ್ಲ; ಮಾತ್ರವಲ್ಲ ಅವರು ದೈವಸತ್ತೆಯನ್ನು ನಿರಾಕರಿಸುವವರಿಗೆ ಹಾಗೆ ಮಾಡಲು ದಾರಿ ಮಾಡಿಕೊಡುವುದರಿಂದ ಒಂದು ರೀತಿಯಲ್ಲಿ ದೈವದೂಷಣ ಪಾತಕಕ್ಕೆ ಪಾತ್ರರಾಗುತ್ತಾರೆ. ಆದರೆ ದೈವವಿಶ್ವಾಸಿಗಳೆಂದು ಅಭಿಮಾನಿಸುವವರು ಸ್ವೇಚ್ಛೆಗಳಿಗೆ ಅಧೀನರಾಗಿ ಜೀವಿಸುವುದು ಅವರಿಗೆ ದೇವನೊಡನೆ ವಿಶ್ವಾಸವಿದೆಯೆಂಬುದಕ್ಕೆ ಸಾಕ್ಷ್ಯವಾಗದಿರುವಂತೆಯೇ ಅವರ ಅಂತಹ ಅಧಾರ್ಮಿಕ ಜೀವಿತವು ದೇವನಿಲ್ಲವೆಂಬುದಕ್ಕೂ ದೈವವಿಶ್ವಾಸ ನಿಷ್ಪ್ರಯೋಜಕವೆಂಬುದಕ್ಕೂ ಸಾಕ್ಷ್ಯವಾಗುವುದಿಲ್ಲ. ಶಿಕ್ಷಾರಕ್ಷೆ ನೀಡಲು ಶಕ್ತಿಯೂ ಅಧಿಕಾರವೂ ಉಳ್ಳ ಒಬ್ಬ ಸರ್ವವಲ್ಲಭನಿದ್ದಾನೆಂಬ ವಿಶ್ವಾಸ ಎಂದಿಗೂ ಪಾಪಮಾಡಲು ಪ್ರೇರಕವಾಗಲಿಕ್ಕಿಲ್ಲ. ಬದಲಾಗಿ, ಅದು ಪಾಪದಿಂದ ಅಗಲಿರಲಿಕ್ಕೆ ಹೇತುವಾಗುವುದು. ಅದೇ ಪ್ರಕಾರವೇ ಸರ್ವಾಧಿಕಾರಿ ಮತ್ತು ಸರ್ವಶಕ್ತನಾದ ಒಬ್ಬ ದೇವನಿದ್ದಾನೆಂಬ ವಿಶ್ವಾಸವಲ್ಲ, ಅವನೊಡನೆ ಯಥಾರ್ಥವಾದ ಭಕ್ತಿವಿಶ್ವಾಸವಿಲ್ಲದಿರುವಿಕೆ ಮನುಷ್ಯನಿಗೆ ಪಾಪಮಾಡಲು ಧೈರ್ಯ ನೀಡುತ್ತದೆ. ಆದುದರಿಂದ ಧರ್ಮವಿಶ್ವಾಸಿಗಳೆಂದು ಸ್ವಯಂ ವಾದಿಸುವವರ ಧರ್ಮವಿರುದ್ಧ ಜೀವಿತ ದೇವನಿಲ್ಲವೆಂಬುದಕ್ಕೂ ಅವನನ್ನು ನಂಬುವುದು ನಿಷ್ಪ್ರಯೋಜಕವೆಂಬುದಕ್ಕೂ ಒಂದು ಸಾಕ್ಷಿಯೆಂದು ನಾಸ್ತಿಕವಾದಿಗಳು

ಹೇಳುವುದಾದರೆ, ಅದು ವೈಚಾರಿಕವೆನಿಸುವುದಿಲ್ಲ.

ಲೋಕದಲ್ಲಿ ಸದಾ ಧಾರ್ಮಿಕತೆಯನ್ನು ಅದ್ಭುತಕರವಾದ ರೀತಿಯಲ್ಲಿ ಜೀವಂತವಾಗಿ ತೋರಿಸಿದ್ದೂ ಮಹತ್ತಾದೊಂದು ಧಾರ್ಮಿಕ ಪರಿವರ್ತನೆ ಉಂಟುಮಾಡಿ ತೋರಿಸಿದ್ದೂ ದೈವವಿಶ್ವಾಸಿಗಳೇ ಆಗಿದ್ದಾರೆ. ಪ್ರವಾದಿಗಳಿಗೂ ಆಧ್ಯಾತ್ಮಿಕ ಗುರುಗಳಿಗೂ ಲೋಕದಲ್ಲಿ ಉಂಟುಮಾಡಲು ಸಾಧ್ಯವಾದ ಮಾರ್ಪಾಟುಗಳೂ ಸುಧಾರಣೆಗಳೂ ತತ್ವಚಿಂತಕರಿಗಾಗಲಿ, ವೈಜ್ಞಾನಿಕ ಸಂಶೋಧಕರಿಗಾಗಲಿ, ರಾಜಕೀಯ ಮುತ್ಸದ್ದಿಗಳಿಗಾಗಲಿ ಉಂಟುಮಾಡಲು ಸಾಧ್ಯವಾಗಲಿಲ್ಲ ; ಪುಣಾತ್ಮರಾದ ಆ ಗುರುವರ್ಯರುಗಳ ಮುಖಾಂತರ ಲೋಕ ಕಂಡ ಆಧ್ಯಾತ್ಮಿಕ ಶಕ್ತಿಯನ್ನು ಮೇಲೆ ಹೇಳಿದ ಇನ್ನಿತರರ ಮೂಲಕ ಲೋಕ ಕಾಣಲಿಲ್ಲ. ಧಾರ್ಮಿಕ ಪ್ರಜ್ಞೆ ಬಹಳ ಮಂದವಾಗಿರುವ ಈ ಕಾಲದಲ್ಲಿ ಕೂಡ ಕೋಟಿಗಟ್ಟಲೆ ಜನರ ಹೃದಯಗಳನ್ನು ಆಳಿಕೊಂಡಿರುವುದು ದೈವತತ್ವ ಪ್ರಬೋಧಕರಾದ ಮತಾಚಾರ್ಯರುಗಳೇ ಆಗಿದ್ದಾರೆ. ಎಷ್ಟರ ಮಟ್ಟಿಗೆ ಒಬ್ಬನಿಗೆ ದೇವನೊಡನೆ ಭಕ್ತಿ ವಿಶ್ವಾಸಗಳು ತುಂಬಿಕೊಂಡಿರುವುದೋ ಅಷ್ಟರ ಮಟ್ಟಿಗೆ ಆತನ ಜೀವನದಲ್ಲಿ ಪವಿತ್ರವಾದೊಂದು ಪರಿವರ್ತನೆ ಉಂಟಾಗುವುದೆಂಬುದು ನಿರಾಕರಿಸಲಾಗದ ಪರಮಾರ್ಥವಾಗಿದೆ. ಆದುದರಿಂದ ದೈವವಿಶ್ವಾಸವನ್ನು ಮಾಮೂಲಿಯಾಗಿ ಭಾವಿಸಿಕೊಂಡಿರುವವರ ಜೀವಿತವನ್ನು ಆಧಾರವಾಗಿರಿಸಿ ದೇವನಿಲ್ಲವೆಂದು ನಿರೀಶ್ವರವಾದಿಗಳು ಊಹಿಸುವುದಾದರೆ ಅದು ಸ್ವೀಕಾರಾರ್ಹವಲ್ಲ. ಏಕೆಂದರೆ ಒಂದು ವಿಷಯದ ಕುರಿತು ಯಥಾರ್ಥವಾದ ವಿಶ್ವಾಸವು ಆ ವಿಶ್ವಾಸಕ್ಕೆ ವಿರುದ್ಧವಾಗಿ ವರ್ತಿಸುವರೆ ಹೇತುವಾಗುತ್ತದೆಂದು ಹೇಳುವುದು ಅವೈಚಾರಿಕವಾಗಿದೆ. ಮಾತ್ರವಲ್ಲ, ದೈವಿಕ ತತ್ವಗಳನ್ನು ಶಕ್ತಿಯುತವಾಗಿ ಪ್ರಬೋಧಿಸಿದ ಆಧ್ಯಾತ್ಮಿಕ ಗುರುಗಳೂ ಅವರ ಅನುಯಾಯಿಗಳೂ ನಾಸ್ತಿಕವಾದಿಗಳ ಈ ಊಹೆ ಸತ್ಯವಿರುದ್ಧವೆಂದು ಎಲ್ಲ ಕಾಲದಲ್ಲೂ ಸಾಬೀತುಪಡಿಸಿದ್ದಾರೆ.

ದೇವನು ಮಾಂಸಚಕ್ಷಸ್ಸುಗಳಿಗೆ ಗೋಚರಿಸುವುದಿಲ್ಲವೆಂಬುದು ಅವನ ಅಸ್ತಿತ್ವವನ್ನು ನಿರಾಕರಿಸುವುದಕ್ಕೆ ಒಂದು ಆಧಾರವಾಗಿ ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ದೃಷ್ಟಿಗೆ ಗೋಚರಿಸುವನಾದರೆ ಅವನು ಸಹ ವೃಕ್ಷಶಿಲಾದಿಗಳಂತೆ ಸ್ಥೂಲವಸ್ತುವಾಗುವನಲ್ಲದೆ ದೇವನಾಗುವುದಿಲ್ಲ. ದೇವನು ಅತಿಸೂಕ್ಷ್ಮನೂ ಸರ್ವಾಂತರ್ಯಾಮಿಯೂ ಆಗಿರುವಾಗ ಸ್ಥೂಲದೃಷ್ಟಿಗೆ ಗೋಚರಿಸಲಾರನಷ್ಟೆ. ಆದರೆ ವಿಚಾರವಂತ ಮನುಷ್ಯನು ಬಾಹ್ಯದೃಷ್ಟಿಗೆ ಕಾಣಿಸದವುಗಳ ಕುರಿತು ಮಾತ್ರವಲ್ಲ, ಪಂಚೇಂದ್ರಿಗಳಿಗೆ ಯಾವುದಕ್ಕೂ ಅನುಭವವಾಗದ ಎಷ್ಟೋ ಸಂಗತಿಗಳ ಇರುವಿಕೆಯನ್ನು ಒಪ್ಪುತ್ತಾನೆ. ಅತಿ ಸೂಕ್ಷ್ಮವಾದ ಕೆಲವು ವಸ್ತುಗಳ ಕುರಿತು ನಾವು ತಿಳಿಯುವುದು ಬಾಹ್ಯೇಂದ್ರಿಯಗಳ ಮೂಲಕವಲ್ಲ; ಅವುಗಳ ಗುಣ ವಿಶೇಷಗಳ ಮೂಲಕವಾಗಿದೆ. ದೈವಾನುರಾಗದಲ್ಲಿ ಆತ್ಮಾರ್ಪಣೆ ಮಾಡಿ ಅವನನ್ನು ಗಳಿಸಲಿಕ್ಕಾಗಿ ತೀವ್ರ ಯತ್ನ ಮಾಡಿದ ಸತ್ಯಸಂಧರೂ ಜ್ಞಾನಿಗಳೂ ಆದ ಮಹಾತ್ಮರಿಗೆ ದೇವನನ್ನು ಅವನ ಪ್ರಭಾವಗಳು ಮತ್ತು ಮಹಿಮಾವಿಲಾಸಗಳ ಮೂಲಕ ಅರಿಯುವರೆ ಸಾಧ್ಯವಾಗಿ ಭೌತವಸ್ತುಗಳ ಕುರಿತು ಇಂದ್ರಿಯಗಳಿಗೆ ಉಂಟುಮಾಡಲು ಸಾಧ್ಯವಾಗುವುದಕ್ಕಿಂತ ಸುನಿಶ್ಚಿತವಾದೊಂದು ಅನುಭವಜ್ಞಾನ ಅವನ ಅಸ್ತಿತ್ವದ ಕುರಿತು ಉಂಟಾಗಿ ಅವರು ಆ ಸಂಗತಿಯ ಕುರಿತು ಸಾಕ್ಷ್ಯ ವಹಿಸಿದ್ದಾರೆ. ಸತ್ಯಸಂಧರಾದ ಅನೇಕ ಮಹಾಪುರುಷರ ಇಂತಹ ಅನುಭವಸಿದ್ಧ ಸಾಕ್ಷ್ಯಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ತಿಳುವಳಿಕೆಯಿಲ್ಲದೆ ಲಕ್ಷಗಟ್ಟಲೆ ಜನರು ಒಂದು ಸಂಗತಿಯ ಇರುವಿಕೆಯನ್ನು ನಿರಾಕರಿಸುವರಾದರೆ ಅದು ಆ ಸಂಗತಿ ಇಲ್ಲವೆಂಬುದಕ್ಕೆ ಸಾಕ್ಷ್ಯವಾಗುವುದಿಲ್ಲ. ಆದರೆ ಸತ್ಯಸಂಧರಾದ ಈರ್ವರು ಆ ಸಂಗತಿಯ ಕುರಿತು ಅವರಿಗುಂಟಾದ ಅನುಭವವನ್ನು ಪ್ರಸ್ತಾವಿಸುವ ಪಕ್ಷದಲ್ಲಿ ಅದು ಸ್ವೀಕಾರಾರ್ಹವಾಗುತ್ತದೆ. ದೈವಾಸ್ತಿತ್ವವನ್ನು ಅಲ್ಲಗಳೆಯುವವರು ಅದಕ್ಕೆ ಆಧಾರವಾಗಿ ಹೇಳುವುದು ಅವನ ಕುರಿತು ತಮಗೆ ಅರಿವುಂಟಾಗಲಿಲ್ಲವೆಂದಾಗಿದೆ. ಮಾತ್ರವಿಲ್ಲ, ಅವರು ದೇವನನ್ನು ಗಳಿಸಲಿಕ್ಕಾಗಿ ಆತ್ಮಾರ್ಥವಾಗಿ ತೀವ್ರ ಯತ್ನ ಮಾಡಲೂ ಇಲ್ಲ. ಆದರೆ ದೇವನಿದ್ದಾನೆಂದೂ ಅವನನ್ನು ತಾವು ಗಳಿಸಿರುವೆವೆಂದೂ ಹೇಳುವವರಾದರೋ ತಮ್ಮ ಜೀವಿತವನ್ನು ಸಂಪೂರ್ಣವಾಗಿ ದೈವಮಾರ್ಗದಲ್ಲಿ ಅರ್ಪಿಸಿದವರಾಗಿದ್ದಾರೆ. ಸಸ್ಯಶಾಸ್ತ್ರದ ಗಂಧಗಾಳಿ ತಿಳಿಯದ ಜನಕೋಟಿಗಳು ಸಸ್ಯಗಳಿಗೆ ಜೀವವಿಲ್ಲವೆಂದು ಹೇಳುತ್ತಾರೆ ಎಂಬುದರಿಂದ ಅದು ಸ್ವೀಕಾರ ಯೋಗ್ಯವಾದ ಒಂದು ತತ್ವವೆಂದಾಗುವುದಿಲ್ಲ. ಆದರೆ ಸಸ್ಯಗಳಿಗೆ ಜೀವವುಂಟೆಂದು ಡಾ। ಬೋಸ್ ಹೇಳುವಾಗ ಅದು ಅಂಗೀಕಾರಾರ್ಹವಾಗುತ್ತದೆ. ಏಕೆಂದರೆ, ಅವರು ಆ ವಿಷಯದಲ್ಲಿ ತನ್ನ ಜೀವನದ ಬಹುಪಾಲನ್ನು ವ್ಯಯಿಸಿ, ಸಂಶೋಧನೆ ನಡೆಸಿ, ಆ ಪರಮಾರ್ಥವನ್ನು ಗ್ರಹಿಸಿದ ವ್ಯಕ್ತಿಯಾಗಿದ್ದಾರೆ. ಹೀಗೆ

ಪ್ರತಿಯೊಂದು ವಿಷಯದಲ್ಲಿ ತೀವ್ರ ಯತ್ನ ಮಾಡಿ ನಿಜ ಸಂಗತಿಯನ್ನು ಗ್ರಹಿಸಿದವರ ಸಾಕ್ಷ್ಯವು ಆ ವಿಷಯದ ಬಗ್ಗೆ ಸರಿಯಾದ ಪುರಾವೆಯಾಗುತ್ತದೆ; ಹಾಗಲ್ಲದೆ ಆ ಕಾರ್ಯದಲ್ಲಿ ಪ್ರಯತ್ನವೇನೂ ಮಾಡದಿರುವವರ ಹೇಳಿಕೆಗಳಲ್ಲ; ಅದೇ ಪ್ರಕಾರ ದೈವಸಾಮಿಪ್ಯವನ್ನು ಗಳಿಸಲಿಕ್ಕಾಗಿ ಪರಿಶ್ರಮವೇನೂ ಮಾಡದೆ ಪ್ರಾಪಂಚಿಕ ವಿಷಯಗಳಲ್ಲಿ ಮಾತ್ರ ಮುಳುಗಿರುವವರಿಗೆ ದೈವಾಸ್ತಿತ್ವದ ಕುರಿತುಳ್ಳ ಅಜ್ಞಾನ ಎಂದಿಗೂ ಅಂಗೀಕಾರಾರ್ಹವಾದ ಸಾಕ್ಷ್ಯವಾಗುವುದಿಲ್ಲ. ಒಟ್ಟಾರೆ, ಪ್ರತಿಯೊಂದು ಕಾಲದಲ್ಲಿಯೂ ದೇವನನ್ನು ಪಡೆಯಲಿಕ್ಕಾಗಿ ಅತ್ಯಂತ ಪ್ರಯತ್ನ ಪಡುತ್ತಾ ಅವನ ಮೇಲಿನ ಪ್ರೀತಿಯಲ್ಲಿ ಮುಳುಗಿದವರ ಅನುಭವಸಿದ್ಧ ಸಾಕ್ಷ್ಯ ದೇವನಿದ್ದಾನೆಂಬುದಕ್ಕೆ ಯೋಗ್ಯ ಪ್ರಮಾಣವಾಗಿದೆ.

ಇದೇ ಪ್ರಕಾರ ಅದ್ಭುತಕರವಾದ ವ್ಯವಸ್ಥೆಯಿಂದಲೂ ಪರಿಪೂರ್ಣವಾದ ನಿಯಮಕ್ಕನುಗುಣವಾಗಿಯೂ ಚಲಿಸುತ್ತಿರುವ ಈ ಬ್ರಹ್ಮಾಂಡವು, ಅದಕ್ಕೆ ಅತ್ಯಂತ ಜ್ಞಾನಿಯೂ ಅತಿ ಬುದ್ಧಿಶಾಲಿಯೂ ಆದ ಒಬ್ಬ ನಿಯಾಮಕನಿದ್ದಾನೆಂದು ಸಾರುತ್ತದೆ. ದೇವನು ಬಾಹ್ಯೇಂದ್ರಿಯಗಳಿಗೆ ಅನುಭವವಾಗದಿರುವುದರಿಂದ ಅವನನ್ನು ನಂಬುವುದು ಅವಿವೇಕತನವೆಂದು ಹೇಳುವುದಾದರೆ, ಅತ್ಯಂತ ವ್ಯವಸ್ಥಿತವಾದ ಕ್ರಮದಲ್ಲಿರುವ ಈ ಪ್ರಪಂಚಕ್ಕೆ ಬುದ್ಧಿಶಾಲಿಯಾದ ಓರ್ವ ನಿಯಾಮಕನಿಲ್ಲವೆಂದು ಭಾವಿಸುವುದು ಅದಕ್ಕಿಂತ ಹೆಚ್ಚು ಅವಿವೇಕತನವಾಗಿದೆ. ಪ್ರಪಂಚದಲ್ಲಿರುವ ಪ್ರತಿಯೊಂದು ವಸ್ತುವೂ ಪ್ರತ್ಯೇಕ ನಿಯಮಕ್ಕನುಸಾರವಾಗಿಯೂ ಪ್ರತ್ಯೇಕ ಸೀಮೆಯೊಳಗೆ ಸೀಮಿತ ಶಕ್ತಿಯೊಂದಿಗೂ ಹಲವಿಧ ಪರಿವರ್ತನೆಗೂ ಮಾರ್ಪಾಟಿಗೂ ನಾಶಕ್ಕೂ ಗುರಿಯಾಗಿಯೂ ಕಾಣುತ್ತೇವೆ. ಈ ಅವಸ್ಥೆಗಳೆಲ್ಲಾ ಸರ್ವ ವಸ್ತುಗಳಿಗೂ ಒಬ್ಬ ಕಾರಣಕರ್ತನಿದ್ದಾನೆಂಬುದಕ್ಕೆ ಸಾಕಷ್ಟು ಪುರಾವೆಗಳಾಗಿವೆ. ಹೀಗೆ ಚಿಂತಾಶೀಲರಿಗೆ ಈ ಬ್ರಹ್ಮಾಂಡವೇ ಅದರ ನಿರ್ಮಾಪಕನಾಗಿ ಒಬ್ಬ ದೇವನಿದ್ದಾನೆಂಬುದಕ್ಕೆ ಪ್ರಥಮ ಸಾಕ್ಷ್ಯವಾಗಿದೆ. ಒಂದು ಮೂಲ ಕಾರಣವಿಲ್ಲದೆ ಈ ಪ್ರಪಂಚ ಉಂಟಾಗಲಿಕ್ಕೆ ಸಾಧ್ಯವಿಲ್ಲವೆಂದು ಹೇಳುವಾಗ, ಹಾಗಾದರೆ ಆ ದೇವನನ್ನು ಯಾರು ಸೃಷ್ಟಿಸಿದರೆಂದೂ ಅವನ ಸೃಷ್ಟಿಗೆ ಕಾರಣ ಯಾರೆಂದೂ ಕೆಲವರು ಪ್ರಶ್ನಿಸಬಹುದು. ಆದರೆ ಪ್ರಪಂಚದ ಸ್ಥಿತಿಯೇ ಅದಕ್ಕೊಬ್ಬ ನಿಯಾಮಕನಿದ್ದಾನೆಂದು ಸಾರುತ್ತದೆ. ಸಕಲ ವಸ್ತುಗಳ ಆದಿಕಾರಣನಾದ ಆ ಜಗನ್ನಿಯಾಮಕನು ಅತ್ಯಂತ ಜ್ಞಾನಿ ಮತ್ತು ಅತಿ ಬುದ್ಧಿಶಾಲಿಯಾಗಿರಬೇಕೆಂದು ಸಹ ಅದು ತಿಳಿಸಿಕೊಡುತ್ತದೆ. ಹೀಗೆ ಈ ಕಾರ್ಯಕಾರಣ ಸಂಬಂಧ ಒಂದೆಡೆಯಲ್ಲಿ ಕೊನೆಗೊಳ್ಳದಿದ್ದರೆ ಮೂಲ ಕಾರಣವೆಂಬುದು ಇಲ್ಲವೆಂದು ಹೇಳಬೇಕಾದೀತು. ಹಾಗಿರುವಾಗ ಅದರ ಕಾರ್ಯವಾಗಿರುವ ಈ ಪ್ರಪಂಚ ಸಹ ಇಲ್ಲವೆಂದು ಹೇಳಬೇಕಾದೀತು. ದೇವನೆಂದರೆ ಸಕಲ ವಸ್ತುಗಳ ಮೂಲ ಕಾರಣನೆಂದೂ ಯಾರದೇ ಕಾರ್ಯವಲ್ಲವೆಂದೂ ಆಗಿರಲಿಕ್ಕೇ ಸಾಧ್ಯ. ಆಗ ಅವನ ಕಾರಣಕರ್ತ ಯಾರೆಂಬ ಪ್ರಶ್ನೆ ಅಸಂಗತವಾಗುತ್ತದೆ. ಆದರೆ ಪ್ರಪಂಚದ ಸ್ಥಿತಿ, ಅದರಲ್ಲಿ ಗೋಚರಿಸುವ ವೈವಿಧ್ಯತೆ ಹಾಗೂ ಅದರಲ್ಲೇ ಅಂತರ್ಗತವಾಗಿರುವ ಏಕತೆ, ಅದಕ್ಕೆ ಒಬ್ಬ ಕರ್ತನಿರಬೇಕೆಂದು ಹೇಳಿಕೊಡುತ್ತದೆ. ಈ ಪ್ರಪಂಚದ ಮೂಲಕಾರಣ ಪರಮಾಣುವೆಂದು ಹೇಳುವವರಿಗೆ ಅದೇನೆಂದೂ ಅದು ಹೇಗೆ ಉದ್ಭವಿಸಿತೆಂದೂ ಯಾವಾಗ ಉಂಟಾಯಿತೆಂದೂ ಈ ರೀತಿಯ ಪರಿವರ್ತನೆಗಳಿಗೆ ಒಳಪಡಲಿಕ್ಕೂ ವಿಭಿನ್ನ ನಿಯಮಗಳಿಗನುಸಾರವಾಗಿ ವರ್ತಿಸಲಿಕ್ಕೂ ಅದಕ್ಕೆ ಶಕ್ತಿ ಹೇಗೆ ಸಿದ್ಧಿಸಿತೆಂದೂ ಯಾವುದೇ ತಿಳುವಳಿಕೆಯಿಲ್ಲ. ಆದರೂ ಸಹ ಪರಮಾಣುವಾಗಿದೆ ಪ್ರಪಂಚದ ಮೂಲಕಾರಣವೆಂದು ಅವರು ಘೋಷಿಸುತ್ತಾರೆ. ಆದರೆ ಈ ವಿವೇಕಶೂನ್ಯವಾದ ಪರಮಾಣು ಮೂಲಕಾರಣವೆಂದು ನಂಬುವವರಿಗೆ ಈ ಬ್ರಹ್ಮಾಂಡದ ಅದ್ಭುತಕರವಾದ ರಚನೆಯನ್ನೂ ಅದರ ನಿಯಮ ವ್ಯವಸ್ಥೆಯನ್ನೂ ಮುಂದಿಟ್ಟು, ಅತ್ಯಂತ ಬುದ್ಧಿಶಾಲಿಯೂ ಅತಿ ಜ್ಞಾನಿಯೂ ಆಗಿರುವ ಓರ್ವನು ಅದರ ನಿರ್ಮಾಪಕ ಮತ್ತು ನಿಯಾಮಕನೆಂದು ಹೇಳುವುದು ಹೆಚ್ಚು ವಿವೇಕಯುತವೆಂದು ಮನಗಾಣಬಹುದು.

ವಾಸ್ತವದಲ್ಲಿ ಪಂಚೇಂದ್ರಿಯಗಳಿಗೆ ವಿಷಯಗ್ರಹಣವಾಗದಿದ್ದುದರಿಂದಲೂ ದೇವನಿದ್ದಾನೆಂದು ಹೇಳುವವರಲ್ಲಿ ಅಧಿಕಾಂಶ ಜನರ ಜೀವಿತದಲ್ಲಿ ದೊಡ್ಡ ಪರಿವರ್ತನೆಯುಂಟಾಗಿ ಗೋಚರಿಸದಿದ್ದುದರಿಂದಲೂ ದೇವನಿಲ್ಲವೆಂದು ಹೇಳುವುದು ನ್ಯಾಯಯುತವೆನಿಸುವುದಿಲ್ಲ. ಅದೇ ಪ್ರಕಾರ ಧರ್ಮವಿರುದ್ಧವಾಗಿ ಜೀವನ ನಡೆಸುವವರಿಗೆ ನಿಜವಾಗಿ ದೈವವಿಶ್ವಾಸವುಂಟೆಂದು ಹೇಳುವುದು ಸಹ ನ್ಯಾಯೋಚಿತವೆನಿಸಲ್ಪಡದು. ಒಟ್ಟಿನಲ್ಲಿ, ಸರ್ವ ಮತಗಳ ಮೂಲತತ್ವವೂ ಸರ್ವ ಸತ್ಯಗಳ ಕೇಂದ್ರವೂ ಆಗಿರುವ ದೈವವಿಶ್ವಾಸ ಇಂದು

# ★ ಇಸ್ಲಾಂ ಮತ್ತು ವಿಜ್ಞಾನ ★

ಡಾ। ಲೋರಾ ವಿ. ವೇಗ್ಲಿಯೇರಿ

ಮುಹಮ್ಮದ್ ಅಬ್ದುಹು ಹೇಳುವಂತೆ ವೈಚಾರಿಕ ಚಿಂತನೆ ಇಸ್ಲಾಮಿನ ತಳಹದಿಯಾಗಿದೆ. ನಾವು ನೋಡಿದಂತೆ ಇಸ್ಲಾಂ ಧರ್ಮ ಮನುಷ್ಯನಲ್ಲಿ ಏಕದೈವ ವಿಶ್ವಾಸವನ್ನು ಎಚ್ಚರಗೊಳಿಸಲು ಚಮತ್ಕಾರಗಳನ್ನು (ಪವಾಡ ಕೃತ್ಯಗಳನ್ನು) ಉಪಯೋಗಿಸುವುದಿಲ್ಲ. ಅದು ಮನುಷ್ಯನಲ್ಲಿ ಸಾಮಾನ್ಯವಾಗಿರುವ ವೈಚಾರಿಕ ಶಕ್ತಿಯನ್ನು ಜಾಗೃತಗೊಳಿಸುತ್ತದೆ. ಅನಂತರ ಪ್ರವಾದಿಗಳಲ್ಲಿ ವಿಶ್ವಾಸವನ್ನುಂಟು ಮಾಡಲು ಮತ್ತು ದೈವಿಕ ನಿರ್ದೇಶಗಳಲ್ಲಿ ವಿಶ್ವಾಸ ಬರುವಂತೆ ಮಾಡಲು ಖುರ್‌ಆನ್ ಎಂಬ ಮಹತ್ತಾದ ದಿವ್ಯದ್ಭುತವನ್ನು ಇಸ್ಲಾಮ್ ಜನರ ಮುಂದಿರಿಸುತ್ತದೆ. (ಅದು ತಿಳಿಯಲು ಸುಲಭವಾದ ವಿಜ್ಞಾನವೂ ಅರ್ಥವಾಗುವಂತಹ ದೈವಿಕ ವಾಣಿಯೂ ಆಗಿದೆ.) ಇಸ್ಲಾಮ್ ಧರ್ಮವನ್ನು ಬುದ್ಧಿಯನ್ನುಪಯೋಗಿಸದೆ ಹಾಗೆಯೇ ನಂಬಬೇಕೆಂದು ಖುರ್‌ಆನ್ ಪ್ರತೀಕ್ಷಿಸುವುದಿಲ್ಲ. ಖುರ್‌ಆನ್ ತನ್ನನ್ನು ಅರಿತುಕೊಳ್ಳಲು ಆಹ್ವಾನ ನೀಡುತ್ತದೆ. ಅದರ ಕುರಿತು ಮನುಷ್ಯನ ಬುದ್ಧಿ ಮತ್ತು ವಿವೇಕದ ಪರಿಧಿಯೊಳಗೆ ಆಲೋಚಿಸಲು ಆಮಂತ್ರಿಸುತ್ತದೆ. ಅದು ಅದಕ್ಕೆ ಸಮಾನವಾದ ಇನ್ನೊಂದು ಕೃತಿಯನ್ನು ಕಂಡುಹಿಡಿದು ಅದರ ಶ್ರೇಷ್ಠತೆಯನ್ನು ಅಲ್ಲಗಳೆಯುವ ಒಂದು ಮಾರ್ಗವನ್ನು ಕಂಡುಹಿಡಿಯುವಂತೆ ಪಂಥಾಹ್ವಾನ ನೀಡುತ್ತದೆ. (ಪವಿತ್ರ ಖುರ್‌ಆನ್ 2 : 24 ನೋಡಿರಿ.)

ವೈಚಾರಿಕತೆಗೆ ಇಸ್ಲಾಮಿನಲ್ಲಿರುವ ಸ್ಥಾನ ಎಷ್ಟರ ಮಟ್ಟಿಗೆ ಇದೆಯೆಂದರೆ ಹೆಚ್ಚಿನ ಮುಸ್ಲಿಮರ ಅಭಿಪ್ರಾಯದ ಪ್ರಕಾರ (ನಾನು ಮುಹಮ್ಮದ್ ಅಬ್ದುಹುರವರ ಅಭಿಪ್ರಾಯಗಳನ್ನು ಇಲ್ಲಿ ನೀಡುತ್ತಾ ಇದ್ದೇನೆ.) ಪೈಗಂಬರರದೆಂದು ಹೇಳಲಾಗುವ ಒಂದು ವಚನ ಮತ್ತು ಸುವಿಚಾರಕ್ಕೆ ಪರಸ್ಪರ ವಿರುದ್ಧ ಕಂಡುಬಂದರೆ ಆ ಸಂದರ್ಭದಲ್ಲಿ ಸುವಿಚಾರಕ್ಕೆ ಮನ್ನಣೆಯಿತ್ತು ಪೈಗಂಬರರದೆಂದು ಹೇಳಲಾದ ವಚನವನ್ನು ಕೃತ್ರಿಮವೆಂದು ತಳ್ಳಿಹಾಕಬೇಕಾಗಿದೆ. ಯಥಾರ್ಥವಾಗಿ ಅನುಸರಿಸಲು ಕೇವಲ ಎರಡೇ ಮಾರ್ಗಗಳಿವೆ: ಒಂದೋ ಆ ವಚನ ನಿರೂಪಿಸಲ್ಪಟ್ಟ ರೀತಿ ಅವ್ಯಕ್ತವೆಂದು ಪರಿಗಣಿಸಬೇಕು; ಅಥವಾ ಅದನ್ನು ಸುವಿಚಾರಕ್ಕನುಗುಣವಾಗಿ ವ್ಯಾಖ್ಯಾನಿಸಬೇಕು. ಎಲ್ಲಾ ಸಂಪ್ರದಾಯಗಳನ್ನು ಅವುಗಳಿರುವ ಸ್ಥಿತಿಯಲ್ಲಿಯೇ ಅವುಗಳೆಷ್ಟು ಬುದ್ಧಿವಿಹೀನಗಳಾಗಿದ್ದರೂ ಸ್ವೀಕರಿಸುವುದು ಇಸ್ಲಾಮ್ ಧರ್ಮಕ್ಕನುಗುಣವಾಗಿ ಇರುವುದಿಲ್ಲ ಮತ್ತು ಆ ರೀತಿ ಮಾಡಬೇಕೆಂಬ ಆವಶ್ಯಕತೆಯಾಗಲೀ ಅಭಿಪ್ರಾಯವಾಗಲೀ ಇಲ್ಲ.

ಒಂದು ಧರ್ಮದ ತಳಹದಿಯೇ ವೈಚಾರಿಕ ಚಿಂತನೆಯಾಗಿರುವಾಗ, ಅದು ವಿಚಾರಕ್ಕೆ ವಿಶಾಲವಾದ ಆಯಾಮವನ್ನು ನೀಡುತ್ತಿರುವಾಗ, ಅದು ದೇವರು ಮನುಷ್ಯನಿಗಿತ್ತಿರುವ ಎಲ್ಲಾ ಸಹಜ ಗುಣಗಳನ್ನು ಸದುಪಯೋಗ ಮಾಡುವ ಆಜ್ಞೆ ನೀಡುತ್ತಿರುವಾಗ, ಅದು ಎಲ್ಲಕ್ಕಿಂತ

---

(7ನೇ ಪುಟದಿಂದ)

ಬಹಳ ಪರಿತಾಪಕರವಾದೊಂದು ಅವಸ್ಥೆಗೆ ಬಂದು ತಲಪಿದೆ. ಕೆಲವರು ಬಹಿರಂಗವಾಗಿ ದೇವನಿಲ್ಲವೆಂದು ಘೋಷಿಸುತ್ತಾರೆ. ಬೇರೆ ಕೆಲವರು ಆ ಸರ್ವಶಕ್ತನ ಅಸ್ತಿತ್ವವನ್ನು ನಂಬುತ್ತೇವೆಂದು ಹೇಳಿಕೊಂಡು, ಆ ನಂಬಿಕೆಗೆ ವಿರುದ್ಧವಾದ ರೀತಿಯಲ್ಲಿ ಜೀವಿಸುತ್ತಾ, ಆದರಿಂದ ತಮಗೆ ಯಾವ ಫಲವೂ ಸಿದ್ಧಿಸಲಿಲ್ಲವೆಂದು ತಮ್ಮ ನಡೆವಳಿಕೆಗಳಿಂದ ತೋರ್ಪಡಿಸುತ್ತಾರೆ. ಇಂದಿನ ದೈವವಿಶ್ವಾಸದ ಸಾಮಾನ್ಯ ಸ್ಥಿತಿ ಈ ರೀತಿಯಾಗಿದೆ. ಯಥಾರ್ಥವಾದ ರೀತಿಯಲ್ಲಿ ದೇವನನ್ನು ನಂಬಿ, ಅವನನ್ನು ಪ್ರೀತಿಸುವ ಒಬ್ಬ ಭಕ್ತನಿಗೆ ಇದಕ್ಕಿಂತ ವ್ಯಸನಕರವಾದುದು ಬೇರೊಂದಿಲ್ಲ. ಈ ಲೇಖನದ ಮೂಲಕ ದೇವನ ಅಸ್ತಿತ್ವದ ಕುರಿತು ಕೂಲಂಕಷವಾಗಿ ಚರ್ಚೆಮಾಡಲು ಉದ್ದೇಶಿಸಿಲ್ಲವಾದುದರಿಂದ, ಆ ಸರ್ವೇಶ್ವರನನ್ನು ಆತ್ಮಾರ್ಥವಾಗಿ ನಂಬಲಿಕ್ಕೂ ಅದಕ್ಕನುಸಾರವಾಗಿ ಜೀವನ ನಡೆಸಲಿಕ್ಕೂ ಎಲ್ಲಾ ಮನುಷ್ಯರಿಗೂ ಭಾಗ್ಯವುಂಟಾಗಲೆಂದು ಪ್ರಾರ್ಥಿಸಿಕೊಂಡು ನಾನಿದನ್ನು ಮುಕ್ತಾಯಗೊಳಿಸುತ್ತೇನೆ. ●

ಶ್ರೇಷ್ಠವಾದ ಬುದ್ಧಿಶಕ್ತಿಯನ್ನು ಉಪಯೋಗಿಸಲು ಕರೆ ನೀಡುತ್ತಿರುವಾಗ ಅಂಥಹ ಧರ್ಮ ವಿಜ್ಞಾನ ಮತ್ತು ಸೈದ್ಧಾಂತಿಕ ತತ್ವಗಳ ದಾರಿಯಲ್ಲಿ ಹೇಗೆ ತಾನೆ ಅಡ್ಡಿಯಾದೀತು ?

ಯುರೋಪಿನಲ್ಲಿ ಆಧುನಿಕ ನಾಗರಿಕತೆ ಸೌಭಾಗ್ಯಕರವಾದ ಅಭಿವೃದ್ಧಿಯನ್ನು ಗಳಿಸಲು ಕಾರಣ ಕ್ರೈಸ್ತ ಧರ್ಮ ರಾಜ್ಯಾಧಿಕಾರವನ್ನು ಮತೀಯ ಅಧಿಕಾರದಿಂದ ಬೇರ್ಪಡಿಸಿದುದರಿಂದಲೂ ಇಂದಿನ ಕಾಲದ ಪಾಶ್ಚಿಮಾತ್ಯ ರಾಜ್ಯಗಳ ಮೇಲೆ ಶತಮಾನಗಳಷ್ಟು ಕಾಲ ಚರ್ಚಿನ ಪ್ರಭಾವ ಇದ್ದರೂ ಈಗ ಅವುಗಳು ಚರ್ಚಿನ ಪ್ರಭಾವದಿಂದ ಸ್ವತಂತ್ರವಾಗಿರುವುದರಿಂದಲೂ ಆಗಿದೆಯೆಂದೂ ಆದರೆ ಇಸ್ಲಾಮಿಕ ರಾಜ್ಯಗಳಲ್ಲಿ ಅಂತಹ ಬೇರ್ಪಡಿಸುವಿಕೆ ಸಾಧ್ಯವಿಲ್ಲವೆಂದೂ ಕಾನೂನು ಮೂಲಕ ರಾಜ್ಯಾಧಿಕಾರ ಮತೀಯ ಅಧಿಕಾರದೊಂದಿಗೆ ಸೇರಿಸಲ್ಪಟ್ಟಿದೆಯೆಂದೂ ಹೇಳಲಾಗುತ್ತಿದೆ.

ಇಸ್ಲಾಮ್ ಧರ್ಮವನ್ನು ಪೂರ್ಣವಾಗಿ ಅರ್ಥಮಾಡಿಕೊಂಡರೆ ಅದೊಂದು ಮತವೆಂದೂ ಒಂದು ರಾಜ್ಯ ವ್ಯವಸ್ಥೆಯೆಂದೂ ಮನಗಾಣಬಹುದು. ಇಸ್ಲಾಮ್ ಧರ್ಮ ದೇವರ ಇರುವಿಕೆಯನ್ನು ಮಾನವನಿಗೆ ಅವತೀರ್ಣಗೊಳಿಸಿ, ಮನುಷ್ಯರಿಗಿರುವ ಹಕ್ಕುಬಾಧ್ಯತೆಗಳನ್ನು ವ್ಯಕ್ತಗೊಳಿಸಿ ಈ ಹಕ್ಕುಬಾಧ್ಯತೆಗಳ ಅನುಷ್ಠಾನಕ್ಕೆ ಅಧಿಕಾರ ಅಗತ್ಯವೆಂದು ಅಂಗೀಕರಿಸುತ್ತದೆ. ಆದರೆ ಖಲೀಫರು ಮುಸ್ಲಿಮರಿಗೆ ಧಾರ್ಮಿಕ ನಾಯಕರಲ್ಲ. ಅವರು ತೀರಾ ತಪ್ಪು ಮಾಡದವರೂ ಅಲ್ಲ. ಅವರಿಗೆ ದೇವರಿಂದ ಸ್ಫೂರ್ತಿಗಳಿಸುವ ಹೆಗ್ಗಳಿಕೆಯಿರುವುದಿಲ್ಲ. ಅವರು ಪವಿತ್ರ ಖುರ್ ಆನ್ ಮತ್ತು ಪೈಗಂಬರ್ ವಚನಗಳ ಕುರಿತು ತಾನು ಮಾಡುವ ವ್ಯಾಖ್ಯಾನಗಳನ್ನು ಇತರರು ಒಪ್ಪಲೇಬೇಕೆಂದು ನಿರ್ಬಂಧಿಸುವುದಿಲ್ಲ. ಸತ್ಯ ಮತ್ತು ಮಿಥ್ಯದ ವ್ಯತ್ಯಾಸ ಅರಿತು ನ್ಯಾಯ ತೀರ್ಮಾನಗಳನ್ನು ಮಾಡಲು ಅವರಿಗೆ ಎಲ್ಲಾ ಮೂಲಗಳ ಕುರಿತು ಸಾಕಷ್ಟು ತಿಳುವಳಿಕೆ ಬೇಕಾಗಿದೆ. ಅವರು ಪವಿತ್ರ ಖುರ್‌ಆನನ್ನು ಅರಿತುಕೊಳ್ಳುವ ವಿಷಯದಲ್ಲಿ ಇತರ ಮುಸ್ಲಿಮರಂತೆ ಇರುತ್ತಾರೆ. ಅವರು ಸರಿಯಾದ ಮಿತಿಯಲ್ಲಿದ್ದರೆ ಮಾತ್ರ ಅವರ ಆಜ್ಞೆಗಳು ಅನುಸರಣೀಯವಾಗುವುವು. ಅವರು ಯಾವುದಾದರೂ ಇಸ್ಲಾಮಿಕ ಆಜ್ಞೆಗಳನ್ನು ಮೀರಿ ನಡೆದರೆ ಪ್ರಜೆಗಳಿಗೆ ಅವರ ಕರ್ತವ್ಯ ಜ್ಞಾಪಿಸಿ ಕೊಡುವ ಹಕ್ಕು ಇರುತ್ತದೆ. ಅವರನ್ನು ಎಚ್ಚರಿಸಿದರೂ ಖಲೀಫರು ಅವರದನ್ನು ಕಡೆಗಣಿಸಿದರೆ ಅವರ ಸ್ಥಾನದಲ್ಲಿ ಹೊಸ ಖಲೀಫರನ್ನು ನೇಮಿಸಬಹುದು.* ಒಂದು ಪ್ರಸಿದ್ಧ ಪೈಗಂಬರ್ ವಚನ ಈ ರೀತಿ ಇದೆ: "ಸೃಷ್ಟಿಕರ್ತನ ಎದುರು ಯಾರಾದರೂ ದಂಗೆ ಎದ್ದರೆ ಯಾರೂ ಆತನಿಗೆ ವಿಧೇಯನಾಗಿರಬೇಕಿಲ್ಲ."

ಖಲೀಫರು, ಮೇಲಿನ ಕಾರಣಗಳಿಂದ ಒಬ್ಬ ನ್ಯಾಯ ನಿರ್ಣಾಯಕ ಅಧಿಕಾರಿಯಾಗಿದ್ದಾರೆ. ಅವರು ದೇವರಿಂದ ಅಧಿಕಾರ ಪಡೆಯುವ ಒಬ್ಬ ದೇವಪ್ರಭುತ್ವಾಧಿಪತಿಯಲ್ಲ. ಕೇವಲ ಧಾರ್ಮಿಕ ವಿಶ್ವಾಸಗಳ ಕಾರಣದಿಂದ ಪ್ರಜೆಗಳು ಅವರಿಗೆ ವಿಧೇಯರಾಗಿರಬೇಕಿಲ್ಲ. ಇಸ್ಲಾಮಿನಲ್ಲಿ ಕೇವಲ ಒಂದೇ ಧಾರ್ಮಿಕ ಅಧಿಕಾರ ಶಕ್ತಿಯಿದೆ: ಅದು, ಎಲ್ಲಾ ಮುಸ್ಲಿಮರಿಗೆ ಅವರು ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿರಲಿ, ಅಥವಾ ಉತ್ಕೃಷ್ಟ ಸ್ಥಿತಿಯಲ್ಲಿರಲಿ ಅವರನ್ನು ದುಷ್ಕೃತ್ಯಗಳಿಂದ ದೂರವಿರಿಸಿ, ನೇರವಾದ ಮಾರ್ಗದಲ್ಲಿ ನಡೆಯಲು ಧೈರ್ಯ ನೀಡುವ ಶಕ್ತಿಯಾಗಿದೆ. ಖಾಜಿ, ಮುಫ್ತಿ, ಮತ್ತು ಶೇಖುಲ್ ಇಸ್ಲಾಮ್ ಎಂಬವರಿಗೆ ಕೇವಲ ನಿಯಮಾಧಿಕಾರಗಳಿವೆ; ಅವರಿಗೆ ತನ್ನ ಸಹೋದರರ ಧಾರ್ಮಿಕ ವಿಶ್ವಾಸಗಳಿಗೆ ವಿಭಿನ್ನವಾದ ಯಾವುದೇ ಅಧಿಕಾರ ಚಲಾವಣೆ ಸಾಧ್ಯವಿಲ್ಲ.

ಇಸ್ಲಾಮಿನ ನ್ಯಾಯಸ್ಥಾನಗಳೂ ವಿದ್ಯಾಲಯಗಳೂ ಯುರೋಪಿಗೆ ಸಂಸ್ಕೃತಿಯ ದೀಪ ಸ್ತಂಭಗಳಾಗಿರುವಾಗ ಯುರೋಪು ಮಧ್ಯಯುಗದ ಕತ್ತಲೆಯಲ್ಲಿ ಮುಳುಗಿತ್ತು; ಪರಿಸ್ಥಿತಿ ಹೀಗಿರುವಾಗ ಇಸ್ಲಾಮ್ ಧರ್ಮ ಕಳೆದ ಶತಮಾನಗಳಲ್ಲಿ ಸಂಸ್ಕೃತಿಯ ಪ್ರಗತಿಯನ್ನು ತಡೆಯಿತು ಎಂದು ನಾವು ಹೇಗೆ ತಾನೆ ಹೇಳಬಲ್ಲೆವು? ಅರಬಿ ಸಿದ್ಧಾಂತಿಗಳ ಚಿಂತನೆಗಳು ಎಷ್ಟು ಉನ್ನತ ಮಟ್ಟದವುಗಳಾಗಿದ್ದುವೆಂದರೆ ಅವುಗಳು ಪಾಶ್ಚಿಮಾತ್ಯ ವಿದ್ವಾಂಸರಿಗೆ ದಾರಿಗಾಣಿ

---

* ಈ ವಿಷಯದ ಕುರಿತು ಜಾಗತಿಕ ನ್ಯಾಯಾಲಯದ ಮಾಜಿ ಅಧ್ಯಕ್ಷ ಸರ್ ಮುಹಮ್ಮದ್ ಝಫ್ರುಲ್ಲಾಖಾನ್ ಪ್ರಸ್ತುತ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: "ಲೇಖಕ ಬರೆದ ಸಂಗತಿ ಒಬ್ಬ ರಾಷ್ಟ್ರಾಧಿಪತಿಯ ಕುರಿತಾದರೆ ಅದು ಸರಿಯೆಂದು ಹೇಳಬಹುದು. ರಾಷ್ಟ್ರಾಧಿಪತಿ ತನ್ನ ರಾಜ್ಯದ ಸಂವಿಧಾನಕ್ಕನುಗುಣವಾಗಿ ಅಧಿಕಾರ ನಿರ್ವಹಿಸುತ್ತಾರೆ. ಆದರೆ ಒಬ್ಬ ಆಧ್ಯಾತ್ಮಿಕ ಉತ್ತರಾಧಿಕಾರಿ (ಖಲೀಫ)ಯ ಕುರಿತು, ಅಥವಾ ರಾಜ್ಯಾಧಿಕಾರವನ್ನು ಹೊಂದಿದ ಆಧ್ಯಾತ್ಮಿಕ ಉತ್ತರಾಧಿಕಾರಿಯ ಕುರಿತು ಈ ರೀತಿ ಹೇಳುವುದು ಸರಿಯಾಗಲಾರದು. ......... ಅವರ ಕುರಿತು ಸ್ಥಾನತ್ಯಾಗ ಅಥವಾ ಪದಚ್ಯುತಿಯ ಪ್ರಶ್ನೆಗಳು ಉದ್ಭವಿಸಲು ಸಾಧ್ಯವಿಲ್ಲ." —ಅನುವಾದಕ.

ಸಿದುವು. ಪ್ರತಿಯೊಂದು ಮಸೀದಿಯ ಜೊತೆಯಲ್ಲಿ ವಿವಿಧ ವಿಜ್ಞಾನಗಳನ್ನು ಕಲಿಸುವ ವಿದ್ಯಾಕೇಂದ್ರಗಳನ್ನು ತೆರೆಯಬೇಕೆಂದು ಹಾರೂನ್ ರಶೀದ್ ಎಂಬ ಖಲೀಫರು ಆಜ್ಞಾಪಿಸಿದ್ದರು. ಲಕ್ಷ ಗಟ್ಟಲೆ ಗ್ರಂಥಗಳಿರುವ ಗ್ರಂಥ ಭಂಡಾರಗಳು ಇಸ್ಲಾಮಿಕ ಲೋಕದಲ್ಲೆಲ್ಲಾ ವಿದ್ವಾಂಸರಿಗೆ ತೆರೆಯಲಾಯಿತು. ಬೇಕನ್ (Bacon) ಪ್ರಾಯೋಗಿಕ ವಿಜ್ಞಾನದ ಆವಶ್ಯಕತೆಯನ್ನು ಘೋಷಿಸುವ ಎಷ್ಟೋ ಮೊದಲು ಅರಬಿಗಳು ಪ್ರಾಯೋಗಿಕ ತತ್ವಗಳಿಗೆ ಮಹತ್ವ ನೀಡಿರಲಿಲ್ಲವೆ? ರಸಾಯನ ಶಾಸ್ತ್ರದ ಪ್ರಗತಿ, ಖಗೋಳ ಶಾಸ್ತ್ರದ ಅಭಿವೃದ್ಧಿ, ಗ್ರೀಕ್ ವಿಜ್ಞಾನದ ಪ್ರಚಾರ, ಔಷಧ ವಿದ್ಯೆಯ ಅಧ್ಯಯನ, ವಿವಿಧ ಭೌತಿಕ ನಿಯಮಗಳ ಕಂಡುಹಿಡಿತ— ಇವುಗಳೆಲ್ಲಾ ಅರಬಿಗಳಿಂದಲೇ ಸಾಧಿಸಲ್ಪಟ್ಟವಲ್ಲವೆ ?

ಮೇಲಿನ ಸಂಗತಿಗಳೆಲ್ಲಾ ಸರಿಯಾದರೆ, ವಿಜ್ಞಾನದ ಪ್ರಗತಿಯ ಮಾರ್ಗದಲ್ಲಿ ಅಡ್ಡಿಗಳನ್ನು ಸೃಷ್ಟಿಸುವುದು ಇಸ್ಲಾಮ್ ಧರ್ಮದ ಸಹಜ ಗುಣವೆಂದು ಹೇಳಲು ನಮಗೆ ಸಾಧ್ಯವಿಲ್ಲ. ಕೆಲವು ಸ್ಥಳಗಳಲ್ಲಿ ಶಾಂತಿಯನ್ನು ನೆಲೆಗೊಳಿಸಲು ಕೆಲವು ರಾಜ್ಯಾಧಿಕಾರಿಗಳು ಸಾರ್ವಜನಿಕ ಜೀವನವನ್ನು ಅಸ್ತವ್ಯಸ್ತಗೊಳಿಸುವ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವವರ ವಿರುದ್ಧ ದಮನಕಾರಿ ಕಾರ್ಯಗಳನ್ನು ಕೈಗೊಂಡದ್ದಿದೆಯೆಂದು ನಾವು ಹೇಳಬಹುದು. ಕೆಲವು ಸಾರಿ ರಾಜಕೀಯ ಮತ್ತು ವೈಯಕ್ತಿಕ ಕಾರಣಗಳು ಧಾರ್ಮಿಕ ಕಾರಣಗಳಿಗಿಂತ ಹೆಚ್ಚಾಗಿ ಮತ ಪಂಡಿತರ, ಕಾನೂನು ನಿರ್ಮಾಪಕರ, ವಚನ ಸಂಗ್ರಹಕರ ಮತ್ತು ಸಿದ್ಧಾಂತಿಗಳ ವರ್ತನೆಯ ಮೇಲೆ ಪ್ರಭಾವ ಬೀರಿತು. ಈಗಲೂ ಸಹ ಕೆಲವು ಮುಸ್ಲಿಮ್ ವರ್ತುಲಗಳಲ್ಲಿ ವೈಚಾರಿಕ ವಿಜ್ಞಾನಗಳ ಕುರಿತು ಮತ್ತು ಆಧುನಿಕ ಕೈಗಾರಿಕೆಗಳ ಕುರಿತು ಬಲವಾದ ವಿರೋಧವಿದೆ. ಅಫ್‌ಘಾನಿಸ್ಥಾನದವರು, ಪರ್ಶಿಯಾದವರು ಮತ್ತು ಭಾರತೀಯರು ತಮ್ಮ ಹಳೆಯ ಸಂಪ್ರದಾಯಗಳಿಗೆ ಬಿಗಿಯಾಗಿ ಅಂಟಿಕೊಂಡಿದ್ದಾರೆ. ಪಶ್ಚಿಮ ಆಫ್ರಿಕದ ಜನರು ಅತಿಶಯವಾದ ಧರ್ಮಾಂಧತೆಗಳಿಗೆ ತುತ್ತಾಗಿದ್ದಾರೆ. ಕೆಲವು ನ್ಯಾಯ ಪಂಡಿತರು ಅವರು ಅಧಿಕೃತವೆಂದು ತಿಳಿಯುವ ಗ್ರಂಥಗಳಿಗೆ ಎಷ್ಟು ಅಂಟಿಕೊಂಡಿರುವರೆಂದರೆ ಅವರು ಅವುಗಳ ಮೇಲಿಂದ ಮೇಲೆ ತಿಳಿಯಬಹುದಾದ ಅರ್ಥಕ್ಕಿಂತ ಮಿಗಿಲಾಗಿ ಯಾವುದೇ ಅಭಿಪ್ರಾಯ ವ್ಯಕ್ತಗೊಳಿಸುವುದಿಲ್ಲ; ಆ ಗ್ರಂಥಗಳಲ್ಲಿ ಯಾವುದೇ ಸೂಚನೆ ದೊರೆಯದ ಒಂದು ಹೊಸ ಪ್ರಕರಣದ ಕುರಿತು ಅವರು ಯಾವುದೇ ಅಭಿಪ್ರಾಯ ನೀಡಲು ನಿರಾಕರಿಸುತ್ತಾರೆ; ಅಥವಾ ಅವರು ಆ ಬಗ್ಗೆ ಇತ್ಯರ್ಥ ಮಾಡದೆ, ತಮ್ಮ ಆಯ್ಕೆಯ ಗ್ರಂಥಕರ್ತರು ನೀಡಿದ ಯಾವುದಾದರೂ ಸರ್ವಸಮ್ಮತವಾದ ಅಭಿಪ್ರಾಯದ ಮೇಲೆ ಕೊನೆಗೆ ತೀರ್ಮಾನ ನೀಡುವರು. ಆದರೆ ಅತ್ಯಂತ ಒರಟು ಮನೋವೃತ್ತಿಯನ್ನು ಪಡೆದ ಕೆಲವು ಮುಸ್ಲಿಮ್ ಗುಂಪುಗಳನ್ನು ನೋಡಿಯಾಗಲೀ, ಕೆಲವು ಚಾರಿತ್ರಿಕ ಸನ್ನಿವೇಶಗಳಲ್ಲಿ ನಡೆದ ಸಂಭವಗಳ ಆಧಾರದ ಮೇಲೆಯಾಗಲೀ, ಇಸ್ಲಾಮ್ ಧರ್ಮವನ್ನು ಒರಟೆಂದೂ ನಿಶ್ಚಲವೆಂದೂ ಸಂಕುಚಿತವೆಂದೂ ಆರೋಪಿಸುವುದು ನ್ಯಾಯಯುತವಾಗಲಾರದು.

ದುರದೃಷ್ಟವಶಾತ್ ಅರಬಿ ನಿಧಿಯಾಗಿದ್ದ ಇಸ್ಲಾಮ್ ಧರ್ಮ, ಅದು ಗ್ರೀಕ್ ವಿಜ್ಞಾನವನ್ನು ಅರಬೀಕರಿಸಿದ ನಂತರ, ತುರ್ಕರ, ಟಾರ್ಟರಿಗಳ ಮತ್ತು ಮಂಗೋಲರ ಕೈವಶವಾಯಿತು. ಈ ಜನಾಂಗಗಳಿಗೆ ಸೇರಿದವರು ಅರಬಿಗಳ ಕೂಲಿಯ ಸಿಪಾಯಿಗಳಾಗಿದ್ದರು. ಅವರು ಹಣಕ್ಕಾಗಿ ಮಾತ್ರ ಬಂದವರಾದುದರಿಂದ ಇಸ್ಲಾಮಿಕ ಜಗತ್ತನ್ನು ವಶೀಕರಿಸಿ ತಾವು ವಶೀಕರಿಸಿದವರ ಧರ್ಮವನ್ನು ಸ್ವೀಕರಿಸಿದರು; ಆ ಧರ್ಮದ ಆಂತರಿಕ ಸತ್ವವನ್ನು ಅರಿತುಕೊಳ್ಳದೆ ಅದರಿಂದ ಮಾನಸಿಕ ಪರಿವರ್ತನೆ ಹೊಂದದೆ ಕೇವಲ ಆ ಧರ್ಮದ ಉಡುಗೆಯನ್ನು ಧರಿಸಿದರು. ಇದು ಅವರನ್ನು ಇಸ್ಲಾಮಿನ ಮೇಧಾವೀ ಸ್ಥಾನವನ್ನು ಗಳಿಸಲು ಅಸಮರ್ಥರನ್ನಾಗಿ ಮಾಡಿತು. ಈ ಅನಾಗರಿಕ ಒರಟು ಜನಾಂಗಕ್ಕೆ ಸೇರಿದವರು ತಮ್ಮ ಅಧಿಕಾರವನ್ನು ಸುಭದ್ರಗೊಳಿಸಲಿಕ್ಕಾಗಿ ತಮ್ಮ ಪ್ರಜೆಗಳನ್ನು ನಿದ್ದೆ ಹೋಗುವಂತೆ ಮಾಡಿ ಅವರು ವಿಜ್ಞಾನ ವಿದ್ಯೆಯಲ್ಲಿ ಆಸಕ್ತಿ ವಹಿಸದಂತೆಯೂ ಪ್ರಗತಿ ಗಳಿಸದಂತೆಯೂ ಮಾಡಿದರು. ಹೊಸ ರಾಜಕೀಯ ಶಕ್ತಿಗಳು ತಮಗಾಗಿ, ತಮ್ಮ ಲಾಭಕ್ಕಾಗಿ ಮುಸ್ಲಿಮ್ ಸಮಾಜದ ಎಲ್ಲಾ ವ್ಯವಹಾರಗಳ ಕುರಿತು ತೀರ್ಮಾನ ಕೈಗೊಳ್ಳುವ ಅಧಿಕಾರವನ್ನು ವಹಿಸಿ, ದೇವರ "ಮೊದಲೇ ನಿಶ್ಚಯಿಸಿದ ಅದೃಷ್ಟದ ತೀರ್ಮಾನ ತತ್ವ"ವನ್ನು ಜನರು ತಮ್ಮ ಸ್ಥಿತಿಯ ಕುರಿತು ಹೆಚ್ಚಿಗೆ ಆಲೋಚನೆ ಮಾಡದಿರಲು ಮತ್ತು ತಮ್ಮ ಅಧಿಕಾರವನ್ನು ಬಲಪಡಿಸಲಿಕ್ಕಾಗಿ ಪ್ರಚಾರಗೊಳಿಸಿ, ಹೊಸಬರಿಗೆ ದೇವರು ತನ್ನ ಅನುಗ್ರಹಗಳ ಬಾಗಿಲುಗಳನ್ನು ಮುಚ್ಚಿರುವನೆಂಬ ಕಲ್ಪನೆಯನ್ನು ಸಮರ್ಥಿಸಿ ತಮ್ಮ ನೆಲೆಯನ್ನು ಭದ್ರಗೊಳಿಸಿದರು. (ಇಂತಹ

ತತ್ವ ಪವಿತ್ರ ಖುರ್‌ಆನಿನಲ್ಲಿ ಇರಲು ಹೇಗೆ ತಾನೆ ಸಾಧ್ಯ? ಪವಿತ್ರ ಖುರ್‌ಆನಿನಲ್ಲಿ ದೇವರು ಇಂತಹ ಭಾವನೆ ಇತರ ಧರ್ಮಾನುಗಳಲ್ಲಿವೆಯೆಂದೂ ಅದು ಪಾಪಕರವೆಂದೂ ಖಂಡಿಸುತ್ತಾನೆ.)

ಈ ರೀತಿ ವಿಶ್ವಾಸಿಗಳು ಯಾವುದೇ ತೀರ್ಮಾನ ಕೈಗೊಳ್ಳುವುದು ನಿಷಿದ್ಧಗೊಳಿಸಲ್ಪಟ್ಟಿತು. ಅವರು ಹಿಂದಿನವರ ತೀರ್ಮಾನಗಳನ್ನು ಅನುಸರಿಸಲು ಬಲಾತ್ಕರಿಸಲ್ಪಟ್ಟರು. ಈ ಮಧ್ಯಪ್ರವೇಶಿಗಳು ತಾವು ಸ್ವೀಕರಿಸಿದ ಇಸ್ಲಾಮ್ ಧರ್ಮದ ನಿಜ ಸ್ವರೂಪವನ್ನು ವಿಕೃತಗೊಳಿಸಿದರು. ಅದರ ಬಾಹ್ಯಾಚರಣೆಗಳನ್ನು ಆಂತರಿಕ ಉದ್ದೇಶಗಳ ಅರಿವಿಲ್ಲದೆ ಅಥವಾ ಅರಿಯಲು ಇಚ್ಛಿಸದೆ ಅನುಸರಿಸಿದರು. ಇದೇ ಇಸ್ಲಾಮಿನಲ್ಲಿ "ಕಠೋರತೆ" ಬೆಳೆಯಲು ಕಾರಣವಾಗಿದ್ದು ಇದರ ಪರಿಣಾಮನಾಗಿ ಧಾರ್ಮಿಕ ವಿಷಯಗಳಲ್ಲೂ ಕಾನೂನಿನ ಸಂಬಂಧವಾಗಿಯೂ ಸಾಂಪ್ರದಾಯಿಕ ಸಾಹಿತ್ಯ ಮತ್ತು ಸೈದ್ಧಾಂತಿಕ ಅಧ್ಯಯನದಲ್ಲಿಯೂ ಸಾಮಾಜಿಕ ಜೀವನದ ವಿವಿಧ ಹಂತಗಳಲ್ಲಿಯೂ ಅಪಾಯಕಾರಿ ಪರಿಣಾಮಗಳುಂಟಾದುವು.

ನಾವು ಇವುಗಳನ್ನು ಹೆಚ್ಚಿನ ಸಾಕ್ಷ್ಯಗಳೊಂದಿಗೆ ಇಲ್ಲಿ ನಿರೂಪಿಸಲು ಇಚ್ಛಿಸುವುದಿಲ್ಲ. ಅದೃಷ್ಟವಶಾತ್ ಇಸ್ಲಾಮ್ ಧರ್ಮದ ಈ ಕಠೋರತೆ ಅದೃಶ್ಯವಾಗಲಿರುವ ಒಂದು ರೋಗವಾಗಿದೆ; ಯಥಾರ್ಥವೇನೆಂದರೆ ಈ ಕಠೋರತೆ ದೂರವಾಗುತ್ತಾ ಇರುವುದಾಗಿ ಕಂಡು ಬರುತ್ತಿದೆ. ಕೊನೆಯದಾಗಿ ಮುಸ್ಲಿಮರು ಅಂತಿಮ ಶರೀಅತ್(ಧರ್ಮಶಾಸ್ತ್ರ) ವಾಹಕ ಸರಳ ಸ್ವಭಾವದ ಪೈಗಂಬರರಿಗೆ ಅವತೀರ್ಣವಾದ ಪವಿತ್ರ ಖುರ್‌ಆನಿಗೆ ಹಿಂತೆರಳುವರು. ಈ ಪವಿತ್ರ ಖುರ್‌ಆನ್ ಅದರ ಸ್ನೇಹಿತರಿಂದಾಗಲೀ ವಿರೋಧಿಗಳಿಂದಾಗಲೀ, ವಿದ್ವಾಂಸರಿಂದಾಗಲೀ ಅವಿದ್ಯಾವಂತರಿಂದಾಗಲೀ ಯಾವುದೇ ಹಸ್ತಕ್ಷೇಪಕ್ಕೆ ಒಳಗಾಗದೆಯೂ ನಿತ್ಯ ನೂತನವಾಗಿಯೂ ಇದ್ದು ಅದು ದೇವರಿಂದ ತನ್ನ ಪೈಗಂಬರರಿಗೆ ಅವತೀರ್ಣವಾದ ಪ್ರಕಾರವೇ ಇಂದಿಗೂ ಸುರಕ್ಷಿತವಾಗಿದೆ. ಮುಸ್ಲಿಮರು ಈ ಪವಿತ್ರ ಗ್ರಂಥದಿಂದ ನೇರವಾಗಿ ಜ್ಞಾನಾಮೃತವನ್ನು ಹೀರುವಾಗ ಅವರು ನವ ಚೈತನ್ಯ ತುಂಬಿದವರಾಗದೆ ಇರಲು ಸಾಧ್ಯವೇ ಇಲ್ಲ. ಈ ಕಾರ್ಯ ಈಗಲೇ ಪ್ರಾರಂಭವಾಗಿದೆಯೆಂಬುದಕ್ಕೆ ಬಲವಾದ ಸಾಕ್ಷ್ಯಗಳಿವೆ.

(ಅನುವಾದಕ: M. U. ರಶೀದ್)

★

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"..... ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ ....." —ನವಭಾರತ

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: Book Secretary, Ahmadiyya Muslim Mission
10-23/1008, Ansari Road, Bunder, Mangalore-575 001.

## ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ-3*

# ವಿಶ್ವಾಸಿಗಳ ಮೇಲೆ ಘೋರ ಅತ್ಯಾಚಾರ

● ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ಪರಿಹಾಸ್ಯ ಮತ್ತು ಉಪೇಕ್ಷೆಯ ಸ್ಥಾನದಲ್ಲಿ ಅನುಮೋದನೆಯೂ ಪ್ರಶಂಸೆಯೂ ಕೇಳಿಬರಲು ತೊಡಗಿದಾಗ ಮಕ್ಕಾದ ಗೋತ್ರ ನಾಯಕರು ಭಯವಿಹ್ವಲರಾದರು. ಅಧಿಕಾರಸ್ಥರಲ್ಲಿ ಹೆದರಿಕೆಯುಂಟಾಗತೊಡಗಿತು. ಅವರು ಒಟ್ಟು ಸೇರಿ ಆಲೋಚಿಸಿದರು. ಸಭೆಗಳನ್ನು ಕರೆದು ಗೂಢಾಲೋಚನೆ ನಡೆಸಿದರು. ವ್ಯಂಗ್ಯವೂ ಉಪೇಕ್ಷೆಯೂ ಈ ಸವಾಲಿಗೆ ಸರಿಯಾದ ಪ್ರತಿಕ್ರಿಯೆಯಲ್ಲವೆಂದು ಅವರು ತೀರ್ಮಾನಿಸಿದರು. ಇದನ್ನು ಶಕ್ತಿಯುಪಯೋಗಿಸಿ ಕಠಿಣವಾಗಿಯೇ ಎದುರಿಸಬೇಕು; ಅತ್ಯಾಚಾರ, ಹಿಂಸೆ ಹಾಗೂ ಸಾಮಾಜಿಕ ಬಹಿಷ್ಕಾರವನ್ನು ಸತ್ಯವಿಶ್ವಾಸಿಗಳಿಗೆದುರಾಗಿ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು. ಅದರ ಪ್ರಾಯೋಗಿಕ ಕ್ರಮಗಳೂ ಒಡನೆಯೇ ಆರಂಭವಾದುವು. ಈ ರೀತಿಯಲ್ಲಿ ಮಕ್ಕಾ ನಿವಾಸಿಗಳು ಇಸ್ಲಾಂ ಧರ್ಮಕ್ಕೆದುರಾಗಿ ಉಗ್ರವಾದ ಹೋರಾಟಕ್ಕೆ ಅಣಿಯಾದರು. ಅದುವರೆಗೂ ಬುದ್ಧಿಭ್ರಮೆಯೆಂದು ಪರಿಗಣಿಸಲ್ಪಟ್ಟಿದ್ದ ಹಝ್ರತ್ ಮುಹಮ್ಮದರ ಘೋಷಣೆಯು ಈಗ ಒಂದು ಪ್ರಗತಿದಾಯಕ ಶಕ್ತಿಯಾಗಿ ಮಾರ್ಪಟ್ಟಿತ್ತು. ಇದನ್ನು ಹಾಗೆಯೇ ನಿರಾತಂಕವಾಗಿ ಮುಂದುವರಿಯಲು ಬಿಟ್ಟಲ್ಲಿ ಮಕ್ಕಾದ ಪುರಾತನ ರೀತಿ ರಿವಾಜುಗಳಿಗೆ ಅದೊಂದು ಸವಾಲಾಗಬಹುದು. ಮಕ್ಕಾದ ರಾಜನೀತಿಗೂ ಆಚಾರ ಅನುಷ್ಠಾನಗಳಿಗೂ ಸಂಸ್ಕೃತಿಗೂ ಪರಂಪರಾಗತ ನಂಬಿಕೆಗಳಿಗೂ ಅದೊಂದು ಬೆದರಿಕೆಯಾಗಬಹುದೆಂದು ಗೋಚರಿಸುತ್ತಿತ್ತು. ಇಸ್ಲಾಂ ಧರ್ಮವು ಪುರಾತನ ಸಾಮಾಜಿಕ ವ್ಯವಸ್ಥೆಗಳನ್ನು ಅಳಿಸಿ ಹೊಸತೊಂದು ಆಕಾಶವನ್ನೂ ಹೊಸ ಭೂಮಿಯನ್ನೂ ನಿರ್ಮಾಣ ಮಾಡುತ್ತಿರುವಂತೆ ಕಂಡುಬರುತ್ತಿತ್ತು. ಈ ನವೀನ ಆಕಾಶ ಭೂಮಿಯ ಉಗಮದೊಂದಿಗೆ ಮಕ್ಕಾದ ಪ್ರಾಚೀನ ಆಕಾಶ ಭೂಮಿಯು ಕುಸಿದುಬೀಳುವುದು. ಇಸ್ಲಾಂ ಈಗ ಮಕ್ಕಾದ ಜನರಿಗೆ ಪರಿಹಾಸ್ಯದ ವಸ್ತುವಲ್ಲ. ಅದು ಅವರ ಜೀವಿತ ಮತ್ತು ಮರಣದ ಪ್ರಶ್ನೆಯಾಗಿತ್ತು. ಇಸ್ಲಾಂ ಧರ್ಮವು ಅವರ ಮುಂದೆ ಒಂದು ಸವಾಲಾಗಿತ್ತು.

ಮಕ್ಕಾ ನಿವಾಸಿಗಳು ಈ ಸವಾಲನ್ನು ಎದುರಿಸಲು ಸಿದ್ಧರಾದರು.

ಯಾವ ರೀತಿಯಲ್ಲಿ ಮೊದಲು ಅವತೀರ್ಣರಾದ ಅವತಾರ ಪುರುಷರನ್ನೂ ಪ್ರವಾದಿಗಳನ್ನೂ ಎದುರಿಸಲು ಆಯಾ ಕಾಲದ ಜನರು ಸಿದ್ಧರಾಗುತ್ತಿದ್ದರೋ ಅದೇ ರೀತಿ ಮಕ್ಕಾ ನಿವಾಸಿಗಳೂ ಈ ಸವಾಲನ್ನೆದುರಿಸಲು ಪೂರ್ಣ ಶಕ್ತಿ ಸಾಮರ್ಥ್ಯದೊಂದಿಗೆ ತಯಾರಾದರು. ಇಸ್ಲಾಂ ಅವರ ಮುಂದಿಡುತ್ತಿದ್ದ ವಿಚಾರಬದ್ಧ ಪ್ರಮಾಣಗಳ ಮುಂದೆ ನಿರುತ್ತರರಾಗಿ, ರುಜುವಾತುಗಳನ್ನು ಅವರು ಖಡ್ಗದಿಂದಲೂ ಕಠಾರಿಯಿಂದಲೂ ಎದುರಿಸಲು ಸಿದ್ಧರಾದರು. ಪೈಗಂಬರರ ಮತ್ತು ಅನುಯಾಯಿಗಳ ಉತ್ತಮ ಜೀವನ ಕ್ರಮಗಳಿಗೆ ಉತ್ತರವಾಗಿ ಶಾಂತಿ ಸಹಾನುಭೂತಿಯ ನಡವಳಿಕೆಗಳನ್ನು ತೋರಿಸಿಕೊಡಲು ವಿಫಲರಾದಾಗ ಅವರು ನಿರಪರಾಧಿಗಳಾದ ವಿಶ್ವಾಸಿಗಳನ್ನು ಹಿಂಸೆಗೆ ಗುರಿಪಡಿಸಲು ತೀರ್ಮಾನಿಸಿದರು. ದಯೆ ಮತ್ತು ಸೌಮ್ಯದ ಮಾತುಗಳಿಗೆ ಉತ್ತರವಾಗಿ ಅಪಶಬ್ದಗಳಿಂದ ಬೈಯಲು ತೀರ್ಮಾನಿಸಿದರು. ಲೋಕದಲ್ಲಿ ಮತ್ತೊಮ್ಮೆ ಧರ್ಮ ಮತ್ತು ಅಧರ್ಮಗಳೊಳಗೆ ಸಂಘರ್ಷ ಪ್ರಾರಂಭವಾಯಿತು. ಶೈತಾನನ ಮತ್ತು ದೇವದೂತರ ಗಣಗಳೊಳಗೆ ಇನ್ನೊಮ್ಮೆ ಕಾಳಗ ಆರಂಭವಾಯಿತು. ಬೆರಳೆಣಿಕೆಯಷ್ಟಿದ್ದ ಆ ಸತ್ಯವಿಶ್ವಾಸಿಗಳಿಗೆ ಮಕ್ಕಾದ ಜನರ ರಾಕ್ಷಸೀಯ ಆಕ್ರಮಣಗಳನ್ನು ಪ್ರತಿಭಟಿಸಲು ಸಾಮರ್ಥ್ಯವೆಲ್ಲಿ ? ಅಬಲೆಯರಾದ ಸ್ತ್ರೀಯರು ನಿರ್ಲಜ್ಜಾತ್ಮಕ ರೂಪದಲ್ಲಿ ಸಂಹರಿಸಲ್ಪಟ್ಟರು. ಪುರುಷರನ್ನು ತುಂಡುತುಂಡು ಮಾಡಿ ವಧಿಸಲಾಯಿತು. ಪೈಗಂಬರರಲ್ಲಿ ವಿಶ್ವಾಸ ಘೋಷಿಸಿದ ಜೀತ ಗುಲಾಮರನ್ನು ಸುಡುವ ಮರಳು-ಕಲ್ಲುಗಳ ಮೇಲೆ ಎಳೆದೊಯ್ದರು.

---

* ಯುಗರಶ್ಮಿ ಸಂಪುಟ 3, ಸಂಚಿಕೆ 4ರಿಂದ ಮುಂದುವರಿದುದು.

ಎಷ್ಟರವರೆಗೆಂದರೆ, ಅವರ ಮೈಮೇಲಿನ ಚರ್ಮವು ಮೃಗಗಳ ಚರ್ಮದಂತೆ ಗಡುಸಾಯಿತು. ನಂತರದ ಕಾಲದಲ್ಲಿ ಇಸ್ಲಾಂ ಧರ್ಮದ ವಿಜಯ ಪತಾಕೆಯು ಪೂರ್ವ–ಪಶ್ಚಿಮಗಳಲ್ಲಿ ಹಾರಾಡುತ್ತಿದ್ದ ಪ್ರತಾಪದ ವೇಳೆ, ಒಮ್ಮೆ ಜೀತದಾಳಾಗಿದ್ದ ಖಬಾಬ್ ಎಂಬ ಹೆಸರಿನ ನವ ವಿಶ್ವಾಸಿಯ ಶರೀರ ಭಾಗವು ಸಂಗಡಿಗರಿಗೆ ಕಾಣಲೆಡೆಯಾಯಿತು. ಅವರ ಬೆನ್ನು ಭಾಗದಲ್ಲಿ ಚರ್ಮವು ಮನುಷ್ಯರ ಚರ್ಮದಂತಿರದೆ ಮೃಗಗಳ ಚರ್ಮದಂತೆ ಇರುವುದನ್ನು ಕಂಡ ಸಂಗಡಿಗರು ಆಶ್ಚರ್ಯದಿಂದ—"ನಿಮ್ಮ ಚರ್ಮಕ್ಕೆ ಏನು ರೋಗ ತಗಲಿದೆ?" ಎಂದು ವಿಚಾರಿಸಿದರು. ಆಗ ಹಝ್ರತ್ ಖಬಾಬ್ ಮುಗುಳ್ನಗುತ್ತಾ ಈ ರೀತಿ ಉತ್ತರಿಸಿದರು–"ರೋಗವಲ್ಲ, ಅದು ನೆನಪಿನ ಗುರುತು. ಗುಲಾಮರಾಗಿದ್ದ ನಾವು ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಅರೇಬ್ಯದ ಜನರು ನಮ್ಮನ್ನು ಮಕ್ಕಾದ ಬೀದಿಗಳಲ್ಲಿ ಸುಡುವ ಬಿಸಿ ಮರಳು ಕಲ್ಲುಗಳ ಮೇಲೆ ದರದರ ಎಳೆದಾಡುತ್ತಿದ್ದರು. ನಿರಂತರ ನಮ್ಮನ್ನು ಈ ರೀತಿಯ ಶಿಕ್ಷೆಗೆ ಗುರಿಪಡಿಸಲಾಗುತ್ತಿತ್ತು. ಅದೇ ಕಾರಣದಿಂದ ನನ್ನ ಶರೀರದ ಚರ್ಮವು ಈ ರೂಪವನ್ನು ತಳೆದಿದೆ!" (ಮುಸ್ನದ್ ಸಂ–5, ಪು–110)

### ನವ ಮುಸ್ಲಿಂ ಗುಲಾಮರೊಡನೆ ರೋಮಾಂಚಕಾರಿ ಅತಿಕ್ರಮ

ಮುಹಮ್ಮದ್ ಪೈಗಂಬರರಲ್ಲಿ ವಿಶ್ವಾಸವಿಡುತ್ತಿದ್ದ ಗುಲಾಮರಲ್ಲಿ ವಿವಿಧ ಜಾತಿಯವರೂ ವಿಭಿನ್ನ ವರ್ಗದವರೂ ಇದ್ದರು. ಹಝ್ರತ್ ಬಿಲಾಲ್ ನೀಗ್ರೋ ಆಗಿದ್ದರು. ಹಝ್ರತ್ ಸುಹೈಬ್ ಗ್ರೀಕರಾಗಿದ್ದರು. ಅಂತೆಯೇ ಅವರ ಪೂರ್ವವಿಶ್ವಾಸಗಳೂ ವಿಭಿನ್ನವಾಗಿದ್ದುವು. ಜುಬೈರ್ ಮತ್ತು ಸುಹೈಬ್ ಕ್ರೈಸ್ತರಾಗಿದ್ದರೆ ಬಿಲಾಲ್, ಅಮ್ಮಾರ್ ಮೊದಲಾದವರು ಬಹು ದೈವಾರಾಧಕರಾಗಿದ್ದರು. ಬಿಲಾಲ್(ರ)ರವರನ್ನು ಅವರ ಯಜಮಾನ ಸುಡುವ ಮರಳಿನಲ್ಲಿ ಮಲಗಿಸಿ ಅವರ ಎದೆಯ ಮೇಲೆ ಭಾರವಾದ ಕಲ್ಲುಗಳನ್ನಿಟ್ಟು ಯುವಕರಿಂದ ತುಳಿಸುತ್ತಿದ್ದ. ಬಿಲಾಲ್ ಒಬ್ಬ ನೀಗ್ರೋ ಆಗಿದ್ದು ಉಮಯ್ಯಾ ಬಿನ್ ಖಲ್ಫ್ ಎಂಬ ಮಕ್ಕಾದ ಒಬ್ಬ ಧನಾಢ್ಯನ ದಾಸನಾಗಿದ್ದರು. ಆ ಯಜಮಾನನು ಬೇಸಗೆಯ ಮಧ್ಯಾಹ್ನಗಳಲ್ಲಿ ಅವರನ್ನು ಮಕ್ಕಾದ ಹೊರಗೆ ಕೊಂಡೊಯ್ದು ಮರುಭೂಮಿಯ ಸುಟ್ಟು ಕಾದ ಹೊಯಿಗೆಯ ಮೇಲೆ ನಗ್ನವಾಗಿ ಮಲಗಿಸಿ ದೊಡ್ಡ ಕಲ್ಲುಗಳನ್ನು ಅವರ ಮೇಲಿಟ್ಟು ಹಿಂಸಿಸುತ್ತಿದ್ದ. ಈ ರೀತಿ ಪೀಡನೆಗೆ ಗುರಿಪಡಿಸಿ ಅವರೊಡನೆ ಲಾತ ಮತ್ತು ಉರ್‍ಝಾಗಳನ್ನು* ದೇವರಾಗಿ ಸ್ವೀಕರಿಸುವಂತೆಯೂ ಇಸ್ಲಾಂ ಧರ್ಮವನ್ನು ತ್ಯಜಿಸುವಂತೆಯೂ ಒತ್ತಾಯಿಸುತ್ತಿದ್ದ. ಆದರೆ, ಇದಕ್ಕುತ್ತರವಾಗಿ ಬಿಲಾಲ್ ಹೇಳುತ್ತಿದ್ದುದು "ಅಹದ್"..."ಅಹದ್" ಎಂದು ಮಾತ್ರ– ಅಂದರೆ ದೇವನೊಬ್ಬನೇ, ದೇವನೊಬ್ಬನೇ ಎಂದು. ಬಿಲಾಲ್‌ರವರಲ್ಲಿ ಬದಲಾವಣೆಯನ್ನು ಕಾಣದ ಉಮಯ್ಯ ಕೆರಳಿ ಕೆಂಡವಾದ. ಅವರ ಕುತ್ತಿಗೆಗೆ ಒಂದು ಹಗ್ಗವನ್ನು ಕಟ್ಟಿ ಬೀದಿ ಹುಡುಗರ ಕೈಯಲ್ಲಿ ಕೊಡುತ್ತಾ ಮಕ್ಕಾದ ಮಾರ್ಗಗಳಲ್ಲಿ ಕಲ್ಲು ಕಸಗಳ ಮೇಲೆ ಅವರನ್ನು ಎಳೆದುಕೊಂಡು ಹೋಗಲು ಹೇಳಿದ. ಇದರ ಪರಿಣಾಮವಾಗಿ ಹಝ್ರತ್ ಬಿಲಾಲ್ (ರ)ರವರ ಶರೀರದಿಂದ ಚರ್ಮವು ನೀಗಿ ರಕ್ತವು ಒಸರುತ್ತಿತ್ತು. ಆದರೆ ಆ ವಿಶ್ವಾಸಿಯು ಅಹದ್...ಅಹದ್ ಎಂದಷ್ಟೇ ಹೇಳುತ್ತಾ ಇದ್ದರು. ನಂತರದ ಕಾಲದಲ್ಲಿ ಅಂದರೆ, ಮದೀನಾದಲ್ಲಿ ಮುಸ್ಲಿಮರಿಗೆ ಪರಮಾತ್ಮನು ಶಾಂತಿಯುತ ಜೀವನವನ್ನೂ ತಮ್ಮ ವಿಶ್ವಾಸದಂತೆ ನಿರ್ಭೀತಿಯಿಂದ ಆರಾಧನೆ ನಡೆಸುವ ಸ್ವಾತಂತ್ರ್ಯವನ್ನೂ ದಯಪಾಲಿಸಿದಾಗ, ಪೈಗಂಬರರು ಹಝ್ರತ್ ಬಿಲಾಲ್‌ರವರನ್ನು ಮುಅದ್ದಿನ್ (ನಮಾಜ್ ಪ್ರಾರ್ಥನೆಗಾಗಿ ವಿಶ್ವಾಸಿಗಳನ್ನು ಕರೆಯುವವರು) ಆಗಿ ನೇಮಕ ಮಾಡಿದರು. ಬಿಲಾಲ್ ಒಬ್ಬ ಆಫ್ರಿಕನ್ ಆಗಿದ್ದುದರಿಂದ, ಅಝಾನ್‌ನಲ್ಲಿ "ಅಶ್ಹದು ಅಲ್ಲಾಇಲಾಹ ಇಲ್ಲಲ್ಲಾಹ್" ಎಂದು ಹೇಳುವಲ್ಲಿ 'ಅಶ್‌ಹದು' ಎಂಬ ಉಚ್ಚಾರಣೆಗೆ ಬದಲಾಗಿ 'ಅಸ್‌ಹದು' ಎಂಬುದಾಗಿ ಹೇಳುತ್ತಿದ್ದರು. ಅವರ ವ್ಯಕ್ತಿತ್ವದ ಮಹತ್ವದ ಬಗ್ಗೆ ತಿಳಿದಿರದ ಮದೀನದ ವಿಶ್ವಾಸಿಗಳು ಆ ದೋಷಪೂರ್ಣ ಉಚ್ಚಾರವನ್ನು ಕೇಳಿ ನಕ್ಕುಬಿಡುತ್ತಿದ್ದರು. ಒಮ್ಮೆ ಈ ರೀತಿ ಬಿಲಾಲ್‌ರವರ ಅಝಾನ್ ಕೇಳಿ ಇತರರು ನಗುವುದನ್ನು ಹಝ್ರತ್ ಪೈಗಂಬರರು ನೋಡಿದಾಗ ಕೋಪದಿಂದ ಈ ರೀತಿ ಹೇಳಿದರು — "ನೀವು ಬಿಲಾಲ್‌ರ ಅಝಾನ್ ಕೇಳಿ ನಗುತ್ತೀರಿ. ಆದರೆ, ಅಲ್ಲಾಹನು ಅರ್ಷ್‌ನಲ್ಲಿ ಅವರ ಅಝಾನ್ ಕೇಳಿ ಸಂತುಷ್ಟನಾಗುತ್ತಾನೆ." ಅವರ ಹೇಳಿಕೆಯ ಸಂಜ್ಞೆಯು ಇದಾಗಿತ್ತು—

---

* ಲಾತ ಮತ್ತು ಉರ್‍ಝಾ ಎಂಬುದು ಮಕ್ಕಾದ ಕಅಬಾ ದೇವಾಲಯದಲ್ಲಿದ್ದ ಎರಡು ಪ್ರಧಾನ ವಿಗ್ರಹಗಳ ಹೆಸರು. ಅಲ್ಲಿದ್ದ ಇತರ ಮೂರ್ತಿಗಳಿಗಿಂತಲೂ ಈ ಎರಡು ಮೂರ್ತಿಗಳಿಗೆ ಅಂದಿನ ಅರಬರು ಹೆಚ್ಚಿನ ಮಹತ್ವ ನೀಡುತ್ತಿದ್ದರು. —ಅನುವಾದಕ

ಅಂದರೆ, ಬಿಲಾಲ್‌ರವರಿಗೆ 'ಶ' ಉಚ್ಚಾರವು ಬಾರದೆ ಇರುವುದನ್ನು ನೀವು ಕಾಣುತ್ತೀರಿ. ಅಂತೂ 'ಶ' ಅಥವಾ 'ಸ'ಗಳಲ್ಲಿ ಏನು ಅಡಗಿದೆ!? ಅಲ್ಲಾಹು ಚೆನ್ನಾಗಿ ಬಲ್ಲವನಾಗಿದ್ದಾನೆ. ಬಿಸಿ ಮರಳಿನ ಮೇಲೆ ನಗ್ನ ಶರೀರವಾಗಿ ಅವರನ್ನು ಮಲಗಿಸಿ ದುಷ್ಟ ಅಕ್ರಮಿಗಳು ಚಪ್ಪಲಿ ಕಾಲುಗಳಿಂದ ಅವರನ್ನು ತುಳಿಯುತ್ತಿದ್ದಾಗ, ಈಗಲಾದರೂ ಪಾಠ ಕಲಿತೆಯೋ ಎಂದು ಕೇಳುತ್ತಾ, ಕೇಳುತ್ತಾ ಹಿಂಸಿಸುತ್ತಿದ್ದಾಗ ಅವರು ತನ್ನ ತೊದಲು ನುಡಿಯಲ್ಲಿ ಅಹದ್, ಅಹದ್ ಎಂದು ಹೇಳುತ್ತಾ ಪರಮಾತ್ಮನ ಏಕತೆಯ ಘೋಷಣೆಯನ್ನು ಕೂಗಿದ್ದರೆಂದೂ, ತೌಹೀದಿನ ವಿಶ್ವಾಸದಲ್ಲಿರುವ ತನ್ನ ನಿಷ್ಠೆಯನ್ನೂ ವಿಶ್ವಾಸ ದಾರ್ಢ್ಯತೆಯನ್ನೂ ತೋರ್ಪಡಿಸಿದ್ದರೆಂದೂ ಪರಮಾತ್ಮನು ಚೆನ್ನಾಗಿ ಬಲ್ಲವನಾಗಿದ್ದಾನೆ. ಆದುದರಿಂದ ಅವರ 'ಅಸ್‌ಹದು' ಅನೇಕರ 'ಅಶ್‌ಹದು'ಗಿಂತಲೂ ಮಹತ್ವದ್ದಾಗಿತ್ತು.

ಅವರನ್ನು ಈ ರೀತಿಯ ಹಿಂಸೆಗೆ ಗುರಿಪಡಿಸಲಾಗುವುದನ್ನು ಕಂಡು ಹಝ್ರತ್ ಅಬೂಬಕರ್‌ರವರು ಅವರ ಯಜಮಾನನಿಗೆ ಬಿಡುಗಡೆ ಮೌಲ್ಯವನ್ನು ನೀಡಿ ದಾಸ್ಯ ವಿಮೋಚನೆ ಮಾಡಿದರು. ಅಂತೆಯೇ ಇನ್ನೂ ಅನೇಕ ಗುಲಾಮರನ್ನೂ ಅಬೂಬಕರ್ ತನ್ನ ಕೈಯಿಂದ ಹಣ ನೀಡಿ ಬಿಡುಗಡೆಗೊಳಿಸಿದರು. ಈ ರೀತಿ ಮುಕ್ತ ಗೊಳಿಸಲ್ಪಟ್ಟ ದಾಸರಲ್ಲೊಬ್ಬರಾದ ಸುಹೈಬ್ ಎಂಬವರು ನಂತರ ವ್ಯಾಪಾರದಿಂದ ಅಪಾರ ಧನ ಗಳಿಸಿದರು. ಅಪಾರ ಐಶ್ವರ್ಯವನ್ನು ಗಳಿಸಿ ಸುಹೈಬ್ ಮಕ್ಕಾದ ಧನಾಢ್ಯರಲ್ಲಿ ಒಬ್ಬರಾಗಿ ಗಣಿಸಲ್ಪಡುತ್ತಿದ್ದರು. ಅವರು ದಾಸ್ಯವಿಮೋಚನೆಗೊಳಿಸಲ್ಪಟ್ಟಿದ್ದೂ ಧನವಂತನಾಗಿದ್ದೂ ಕೂಡಾ ಮಕ್ಕಾದ ಖುರೈಷಿ ಗೋತ್ರದ ಜನರು ಅವರನ್ನೂ ಮರ್ದನೆಗೆ ಗುರಿಪಡಿಸುತ್ತಿದ್ದರು. ಮೂರ್ಛೆ ತಪ್ಪುವಂತೆ ಅವರನ್ನು ಹೊಡೆಯುತ್ತಿದ್ದರು. ಮುಹಮ್ಮದ್ ಪೈಗಂಬರರು ಮದೀನಾಗೆ ಹಿಜ್ರತ್* ಮಾಡಿ ಹೋದಾಗ ಸುಹೈಬ್ ಸಹ ಮಕ್ಕಾವನ್ನು ಬಿಟ್ಟು ಮದೀನಾಗೆ ಹೋಗಿ ನೆಲೆಸಲು ಬಯಸಿದರು. ಆದರೆ ಮಕ್ಕಾದ ಜನರು ನೀನು ಮಕ್ಕಾದಲ್ಲಿ ಸಂಪಾದಿಸಿದ ಐಶ್ವರ್ಯವನ್ನು ಇಲ್ಲಿಂದ ಹೊರಗೆ ಕೊಂಡೊಯ್ಯುವೆಯಾ ? ನಿನ್ನನ್ನು ಮಕ್ಕಾ ಬಿಟ್ಟು ಹೊರ ಹೋಗಲು ನಾವು ಬಿಡಲಾರೆವು ಎಂದು ಹೇಳಿ ಅವರನ್ನು ತಡೆದರು. ಅವರೊಡನೆ ಸುಹೈಬ್ ಈ ರೀತಿ ಕೇಳಿದರು: ನಾನು ನನ್ನ ಸಕಲ ಧನ ಸಂಪತ್ತನ್ನೂ ನಿಮಗೇ ವಹಿಸಿಕೊಟ್ಟು ಹೋಗುವೆನೆಂದಾದರೆ ನನಗೆ ಹೋಗಲು ಅನುಮತಿಯಿದೆಯೇ ? ಮಕ್ಕಾದ ಜನರು ಇದಕ್ಕೆ ಒಪ್ಪಿದಾಗ ಹಝ್ರತ್ ಸುಹೈಬ್ ತನ್ನ ಎಲ್ಲಾ ಆಸ್ತಿ ಐಶ್ವರ್ಯಗಳನ್ನೂ ಮಕ್ಕಾದಲ್ಲೇ ಉಪೇಕ್ಷಿಸಿ ಬರಿಗೈಯಿಂದ ಮದೀನಾಕ್ಕೆ ಹೋಗಿ ಪೈಗಂಬರರನ್ನು ಸೇರಿಕೊಂಡರು. ರಸೂಲ್ ಕರೀಂ (ಸ)ರವರು ಸುಹೈಬ್‌ರನ್ನು ನೋಡಿ ಸಂತೋಷದಿಂದ ಹೇಳಿದರು: ಸುಹೈಬ್, ಈಗ ನೀವು ಮಾಡಿದ ವ್ಯಾಪಾರವು ಮೊದಲಿನ ಎಲ್ಲ ವ್ಯಾಪಾರಕ್ಕಿಂತಲೂ ಲಾಭದಾಯಕವಾಗಿದೆ. ಮೊದಲು ನೀವು ಸಾಮಗ್ರಿಗಳನ್ನು ಮಾರಿ ಧನ ಸಂಪಾದಿಸುತ್ತಿದ್ದಿರಿ. ಈಗ ಧನವನ್ನು ಮಾರಿ ಸತ್ಯವಿಶ್ವಾಸವನ್ನು ಸಂಪಾದಿಸಿದ್ದೀರಿ!

ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಗುಲಾಮರಲ್ಲಿ ಹೆಚ್ಚಿನವರು ಆಂತರಿಕವಾಗಿಯೂ ಬಾಹ್ಯವಾಗಿಯೂ ವಿಶ್ವಾಸದಲ್ಲಿ ದೃಢವಾಗಿ ಅಚಲರಾಗಿ ನಿಂತರು. ಆದರೆ, ಅವರಲ್ಲಿ ಕೆಲವರು ಬಾಹ್ಯವಾಗಿ ದೌರ್ಬಲ್ಯ ತೋರ್ಪಡಿಸಿದವರೂ ಇದ್ದರು. ಒಮ್ಮೆ ಹಝ್ರತ್ ಪೈಗಂಬರರು ಅಮ್ಮಾರ್ ಎಂಬ ಹೆಸರಿನ ವಿಮೋಚಿತ ದಾಸನ ಬಳಿಯಿಂದ ಹಾದು ಹೋಗುತ್ತಿದ್ದಾಗ ಅವರು ವೇದನೆಯಿಂದ ನರಳುತ್ತಾ ಕಣ್ಣೀರಿಡುತ್ತಾ ವಿಲಾಪಿಸುತ್ತಿರುವುದನ್ನು ಕಂಡರು. ಒಡನೆಯೇ ಪೈಗಂಬರರು ಅವರನ್ನು ಸಮೀಪಿಸಿ ವಿಷಯವೇನೆಂದು ವಿಚಾರಿಸಿದಾಗ ಅಮ್ಮಾರ್ ನಿಟ್ಟುಸಿರು ಬಿಡುತ್ತಾ ಹೇಳತೊಡಗಿದರು—ಓ, ಅಲ್ಲಾಹನ ಪ್ರವಾದಿಯರೇ, ನನ್ನನ್ನು ಜನರು ಬಹಳವಾಗಿ ಹೊಡೆದು ಹಿಂಸಿಸಿದರು. ಎಷ್ಟರವರೆಗೆಂದರೆ, ತಮಗೆ ವಿರುದ್ಧವಾದ ಮಾತುಗಳೂ ಅವರ ದೇವತೆಗಳ ಪರವಾಗಿ ಕೀರ್ತನೆಗಳೂ ನನ್ನ ಬಾಯಿಯಿಂದ ಹೊರಡುವ ತನಕ ಅವರು ನನಗೆ ಹೊಡೆಯುವುದನ್ನು ನಿಲ್ಲಿಸಲಿಲ್ಲ. ಪೈಗಂಬರರು ಕೇಳಿದರು — ಆ ಸಂದರ್ಭದಲ್ಲಿ ನಿಮ್ಮ ಅಂತರಾತ್ಮದ ಅನುಭವವು ಹೇಗಿತ್ತು ? ಅಮ್ಮಾರ್ ಉತ್ತರಿಸಿದರು—ನನ್ನ ಹೃದಯವಾದರೆ ಆ ವೇಳೆಯಲ್ಲೂ ಅವಿಚಲಿತ ವಿಶ್ವಾಸದಿಂದಲೂ ಅಚಲವಾದ ಏಕದೈವ ನಂಬಿಕೆಯಿಂದಲೂ ಪುಳಕಿತವಾಗಿತ್ತು. ಆಗ ಪೈಗಂಬರರು ಈ ರೀತಿ ನುಡಿದರು: ಹೃದಯದಲ್ಲಿ ಸತ್ಯವಿಶ್ವಾಸವು ಅಚಲವಾಗಿದ್ದರೆ ನಿಮ್ಮ ಬಾಹ್ಯ ದೌರ್ಬಲ್ಯವನ್ನು ಅಲ್ಲಾಹು ಕ್ಷಮಿಸುವನು.

---

* ಅತ್ಯಾಚಾರ ಮತ್ತು ಹಿಂಸೆಗಳನ್ನು ತಡೆಯಲಾರದೆ, ವಿಶ್ವಾಸ ಸಂರಕ್ಷಣೆಗಾಗಿ ಸ್ವದೇಶ ತ್ಯಾಗ ಮಾಡುವುದನ್ನು ಅರಬಿ ಭಾಷೆಯಲ್ಲಿ ಹಿಜ್ರತ್ ಎಂದು ಕರೆಯಲಾಗುವುದು—ಅನುವಾದಕ.

ಅಮ್ಮಾರ್‌ರವರ ತಂದೆ ಯಾಸಿರ್ ಹಾಗೂ ತಾಯಿ ಸಮಿಯ್ಯರವರೂ ಅವಿಶ್ವಾಸಿಗಳ ಅತಿ ಕ್ರೂರವಾದ ಹಿಂಸೆಗೆ ಗುರಿಯಾಗಿದ್ದರು. ಒಂದು ದಿನ ಮುಹಮ್ಮದ್ ಪೈಗಂಬರರು ಆ ಕಡೆಯಿಂದ ಹಾದು ಹೋಗುತ್ತಿದ್ದಾಗ ಮಾನವ ವೇಷಧಾರಿಗಳಾದ ರಾಕ್ಷಸೀ ಸ್ವಭಾವದ ಕೆಲವು ವಿರೋಧಿಗಳು ಅವರಿಬ್ಬರನ್ನೂ ರೋಮಾಂಚಕ ಹಿಂಸೆಗೆ ಗುರಿಪಡಿಸುವುದು ಕಾಣಿಸುತ್ತಿತ್ತು. ಆ ಭಯಾನಕ ಪೀಡನೆಗಳನ್ನು ಕಂಡು ಪೈಗಂಬರರ ಹೃದಯವು ಕರಗಿತು. ಅವರು ಈ ರೀತಿ ಕೂಗಿ ಹೇಳಿದರು–

ಸಬ್‌ರನ್ ಯಾ ಆಲ ಯಾಸಿರ್ ಮೌಇದತು ಕುಮುಲ್ ಜನ್ನತ.

“ಎಲೈ ಯಾಸಿರ್ ಕುಟುಂಬವೇ ತಾಳ್ಮೆಯಿಂದ ಸಹಿಸಿ ಕೊಳ್ಳಿರಿ; ಪರಮಾತ್ಮನು ನಿಮಗಾಗಿ ಸ್ವರ್ಗವನ್ನು ತಯಾರಿಸಿಟ್ಟಿದ್ದಾನೆ.”

ಈ ಪ್ರವಾದನೆಯ ಮಾತು ಕೆಲವೇ ದಿನಗಳಲ್ಲಿ ಪೂರ್ತಿಯಾಯಿತು. ಹೇಗೆಂದರೆ, ಯಾಸಿರ್‌ರನ್ನು ಶತ್ರುಗಳು ಹೊಡೆದು ಹೊಡೆದೇ ಸಾಯಿಸಿದರು. ಯಾಸಿರ್ ಇಹಲೋಕ ತ್ಯಾಗ ಮಾಡಿದರೂ ಅವಿಶ್ವಾಸಿಗಳ ರಕ್ತದಾಹ ಅಡಗಲಿಲ್ಲ. ಆ ಪ್ರಾಯಸ್ಥ ಮಹಿಳೆಯಲ್ಲೂ ಅವರು ಹಿಂಸೆಯನ್ನು ಮುಂದುವರಿಸಿದರು. ಕೊನೆಗೆ ಒಂದು ದಿನ ಅಬೂಜಹಲ್ ತನ್ನ ಈಟಿಯಿಂದ ಆ ಮಹಿಳೆಯನ್ನು ತಿವಿದು ಸಾಯಿಸಿದ.

ಜನ್ನೀರಾ ಎಂಬ ದಾಸಿಯು ಅಬೂಜಹಲನ ಕ್ರೂರ ಹಿಂಸೆಯ ಫಲವಾಗಿ ತನ್ನ ಕಣ್ಣುಗಳನ್ನು ಕಳೆದು ಕೊಂಡಳು. ಸಫ್‌ವಾನಿಬ್ನು ಉಮಯ್ಯನ ದಾಸ್ಯದಲ್ಲಿದ್ದ ಅಬೂಫುಕೈಹಾ ಎಂಬವರನ್ನು ಯಜಮಾನನೂ ಕುಟುಂಬದವರೂ ಸೇರಿ ಬಿಸಿ ಹೊಯಿಗೆಯಲ್ಲಿ ಮಲಗಿಸಿ ದೊಡ್ಡ ದೊಡ್ಡ ಕಾದ ಕಲ್ಲುಗಳನ್ನು ಅವರ ಎದೆಯ ಮೇಲಿರಿಸಿದರು. ಪರಿಣಾಮವಾಗಿ ಅವರ ನಾಲಗೆಯು ಹೊರಬಂತು. ಇತರ ದಾಸ ದಾಸಿಯರ ಅವಸ್ಥೆಯೂ ಇದೇ ಪ್ರಕಾರವೇ ಇತ್ತು.

ನಿಸ್ಸಂದೇಹವಾಗಿಯೂ ಈ ರಾಕ್ಷಸೀಯ ಅತ್ಯಾಚಾರಗಳನ್ನು ಸಹಿಸಲು ಮನುಷ್ಯ ಮಾತ್ರರಿಂದ ಎಂದಿಗೂ ಸಾಧ್ಯವಿಲ್ಲ. ಆದರೆ, ಯಾವ ಮನುಷ್ಯರ ಮೇಲೆ ಈ ಕ್ರೂರ ಕೃತ್ಯಗಳು ಎಸಗಲ್ಪಡುತ್ತಿತ್ತೊ, ಅವರು ತೋರಿಕೆಗೆ ಮನುಷ್ಯರಾಗಿದ್ದರೂ ಆಧ್ಯಾತ್ಮಿಕವಾಗಿ ಅತಿಮಾನುಷರಾಗಿದ್ದರು. ಪವಿತ್ರ ಖುರ್‌ಆನ್ ಮುಹಮ್ಮದ್ ಪೈಗಂಬರರಿಗೆ ಅವತೀಣವಾಗುತ್ತಿದ್ದರೂ ಸತ್ಯವಿಶ್ವಾಸಿಗಳ ಹೃದಯಗಳಲ್ಲೂ ಅಲ್ಲಾಹನಿಂದ ಸುವಾರ್ತೆಗಳೂ ಅವನ ಅಮೃತ ವಚನಗಳೂ ಅವತೀರ್ಣವಾಗುತ್ತಿದ್ದವು. ದೇವರ ನೇರವಾದ ಸಂಪರ್ಕವು ಉಂಟಾಗದೆ ಇದ್ದಲ್ಲಿ ಈ ರೀತಿಯ ಬರ್ಬರ ಅತ್ಯಾಚಾರಗಳನ್ನು ತಾಳ್ಮೆಯಿಂದ ಸಹಿಸಲು ಯಾರಿಂದಲೂ ಸಾಧ್ಯವಿಲ್ಲ. ಪ್ರಥಮ ವಿಶ್ವಾಸಿಗಳ ಹೃದಯಗಳಲ್ಲಿ ದೇವರ ವಾಕ್ಯಗಳು ಪ್ರಕಟವಾಗದೆಯೇ ಯಾವ ಧರ್ಮವೂ ಸ್ಥಾಪನೆಗೊಳ್ಳಲು ಸಾಧ್ಯವಿಲ್ಲ. ಸ್ವಜನರು ಅವರನ್ನು ಉಪೇಕ್ಷಿಸಿದರು; ಕುಟುಂಬದವರೂ ಸಂಬಂಧಿಕರೂ ಅವರಿಂದ ಮುಖ ತಿರುಗಿಸಿದರು, ಆಗ ಅವರ ಅಂತಃಕರಣಗಳಿಗೆ ಅಲ್ಲಾಹು ಹೇಳಿದನು: ನಾನು ನಿಮ್ಮೊಂದಿಗಿದ್ದೇನೆ, ನಿಮ್ಮ ಸಹಾಯಕನಾಗಿ ನಾನಿದ್ದೇನೆ– ಎಂದು. ದುಃಖವು ಅವರಿಗೆ ನೆಮ್ಮದಿಯಾಗಿ ಮಾರ್ಪಟ್ಟಿತು. ನಿಂದನೆಗಳು ಅವರಿಗೆ ಪ್ರಾರ್ಥನೆಯ ಫಲನೀಡಿತು. ಕಲ್ಲೇಟು ಸೌಮ್ಯಲೇಪನವಾಯಿತು. ವಿರೋಧಿಗಳ ಕ್ರೂರತೆಯೂ ಅತ್ಯಾಚಾರವೂ ವರ್ಧಿಸಿದಂತೆಯೇ ಸತ್ಯವಿಶ್ವಾಸಿಗಳ ವಿಶ್ವಾಸದಾರ್ಢ್ಯತೆಯೂ ಆಧ್ಯಾತ್ಮಿಕತೆಯೂ ಪ್ರಗತಿಗೊಂಡಿತು. ಅಕ್ರಮವು ಅದರ ಪರಮಾವಧಿಯನ್ನು ತಲಪಿದಾಗ ಇಸ್ಲಾಮಿನೊಡನೆ ಆ ಮುಸ್ಲಿಮರ ಅನುರಾಗವೂ ಪೂರ್ವ ಸೀಮೆಗಳನ್ನು ಭೇದಿಸಿ ಇತಿಹಾಸದಲ್ಲೇ ಒಂದು ಮಹಾನ್ ಆದರ್ಶವಾಗಿ ಬೆಳಗುವಂತಾಯಿತು. ●


# ಯುಗರಶ್ಮಿಗೆ ಚಂದಾದಾರರಾಗಿರಿ

**ವಾರ್ಷಿಕ ಚಂದಾ : ರೂ. 4-00** **ಬಿಡಿಪ್ರತಿ : ರೂ. 1-00**

# ಯೇಸು ವಿವಾಹಿತರಾಗಿದ್ದರು

ಲಂಡನ್: ಮಗ್ದಲನ ಮೇರಿಯನ್ನು ಯೇಸು ವಿವಾಹವಾಗಿದ್ದರೆಂದೂ ಅವರಿಗೆ ಒಂದು ಮಗು ಜನಿಸಿತ್ತೆಂದೂ ಸೋಮವಾರ ಇಲ್ಲಿ ಪ್ರಕಾಶನಗೊಂಡ ಒಂದು ಪುಸ್ತಕ ಅಭಿಪ್ರಾಯಪಟ್ಟಿದೆ.

'ಪವಿತ್ರ ರಕ್ತ ಪವಿತ್ರ ತಟ್ಟೆ'* ಎಂಬ ಈ ಪುಸ್ತಕದಲ್ಲಿ ಯೇಸು ಶಿಲುಬೆಯಿಂದ ರಕ್ಷಿಸಲ್ಪಟ್ಟಿದ್ದರೆಂದೂ ಅವರ ಸಂತತಿಗಳಿಗೆ ಸೇರಿದವರು ಯುರೋಪಿನ ಪ್ರಭು ಕುಟುಂಬಗಳಲ್ಲಿ ಈಗಲೂ ಇದ್ದಾರೆಂದೂ ಪ್ರಸ್ತಾವಿಸಲಾಗಿದೆ.

ಬ್ರಿಟಿಷನಾದ ಲಿಂಕನ್, ಅಮೇರಿಕದವನಾದ ನೋವಲಿಸ್ಟ್ ರಿಚಾರ್ಡ್ ಲೆಯ್, ನ್ಯೂಜಿಲೇಂಡ್‌ನವನಾದ ಮೈಕಲ್ ಬೈಗೆಂಟ್ ಎಂಬ ಮೂವರು ಸೇರಿ ಈ ಪುಸ್ತಕವನ್ನು ರಚಿಸಿದ್ದಾರೆ. ಹತ್ತು ವರ್ಷ ಕಾಲ ತಾವು ಸಂಶೋಧನೆ ನಡೆಸಿದ್ದೇವೆಂದು ಅವರು ಹೇಳುತ್ತಾರೆ. (ಮಾತೃಭೂಮಿ 23–1–82).

ಇದು ಖುರ್‌ಆನಿನ ಅಧ್ಯಾಪನಗಳ ಸತ್ಯತೆಗೆ ಸಾಕ್ಷೀಕರಿಸುವ ಒಂದು ವಾಸ್ತವಾಂಶವಾಗಿದೆ. ಆ ಪವಿತ್ರ ಗ್ರಂಥ ಹೇಳಿದ ಸತ್ಯ ಈಗಲಾದರೂ ಒಂದು ವಿಭಾಗದ ಬುದ್ಧಿ ಜೀವಿಗಳಿಗೆ ಮನವರಿಕೆಯಾಗಲು ತೊಡಗಿದ್ದು ಶುಭ ಸೂಚಕವೇ ಸರಿ. ಮುಹಮ್ಮದ್ ಪೈಗಂಬರರಿಗೆ ಮೊದಲು ಬಂದ ಪ್ರವಾದಿಗಳು ವಿವಾಹಿತರಾಗಿದ್ದರೆಂದೂ ಅವರಿಗೆ ಸಂತತಿಗಳಿದ್ದವೆಂದೂ ಖುರ್‌ಆನ್ ಸ್ಪಷ್ಟವಾಗಿ ಹೇಳುತ್ತದೆ (ಖುರ್‌ಆನ್ 13:39). ಮುಹಮ್ಮದ್ ಪೈಗಂಬರರಿಗೆ ನಿಕಟ ಪೂರ್ವದಲ್ಲಿ ಬಂದ ಪ್ರವಾದಿಯಾದ ಈಸಾನಬಿ (ಯೇಸು) ಅವರಲ್ಲಿ ಒಳಪಡುವರೆಂದು ಹೇಳಬೇಕಾಗಿಲ್ಲವಷ್ಟೆ.

ಕ್ರೈಸ್ತರ ಪೈಕಿ ಮೋರ್ಮನ್ ಪಂಥೀಯರು ಯೇಸು ವಿವಾಹಿತರಾಗಿದ್ದರೆಂದೂ ಬಹುಪತ್ನೀತ್ವ ಕೈಗೊಂಡಿದ್ದರೆಂದೂ ನಂಬುತ್ತಾರೆ. ಮಗ್ದಲನ ಮೇರಿ, ಮಾರ್ತಾ ಎಂಬೀ ಮಹಿಳೆಯರು ಆ ಮಹಾತ್ಮರ ಸಹಧರ್ಮಿಣಿಯರೆಂದು ಅವರು ಹೇಳುತ್ತಾರೆ. ಬೈಬಲಿನ ವಿವರಣೆಗಳೇ ಅವರ ಈ ವಿಶ್ವಾಸಕ್ಕೆ ಆಧಾರ.

ಪ್ರವಾದಿ ಯೇಸು ವಿವಾಹಿತರಾಗಿದ್ದರೆಂದು ನಂಬುವುದರಲ್ಲಿ ಅಸಾಂಗತ್ಯವೇನೂ ಇಲ್ಲ. ಮಾತ್ರವಲ್ಲ, ಆ ಮಹಾತ್ಮರು ವಿವಾಹಿತರಾಗಿದ್ದರೆಂದು ನಂಬುವುದು ಅವರ ಸಂಬಂಧಿಸಿ ಭೂಷಣವಾಗಿದೆ. ತದ್ವಿರುದ್ಧವಾಗಿ ಅವರು ಅವಿವಾಹಿತರಾಗಿದ್ದರೆಂದಾದ ಪಕ್ಷದಲ್ಲಿ ಅವರು ಪುರುಷತ್ವ ನಷ್ಟಹೊಂದಿದ ಷಂಡರಾಗಿದ್ದರೆಂದು ಭಾವಿಸಬೇಕಾದೀತು. ಅದು ಒಬ್ಬ ಪ್ರವಾದಿಗೆ ಭೂಷಣವಲ್ಲವಷ್ಟೆ.

ಈಸಾನಬಿ (ಯೇಸು ಪ್ರವಾದಿ) ಶಿಲುಬೆಯ ಮೇಲಿನ ಮರಣದಿಂದ ಪಾರಾಗಿದ್ದರೆಂಬ ಸತ್ಯಾಂಶ ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಪ್ರಸ್ತಾವಿಸಲಾಗಿದೆ (ಖುರ್‌ಆನ್ 4 : 158).

ಅವರು ಶಿಲುಬೆಯ ಮೇಲಿನ ಮೃತ್ಯುವನ್ನು ಗೆದ್ದು ಇಸ್ರಾಯಿಲ್ ಸಮುದಾಯದ ಕಾಣೆಯಾದ ಗೋತ್ರಗಳನ್ನು ಹುಡುಕಿಕೊಂಡು ಅವರಿಗೆ ಪ್ರಬೋಧಿಸಲಿಕ್ಕಾಗಿ ಪೂರ್ವ ದೇಶಗಳಲ್ಲಿ ಸಂಚರಿಸಿದರು. ಕೊನೆಗೆ 120ನೇ ವಯಸ್ಸಿನಲ್ಲಿ ಕಾಶ್ಮೀರದ ಶ್ರೀ ನಗರದಲ್ಲಿ ಸ್ವಾಭಾವಿಕವಾಗಿ ಮರಣವನ್ನಪ್ಪಿದರು. ಅಲ್ಲಿ ಅವರ ಸಮಾಧಿ ಇದೆ. ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಈ ವಾಸ್ತವಾಂಶವನ್ನು ಮೊತ್ತ

* The Holy Blood and The Holy Grail.

ಮೊದಲಿಗೆ ಲೋಕಕ್ಕೆ ಬಹಿರಂಗ ಪಡಿಸಿದರು. ಈ ಬಗ್ಗೆ ಅವರು ಬರೆದ "ಮಸೀಹ್ ಹಿಂದುಸ್ತಾನ್ ಮೆ" (Jesus in India) ಎಂಬ ಪುಸ್ತಕ ಲೋಕದಲ್ಲಿ ದೊಡ್ಡದಾದೊಂದು ಕೋಲಾಹಲವನ್ನು ಸೃಷ್ಟಿಸಿತು. ಆದರೆ ಇತ್ತೀಚಿಗಿನ ಕಾಲದಲ್ಲಿ ಕೆಲವು ಪಾಶ್ಚಾತ್ಯ ವಿದ್ವಾಂಸರು ಈ ಸತ್ಯವನ್ನು ಸಮ್ಮತಿಸಲು ತೊಡಗಿದ್ದಾರೆ. ಅವರು ಈ ಬಗ್ಗೆ ಸಂಶೋಧನಾತ್ಮಕ ಲೇಖನಗಳನ್ನೂ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಅವರ ಪೈಕಿ ಫೇಬರ್ ಕೈಸರ್ ಎಂಬ ಜರ್ಮಾನಿಗಾರ ಬರೆದ **Jesus died in Kashmir** ಎಂಬ ಕೃತಿ ಹೆಚ್ಚು ಪ್ರಸಿದ್ಧಿ ಪಡೆದಿದೆ. ಹಾಗೆಯೇ, ಇನ್ನಿತರ ವಿದ್ವಾಂಸರು ಸಹ ಈ ವಿಷಯದಲ್ಲಿ ಪುಸ್ತಕಗಳನ್ನು ಬರೆದಿದ್ದಾರೆ. ಮೇಲೆ ಉದ್ಧರಿಸಲಾದ ವರದಿಯಲ್ಲಿ ಹೇಳಿದ 'ಪವಿತ್ರ ರಕ್ತ ಪವಿತ್ರ ತಟ್ಟೆ' ಎಂಬ ಪುಸ್ತಕ ಈ ಸರಣಿಯಲ್ಲಿ ತೀರಾ ಇತ್ತೀಚೆಗಿನದು. ಆ ಗ್ರಂಥಕರ್ತರನ್ನು ನಾವು ಅಭಿನಂದಿಸುತ್ತೇವೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಯೇಸು ಕ್ರಿಸ್ತರ ಅನುಯಾಯಿಗಳೆಂದು ಹೇಳಿಕೊಳ್ಳುವವರು ಅವರ ದೌತ್ಯವನ್ನು ತೀರಾ ಬುಡಮೇಲಾಗಿ ಮಾಡಿದ್ದಾರೆ. ಮಾನವಪ್ರವಾದಿಯಾದ ಅವರನ್ನು ದೇವ ಪುತ್ರನೆಂದೂ ದೇವನೆಂದೂ ಕರೆದರು. ಇಸ್ರಾಯೇಲ್ ಗೋತ್ರಕ್ಕೆ ಮಾತ್ರ ನಿಯುಕ್ತರಾಗಿದ್ದ, ಮೋಸೆಸ್ ಪ್ರವಾದಿ (ಮೂಸಾನಬಿ)ಯ ಧರ್ಮಶಾಸ್ತ್ರ (ತೌರಾತ್)ದ ಪ್ರಬೋಧಕರಾಗಿದ್ದ ಅವರನ್ನು ಸಮಸ್ತ ಲೋಕದ ರಕ್ಷಕನೆಂದು ಕರೆದರು. ಪಾಪಪರಿಹಾರವೆಂಬ ನೂತನ ಸಿದ್ಧಾಂತವನ್ನು ನಿರ್ಮಿಸಿ ಎಲ್ಲಾ ಮನುಷ್ಯರನ್ನು ಪಾಪಿಗಳೆಂದು ಚಿತ್ರೀಕರಿಸಿ ಕಲ್ಪಿತ ಶಿಲುಬಾಮರಣದ ಮೂಲಕ ಯೇಸು ಕ್ರಿಸ್ತರನ್ನು ಶಾಪಗ್ರಸ್ತರನ್ನಾಗಿ ಮಾಡಿದರು. ಪರಿಶುದ್ಧ ವಿವಾಹ ಜೀವನವನ್ನು ನಡೆಸಿದ ಆ ಪುಣ್ಯಾತ್ಮರನ್ನು ಅವಿವಾಹಿತನೆಂದು ಹೇಳಿದರು. ಮರಣ ಹೊಂದಿ ಮಣ್ಣಿನಲ್ಲಿ ಮರೆಯಾದ ಅವರನ್ನು ಆಕಾಶಕ್ಕೆ ಆರೋಹಿಸಿದರು. ಅವರು ಪುನರಾಗಮಿಸುವರೆಂಬ ಮಿಥ್ಯಾ ನಿರೀಕ್ಷೆ ಸಹ ಪೋಷಿಸಲ್ಪಡುತ್ತಿದೆ. ಪರಮಾತ್ಮನು ಅವರಿಗೆ ಸತ್ಯವನ್ನು ಗ್ರಹಿಸುವರೆ ಸನ್ಮನಸ್ಸನ್ನು ನೀಡಲಿ.

—ಸತ್ಯದೂತನ್.


# A Man That is Called JESUS

**By A. R. MALABARI**

Highly interesting English volume.
A critical study on the life and character of Jesus
covering 400 pages Demi 1/8 size. Price : Rs. 30-00.

PLEASE CONTACT:

**M. ALIKOYA**
**Y. M. C. A. Road, CALICUT**

### ಹದೀಸ್ ವ್ಯಾಖ್ಯಾನ

# ಆಖಿರುಲ್ ಅಂಬಿಯಾ*

—ಹಝ್ರತ್ ಮಿರ್ಝಾ ಬಶೀರ್ ಅಹ್ಮದ್

**ಅನ್ ಅಬೀ ಹುರೈರತ ಯಖೂಲು ಖಾಲ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ, ಇನ್ನೀ ಆಖಿರುಲ್ ಅಂಬಿಯಾಇ ವಇನ್ನ ಮಸ್‌ಜಿದೀ ಹಾದಾ ಆಖಿರುಲ್ ಮಸಾಜಿದ್. (ಸಹೀಹ್ ಮುಸ್ಲಿಂ)**

**ಅರ್ಥ:** ಅಬೀಹುರೈರ (ರ) ಹೇಳುತ್ತಾರೆ, ಪವಿತ್ರ ನಬಿಯವರು ಈ ರೀತಿ ಹೇಳಿದರು – ನಾನು ಕೊನೆಯ ಪ್ರವಾದಿಯಾಗಿರುವೆನು; ಮತ್ತು ನನ್ನ ಈ (ಮದೀನದಲ್ಲಿರುವ) ಮಸೀದಿಯು ಕೊನೆಯ ಮಸೀದಿಯಾಗಿದೆ.

**ವಿವರಣೆ:** ಸುಪ್ರಧಾನವಾದ ಈ ಹದೀಸ್‌ನಲ್ಲಿ ನಮ್ಮ ನಾಯಕರಾದ ಮುಹಮ್ಮದ್ ಪೈಗಂಬರ್ (ಸ) ತಾನು ಕೊನೆಯ ಪ್ರವಾದಿಯಾಗಿರುವೆನೆಂದೂ ತನ್ನ ನಂತರ ತನ್ನ ಪ್ರವಾದಿತ್ವವನ್ನು ಕಾಲಹರಣ ಪಡಿಸುವಂತಹ ಮತ್ತು ತನಗೆ ವಿರೋಧವಾಗಿ ಒಂದು ಹೊಸ ಧಾರ್ಮಿಕ ರೀತಿಯನ್ನು ಪ್ರಬೋಧಿಸುವಂತಹ ಸುಧಾರಕನು ಬರಲಾರನೆಂದೂ ನಮಗೆ ತಿಳಿಸಿಕೊಟ್ಟಿದ್ದಾರೆ. ಆದರೆ, ತನ್ನ ನಂತರ ಬರಲಿರುವ ಸುಧಾರಕನು ನಿಶ್ಚಯವಾಗಿಯೂ ತನ್ನ ಅನುಗಾಮಿಯೂ ತನ್ನ ಶಿಷ್ಯನೂ ತನ್ನ ಧರ್ಮಶಾಸ್ತ್ರದ ಸೇವಕನೂ ಆಗಿರುವುದರಿಂದ ಅಂತಹವರ ಬರುವಿಕೆಯು ತನ್ನ ಪ್ರವಾದಿತ್ವದ ಒಳಗೆಯೇ ಆಗಿರುವುದು; ಅದನ್ನು ಎಂದಿಗೂ ತನ್ನ ನುಬುವತ್ತಿನ ಹೊರಗೆ ಯಾ ನಂತರ ಎಂದು ಹೇಳಲು ಸಾಧ್ಯವಿಲ್ಲವೆಂದು ಸೂಚಿಸಿದ್ದಾರೆ. ಈ ವಿಷಯವನ್ನು ವ್ಯಕ್ತಪಡಿಸಲಿಕ್ಕಾಗಿ ಪೈಗಂಬರರು, ಮಸ್‌ಜಿದೀ ಹಾದಾ ಅಖಿರುಲ್ ಮಸಾಜಿದ್, ಎಂದರೆ "ನನ್ನ ಈ (ಮದೀನದ) ಮಸೀದಿಯು ಕೊನೆಯ ಮಸೀದಿಯಾಗಿದೆ" ಎಂಬ ವಾಕ್ಯವನ್ನು ಸೇರಿಸಿ ಹೇಳಿರುತ್ತಾರೆ. ಈಗ, ಇನ್ನು ಮುಂದೆ ಲೋಕದಲ್ಲಿ ಮಸೀದಿಯೇ ಉಂಟಾಗಲಾರದು ಎಂದು ಈ ವಚನಕ್ಕೆ ಅರ್ಥ ಕಲ್ಪಿಸಲು ಸಾಧ್ಯವಿಲ್ಲವೆಂಬುದು ಸ್ಪಷ್ಟ. ಆ ರೀತಿ ಸಂಭವಿಸಲೂ ಇಲ್ಲ. ಈ ವಚನಕ್ಕೆ "ಇನ್ನು ಮುಂದೆ ನನ್ನ ಮಸೀದಿಗೆ ವಿರೋಧವಾಗಿರುವ ಯಾವುದೇ ಮಸೀದಿ ಉಂಟಾಗಲಾರದು" ಎಂದಷ್ಟೇ ಅರ್ಥ ನೀಡಲು ಸಾಧ್ಯವಿದೆ. ಇನ್ನು ಮುಂದೆ ನಿರ್ಮಿಸಲ್ಪಡುವ ಯಾವ ಮಸೀದಿಯೂ ನನ್ನ ಈ ಮಸೀದಿಯ ರೀತಿಯಲ್ಲೂ ಅದರ ನಕಲೂ ಅದರ ಒಂದು ಪ್ರತಿಚ್ಛಾಯೆಯೂ ಮಾತ್ರವಾಗಿರುವುದು ಎಂದಾಗಿದೆ ಅದರ ತಾತ್ಪರ್ಯ.

ಇದೇ ರೀತಿಯಲ್ಲಿ ಇನ್ನೀ ಆಖಿರುಲ್ ಅಂಬಿಯಾಇ, ಎಂದರೆ "ನಾನು ಕೊನೆಯ ಪ್ರವಾದಿಯಾಗಿರುವೆನು" ಎಂಬುದಕ್ಕೂ ನನ್ನ ನಂತರ ನನ್ನ ಅನುಸರಣೆಯಿಂದ ವಿಮುಕ್ತನಾಗಿ, ನನ್ನ ಪ್ರವಾದಿತ್ವಕ್ಕೆ ವಿರುದ್ಧವಾಗಿ ಮತ್ತು ನನ್ನ ಧರ್ಮವನ್ನು ಉಪೇಕ್ಷಿಸಿ ಬೇರೊಂದು ಧರ್ಮವನ್ನು ಪ್ರಬೋಧಿಸುವ ಪ್ರವಾದಿಯು ಬರಲಾರ ಎಂದೇ ಅರ್ಥವಿದೆ. ನನ್ನ ನಂತರ ಯಾರಾದರೂ ಸುಧಾರಕ ಬರುವನಾದರೆ, ನನ್ನ ಸೇವಕನೂ ಶಿಷ್ಯನೂ ನನ್ನ ಅನುಯಾಯಿಯೂ ನನ್ನ ಒಂದು ಪ್ರತಿಚ್ಛಾಯೆಯೂ ಮಾತ್ರವಾಗಿರುವನು; ಅಂತಹ ವ್ಯಕ್ತಿಯು ನನ್ನದೇ ಒಂದು ಭಾಗವಾಗಿರುವನು ಎಂದು ತಾತ್ಪರ್ಯ.

ಇದೇ ಮಹತ್ವಪೂರ್ಣ ಸಿದ್ಧಾಂತವನ್ನು ಘೋಷಿಸುತ್ತಾ ಪವಿತ್ರ ಖುರ್‌ಆನಿನ ಒಂದು ವಚನದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ "ಖಾತಮುನ್ನಬಿಯ್ಯೀನ್" (ಪ್ರವಾದಿಗಳ ಮುದ್ರೆ) ಎಂಬ ಮಹಿಮಾನಾಮವು ನೀಡಲ್ಪಟ್ಟಿದೆ. ಚೆನ್ನಾಗಿ ಯೋಚಿಸಿರಿ, ನಬೀಕರೀಂ (ಸ) ರವರು ಮದೀನದಲ್ಲಿ ನಿರ್ಮಿಸಿದ ಮಸೀದಿಯ ನಂತರ ಮುಸ್ಲಿಂ ರಾಷ್ಟ್ರಗಳಲ್ಲಿ ಕೋಟಿಗಟ್ಟಲೆ ಮಸೀದಿಗಳು

---

* ಲೇಖಕರ "ಚಾಲೀಸ್ ಜವಾಹರ್ ಪಾರೇ" ಎಂಬ ಉರ್ದು ಕೃತಿಯಿಂದ. ಅನುವಾದ: M. P. I.

ನಿರ್ಮಾಣವಾಗಿಯೂ ಸಹ "ನನ್ನ ಈ ಮಸೀದಿಯು ಕೊನೆಯ ಮಸೀದಿಯಾಗಿದೆ" ಎಂಬ ಹೇಳಿಕೆಯ ಉದ್ದೇಶವು ಸ್ಥಿರವಾಗಿ ಉಳಿಯುವುದಾದರೆ, ಆ ಪ್ರವಾದಿವರ್ಯರ ಸೇವಕನೂ ಶಿಷ್ಯನೂ ಅನುಗಾಮಿಯೂ ಆದ ಒಬ್ಬ ಅನುಯಾಯಿಗೆ ಅವರ ಸೇವೆ ಮತ್ತು ಅನುಸರಣೆಯ ಫಲವಾಗಿ ಪ್ರವಾದಿತ್ವದ ಅನುಗ್ರಹ ಲಭಿಸುವುದಾದರೆ ಅದು "ನಾನು ಕೊನೆಯ ಪ್ರವಾದಿಯಾಗಿರುವೆನು" ಎಂಬುದಕ್ಕೆ ವಿರೋಧವಾಗುವುದು ಹೇಗೆ ? ಆದುದರಿಂದ ನಿಶ್ಚಯವಾಗಿಯೂ ಈ ವಚನದ ತಾತ್ಪರ್ಯವು ಇದಾಗಿದೆ: ಅಂದರೆ, ನಾನು ಕೊನೆಯ ಶರೀಅತನ್ನು (ಧರ್ಮಶಾಸ್ತ್ರವನ್ನು) ತಂದ ಪ್ರವಾದಿಯಾಗಿದ್ದೇನೆ; ನನ್ನ ದಾಸ್ಯತ್ವದಿಂದ ವಿಮುಕ್ತನಾಗಿಯೂ ನನ್ನ ಧರ್ಮವನ್ನು ಉಪೇಕ್ಷಿಸಿಯೂ ಯಾವನೇ ಪ್ರವಾದಿಯೂ ನನ್ನನಂತರ ಬರಲಾರ. ಹಾಗೆಯೇ ನನ್ನ ಈ ಮಸೀದಿಯು ಕೊನೆಯ ಮಸೀದಿಯಾಗಿದೆ; ಇದಕ್ಕೆ ವಿರೋಧವಾದ ರೂಪದಲ್ಲಿ ಇನ್ನು ಯಾವ ಮಸೀದಿಯೂ ಉಂಟಾಗಲಾರದು. ಚೆನ್ನಾಗಿ ಯೋಚಿಸಿದರೆ, ಮುಹಮ್ಮದ್ ಪೈಗಂಬರರು ಮೊದಲು ಜಾರಿಯಲ್ಲಿದ್ದ ಅನುಗ್ರಹಗಳನ್ನು ಅಂತ್ಯಗೊಳಿಸಿದರೆಂದು ಹೇಳುವುದರಲ್ಲಿ ಅವರಿಗೆ ಏನೂ ಶ್ರೇಷ್ಠತೆ ಇರುವುದಿಲ್ಲವೆಂದೂ ಬದಲಾಗಿ ಬೇರೆ ಬೇರೆ ಹರಿಯುತ್ತಿದ್ದ ಕಾಲುವೆಗಳನ್ನು ಕೊನೆಗೊಳಿಸಿ ಮುಂದಕ್ಕೆ ಎಲ್ಲ ಕಾಲುವೆಗಳನ್ನೂ ತನ್ನ ಬೃಹತ್ ಜಲಾಶಯದಿಂದ ಹರಿಯುವಂತೆ ಮಾಡುವುದರಲ್ಲೇ ಅವರ ಆಧ್ಯಾತ್ಮಿಕ ಮಹೋನ್ನತಿಯು ನೆಲೆಗೊಂಡಿದೆ ಎಂದೂ ತಿಳಿಯಬಹುದು.

ಇಸ್ಲಾಮಿನ ದೊಡ್ಡ ದೊಡ್ಡ ಮತ ಪಂಡಿತರೂ ಶ್ರೇಷ್ಠ ಧರ್ಮ ಜ್ಞಾನಿಗಳೂ ಇದೇ ರೀತಿಯ ಮಹತ್ವಪೂರ್ಣ ವ್ಯಾಖ್ಯಾನವನ್ನೇ ಪ್ರತಿ ಕಾಲದಲ್ಲೂ ನೀಡುತ್ತಾ ಬಂದಿದ್ದಾರೆ. ಸೂಫಿಗಳಲ್ಲಿ ಶ್ರೇಷ್ಠ ಸ್ಥಾನವನ್ನಲಂಕರಿಸುವ ಇಮಾಂ ಹಝ್ರತ್ ಶೈಖುಲ್ ಅಕ್‌ಬರ್ ಮುಹಿಯುದ್ದೀನ್ ಇಬ್ನು ಅರಬೀ (ಹಿಜರಿ 560–638) ಈ ರೀತಿ ಹೇಳಿರುತ್ತಾರೆ: "ರಸೂಲ್ ಕರೀಂ (ಸ) ರವರ ಆವಿರ್ಭಾವದೊಂದಿಗೆ ಕೊನೆಗೊಂಡಿರುವ ಪ್ರವಾದಿತ್ವವು ಕೇವಲ ಶರೀಅತಿನೊಂದಿಗೆ (ಧರ್ಮಶಾಸ್ತ್ರದೊಂದಿಗೆ) ಅವತರಿಸುವ ಪ್ರವಾದಿತ್ವವಾಗಿದೆ." (ಫುತೂಹಾತುಲ್ ಮಕ್ಕಿಯ್ಯ ಸಂ–2, ಪು–3).

ಸುಪ್ರಸಿದ್ಧ ಇಮಾಂ ಎಂದು ಹೆಸರುಗಳಿಸಿರುವ ಹಝ್ರತ್ ಇಮಾಂ ಅಬ್ದುಲ್ ವಹ್ಹಾಬ್ ಶಅರಾನೀ (ವಫಾತ್ 976 ಹಿಜರಿ) ಈ ರೀತಿ ಹೇಳುತ್ತಾರೆ: "ರಸೂಲ್ ಕರೀಂ (ಸ) ರವರ ಬರುವಿಕೆಯೊಂದಿಗೆ ಎಲ್ಲ ಪ್ರಕಾರದ ಪ್ರವಾದಿತ್ವವೂ ಕೊನೆಗೊಂಡಿರುವುದಿಲ್ಲ; ಕೇವಲ ಶರೀಅತಿನೊಂದಿಗೆ ಬರುವ ಪ್ರವಾದಿತ್ವ ಮಾತ್ರವೇ ಕೊನೆಗೊಂಡಿರುವುದು" (ಅಲ್‌ಯವಾಖೀತು ವಲ್ ಜವಾಹಿರ್ ಸಂ–1; ಪುಟ–24).

ಇಸ್ಲಾಮಿನ ಪ್ರಧಾನ ಮುಜದ್ದಿದ್‌ಗಳ ಪೈಕಿ ಒಬ್ಬರಾಗಿರುವ ಹಝ್ರತ್ ಶೈಖ್ ಅಹ್ಮದ್ ಸರ್‌ಹಿಂದೀ-ಮುಜದ್ದಿದ್ ಅಲ್‌ಫಸಾನೀ (ವಫಾತ್ 1034 ಹಿಜರಿ) ಈ ರೀತಿ ಹೇಳುತ್ತಾರೆ:— "ಹಝ್ರತ್ ಮುಹಮ್ಮದ್ ಪೈಗಂಬರರ ನಂತರ ಅವರ ಅನುಯಾಯಿಗಳಿಗೆ, ಅವರ ಅನುಸರಣೆ ಮತ್ತು ಶಿಷ್ಯತ್ವದ ಫಲವಾಗಿ ಪ್ರವಾದಿತ್ವ ಲಭಿಸುವುದಾದರೆ ಅದು ಪೈಗಂಬರರ "ಖಾತಮುನ್ನಬಿಯ್ಯೀನ್" ಎಂಬ ಪದವಿಗೆ ವಿರುದ್ಧವಲ್ಲ. ಆದುದರಿಂದ ಈ ವಿಷಯದಲ್ಲಿ ನೀವು ಸಂಶಯಸ್ಥರಾಗದಿರಿ." (ಮಕ್‌ತೂಬಾತೆ ಅಹ್ಮದಿಯಾ ಸಂ–1: ಮಕ್‌ತೂಬ್-271).

ಇಸ್ಲಾಮೀ ಶಕ 12ನೇ ಶತಮಾನದ ಮುಜದ್ದಿದ್ ಆದ ಹಝ್ರತ್ ಶಾಹ್ ವಲಿಯುಲ್ಲಾಹ್ ಮುಹದ್ದಸ್ ದೆಹ್‌ಲವೀ (ಹಿಜರಿ 1114–1176) ಹೇಳುತ್ತಾರೆ: "ಮುಹಮ್ಮದ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಂ ರವರ ಬಳಿಕ ಪ್ರವಾದಿತ್ವವು ಕೊನೆಗೊಂಡಿರುವುದೆಂಬುದರ ಅರ್ಥ ಕೇವಲ ಇಷ್ಟೇ–ಅಂದರೆ, ಅವರ ನಂತರ ಅಲ್ಲಾಹು ಯಾರನ್ನೂ ಪ್ರತ್ಯೇಕ ಶರೀಅತ್(ಧರ್ಮಶಾಸ್ತ್ರ)ನೊಂದಿಗೆ ಪ್ರವಾದಿಯಾಗಿ ನಿಯೋಗಿಸಲಾರ" (ತಫ್‌ಹೀಮಾತೆ ಇಲಾಹಿಯ್ಯ–ತಫ್‌ಹೀಮ್ 53).

ಇತ್ತೀಚೆಗಿನ ಕಾಲದಲ್ಲೇ ಅತಿ ದೊಡ್ಡ ಮತ ಪಂಡಿತರೆಂದು ಖ್ಯಾತಿವೆತ್ತ, ದೇವ್‌ಬಂದ್ ವಿದ್ಯಾಲಯದ ಸ್ಥಾಪಕರಾದ ಹಝ್ರತ್ ಮೌಲಾನಾ ಮೌಲವಿ ಮುಹಮ್ಮದ್ ಖಾಸಿಂ ಸಾಹೇಬ್ ನಾನೂತವೀ (ಹಿಜರಿ 1248–1297) ಈ ರೀತಿ ಹೇಳಿರುವರು:

"ಸಾಮಾನ್ಯ ಜನರು, ರಸೂಲುಲ್ಲಾಹಿ (ಸ) ರವರು ಖಾತಂ ಆಗಿರುವುದರ ತಾತ್ಪರ್ಯವನ್ನು, ಅವರ ಆವಿರ್ಭಾವವು ಉಳಿದ ಪ್ರವಾದಿಗಳೆಲ್ಲರ ಕೊನೆಯಲ್ಲುಂಟಾಯಿತೆಂದೂ ಅವರ ನಂತರ ಯಾರೂ ಪ್ರವಾದಿಯಾಗಿ ಬರಲಾರರೆಂದೂ ಸಾಮಾನ್ಯವಾಗಿ ತಿಳಿಯುತ್ತಾರೆ. ಆದರೆ, ಆದಿಯಲ್ಲಿ

# ವಿಚಿತ್ರವಾದ ಮೌದೂದಿ ಸಮಾನತೆ

ಮೌದೂದಿ ಪತ್ರಿಕೆ 'ಸನ್ಮಾರ್ಗ'ದಲ್ಲಿ "ಇಸ್ಲಾಮಿನಲ್ಲಿಯೂ ವರ್ಗಭೇದವಿದೆ!" ಎಂಬ ಒಂದು ಲೇಖನವು ಪ್ರಕಟವಾಗಿದೆ. 'ವಿಕ್ರಮ' ಪತ್ರಿಕೆಯ ಒಂದು ಲೇಖನಕ್ಕೆ ಉತ್ತರವಾಗಿ ಅದನ್ನು ಬರೆಯಲಾಗಿದೆ. "ಇರಾನಿನಲ್ಲಿ ಬಹಾಯಿಗಳಿಗೆ ಒದಗಿರುವಂತೆ ಪಾಕಿಸ್ತಾನದಲ್ಲಿ ಅಹ್ಮದೀಯ ಪಂಗಡದವರು ಸರ್ವನಾಶದ ಅವಸ್ಥೆಗೆ ಗುರಿಯಾಗಿರುವುದು ತಿಳಿದಿರುವ ವಿಷಯವೇ" ಎಂದು ವಿಕ್ರಮ ಪತ್ರಿಕೆಯಲ್ಲಿ ಹೊ. ವೆ. ಶೇಷಾದ್ರಿಯವರು ಬರೆದಿದ್ದರು. ಇರಾನಿನಲ್ಲೂ ಪಾಕಿಸ್ತಾನದಲ್ಲೂ ಅಭಿಪ್ರಾಯ ಭಿನ್ನತೆಗಳ ಆಧಾರದಲ್ಲಿ ಭೀಕರ ನರಮೇಧವು ನಡೆಯುತ್ತಿದೆ ಎಂದು ವಿಕ್ರಮದ ಲೇಖಕರು ಬರೆದಾಗ 'ಸನ್ಮಾರ್ಗ' ಪತ್ರಿಕೆ ಅದಕ್ಕೆ ನೀಡಿದ ಉತ್ತರವು ಅತ್ಯಂತ ಕಳವಳಕಾರಿಯಾಗಿದೆ. ಮೌದೂದಿಗಳ ಈ ವಿಚಿತ್ರವಾದ ನಿರೂಪಣೆಯಿಂದ ಇಸ್ಲಾಂ ಧರ್ಮದ ಸಮತ್ವ ಸುಂದರವಾದ ಮುಖಕ್ಕೆ ಮಸಿ ಬಳಿದಂತೆ ಆಗಿದೆ. ಮೌದೂದಿ ಪಂಗಡದ ಸ್ಥಾಪಕ ದಿವಂಗತ ಮುಲ್ಲ ಮೌದೂದಿ ಹಾಗೂ ಅವರು ಸ್ಥಾಪಿಸಿದ ಪಂಗಡದವರು ಮೊದಲಿಂದಲೂ ಇದೇ ರೀತಿ ಇಸ್ಲಾಂ ಧರ್ಮವನ್ನು ಅನ್ಯಮತೀಯರೆದುರು ತೇಜೋವಧೆ ಮಾಡುತ್ತಲೇ ಬಂದಿರುವರೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಇಸ್ಲಾಂ ಧರ್ಮವನ್ನು ಇತರರು ಆಕ್ಷೇಪಿಸಲು ಕಾರಣವಾಗುವಂತಹ, ಇಸ್ಲಾಂ ಧರ್ಮದ ತತ್ವಗಳಿಗೆ ತೀರಾ ವಿರುದ್ಧವಾದ ಹಲವಾರು ನವೀನ ಸಿದ್ಧಾಂತಗಳನ್ನು ಈ ಮೌದೂದಿ ಪಂಗಡದವರು ಹೊಂದಿದ್ದಾರೆ.

ಕೆಲವು ಮುಸ್ಲಿಂ ರಾಷ್ಟ್ರಗಳಲ್ಲಿ ನಡೆಯುತ್ತಿರುವ ನರಮೇಧವನ್ನು 'ವಿಕ್ರಮ' ಪತ್ರಿಕೆಯು ಎತ್ತಿ ತೋರಿಸಿ ಇದು ಇಸ್ಲಾಂ ಧರ್ಮದಲ್ಲಿರುವ ವರ್ಗಭೇದ ಎಂದು ಹೇಳಿರುವುದು ನಿಜಕ್ಕೂ ಖಂಡನಾರ್ಹವೇ ಆಗಿದೆ. ಯಾಕೆಂದರೆ ಮುಸ್ಲಿಂ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಈ ತೆರನಾದ ಅತ್ಯಾಚಾರಗಳಿಗೆ ಆಯಾ ರಾಷ್ಟ್ರಗಳ ಆಡಳಿತವೂ ಮುಸ್ಲಿಂ ಸಮೂಹದ ಧಾರ್ಮಿಕ ನೇತಾರರಾದ ಘಾತ ಪಂಡಿತರೂ ಮಾತ್ರ ಕಾರಣಕರ್ತರೇ ವಿನಾ ಇಸ್ಲಾಂ ಧರ್ಮವು ಅದಕ್ಕೆ ಯಾವತ್ತೂ ಹೊಣೆಯಲ್ಲ. ಕಾರಣ, ಇಸ್ಲಾಂ ಧರ್ಮದ ಮೂಲಭೂತ ತತ್ವಗಳಲ್ಲಿ ಈ ರೀತಿಯ ದಬ್ಬಾಳಿಕೆಯು ಪ್ರಬೋಧಿಸಲ್ಪಟ್ಟಿಲ್ಲವೆಂದು ಮಾತ್ರವಲ್ಲ ಆ ಪವಿತ್ರ ಧರ್ಮದ ಮತಗ್ರಂಥವಾದ ಪವಿತ್ರ ಖುರ್‌ಆನ್ ಅದನ್ನು ಶಕ್ತಿಯುತವಾಗಿ ವಿರೋಧಿಸುತ್ತದೆ. ಆದುದರಿಂದ ಯಾವುದಾದರೊಂದು ರಾಷ್ಟ್ರವು ಇಸ್ಲಾಂ ಧರ್ಮದ ತತ್ವಗಳಿಂದ ದೂರಸರಿದು ಆ ಧರ್ಮತತ್ವಗಳಿಗೆ ವಿರೋಧವಾಗಿ ಕಾರ್ಯವೆಸಗುವುದಿದ್ದರೆ, ಅದಕ್ಕಾಗಿ ಇಸ್ಲಾಂ ಧರ್ಮವನ್ನು ಆಕ್ಷೇಪಿಸುವುದು ಸರಿಯಾಗಿರಲಾರದು.

---

(19ನೇ ಪುಟದಿಂದ)

ಅಥವಾ ಅಂತ್ಯದಲ್ಲಿ ಬರುವುದಕ್ಕೂ ಶ್ರೇಷ್ಠತೆಗೂ ತಮ್ಮೊಳಗೆ ಏನೂ ಸಂಬಂಧವಿಲ್ಲವೆಂದು ಜ್ಞಾನಿಗಳಾದವರು ತಿಳಿದುಕೊಳ್ಳುತ್ತಾರೆ. ಹಾಗಿರುವಾಗ, ಪೈಗಂಬರರ ಶ್ರೇಷ್ಠತೆಯನ್ನು ಕೀರ್ತಿಸಿಕೊಂಡು 'ಖಾತಮುನ್ನಬಿಯ್ಯೀನ್' ಎಂದು ಹೇಳಿರುವುದಕ್ಕೆ ಅಂತ್ಯ ಪ್ರವಾದಿ ಎಂಬ ಅರ್ಥವನ್ನು ಯಾಕೆ ಕಲ್ಪಿಸಬೇಕು? ಅಂತ್ಯ ಪ್ರವಾದಿಯಾಗಿರುವುದರಿಂದ ಪೈಗಂಬರರು ಶ್ರೇಷ್ಠರೆಂದಾಗುವರೇ ?...... ಮುಹಮ್ಮದ್ ಪೈಗಂಬರರ ನಂತರವೂ ಯಾರಾದರೂ ಪ್ರವಾದಿಗಳು ಜನ್ಮ ತಾಳಿದರೆ ಆಗಲೂ ಖಾತಮುನ್ನಬಿಯ್ಯೀನ್ ಎಂಬ ಅವರ ಪದವಿಗೆ ಯಾವ ಆತಂಕವೂ ಸಂಭವಿಸುವುದಿಲ್ಲ" (ತಹ್‌ಸೀರುನ್ನಾಸ್: ಪುಟ–3, 28).

ಒಟ್ಟಿನಲ್ಲಿ, ಮೇಲಿನ ಅರ್ಥವಿವರಣೆಗಳೇ ಸರಿಯೂ ಸತ್ಯವೂ ಆಗಿದೆಯೆಂಬುದರಲ್ಲಿ ಸಂದೇಹವೇ ಇಲ್ಲ. ಅಂದರೆ, ನಮ್ಮ ನಾಯಕರಾಗಿರುವ ಹಝ್ರತ್ ಮುಹಮ್ಮದ್‌ಪೈಗಂಬರರಲ್ಲಿ ಪ್ರವಾದಿತ್ವವು ಅದರ ಪರಿಪೂರ್ಣತೆಯನ್ನು ತಲಪಿದೆ. ಧರ್ಮಶಾಸ್ತ್ರದ ಅವತರಣೆಯು ಪೂರ್ಣಗೊಂಡಿರುತ್ತದೆ. ಆ ಮಹಾನ್ ಪ್ರವಾದಿಯ ನಂತರ, ಅವರ ಪ್ರತಿಬಿಂಬವಾಗಿ, ಅವರ ಸೇವಕನಾಗಿದ್ದುಕೊಂಡು, ಅವರ ಪ್ರಮಾಣ ಮುದ್ರೆಯಿಂದ ಅನುಗ್ರಹಿಸಲ್ಪಡುವ ಪ್ರವಾದಿಗಳ ಹೊರತು ಬೇರೆ ಯಾವ ಪ್ರವಾದಿಗಳೂ ಬರಲಾರರು.

ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದ್.

□

ಆದರೆ, 'ವಿಕ್ರಮ' ಪತ್ರಿಕೆಯ ಮೇಲಿನ ಆಕ್ಷೇಪಕ್ಕೆ 'ಸನ್ಮಾರ್ಗ'ವು ನೀಡಿದ ಉತ್ತರ ಇಸ್ಲಾಂ ಧರ್ಮದ ಮೇಲೆ ಸ್ನೇಹವಿರುವವರನ್ನು ದಿಗಿಲು ಬಡಿಸುವಂತಹದ್ದಾಗಿದೆ. ಇದೇನು! ಈ ಮೌದೂದಿಗಳು ಯಾವ ತರದ ಇಸ್ಲಾಮನ್ನು ಜನರಿಗೆ ಪ್ರಬೋಧಿಸುತ್ತಿದ್ದಾರೆ ಎಂದು ಆಶ್ಚರ್ಯ ಪಡುವಂತೆ ಇದೆ ಅವರ ನಿರೂಪಣೆ. ಮೌದೂದಿ ಪತ್ರಿಕೆ 'ಸನ್ಮಾರ್ಗ'ದಲ್ಲಿ ಬರೆಯಲಾದ ಕೆಲವು ಭಾಗಗಳನ್ನು ನೋಡಿರಿ: "ಇಸ್ಲಾಮಿನಲ್ಲಿರುವ ಮಾನವ ಸಮಾನತೆಯನ್ನು ತಾತ್ವಿಕವಾಗಿ ನಿರಾಕರಿಸಲಾಗದ ಶ್ರೀ ಹೊ. ವೆ. ಶೇಷಾದ್ರಿಯಂಥ ಕೆಲವರಿಗೆ ಏನು ಬರೆಯುವುದೆಂದೇ ತೋಚುವುದಿಲ್ಲ" ಎಂದು ಇಸ್ಲಾಮಿನ ಮಾನವ ಸಮಾನತೆಯಿಂದ ತೊಡಗಿ, "ಮುಸ್ಲಿಮರಲ್ಲಿ ವರ್ಗಭೇಧವಿದೆಯೆಂಬ ತಮ್ಮ ಮೂಢ ನಂಬಿಕೆಯನ್ನು ಸಮರ್ಥಿಸಲಿಕ್ಕಾಗಿ ಅಹ್ಮದಿಯಾ ಮತ್ತು ಬಹಾಯಿ ಮುಂತಾದ ಪಂಥಗಳ ಉದಾಹರಣೆ ನೀಡುತ್ತಾರೆ. ಅವರನ್ನು ಮುಸ್ಲಿಂ ರಾಷ್ಟ್ರಗಳಲ್ಲಿ ಹಿಂಸಿಸಲಾಗುತ್ತಿದೆಯೆಂದು ಮೊಸಳೆ ಕಣ್ಣೀರು ಸುರಿಸುತ್ತಿದ್ದಾರೆ. ಯಥಾರ್ಥದಲ್ಲಿ ಆ ಪಂಥದವರಿಗೂ ಇಸ್ಲಾಮಿಗೂ ಯಾವ ಸಂಬಂಧವಿದೆಯೆಂಬುದನ್ನು ಅಂಥ ಬರಹಗಾರರು ಮೊದಲು ಮನಗಾಣಬೇಕು...... ಅಹ್ಮದಿಯಾ ಪಂಥವು ಮುಸ್ಲಿಮರ ಒಂದು ವರ್ಗವಲ್ಲ."* ಎಂಬುದಾಗಿ 'ಸನ್ಮಾರ್ಗ'ವು ಹೇಳುತ್ತದೆ. ಇದನ್ನು ಓದುವಾಗ ಮೌದೂದಿಗಳ ಮಸ್ತಿಷ್ಕಗಳಲ್ಲಿ ಅಡಗಿರುವ ಆಪತ್ಕಾರಿ ಚೇತನವು ಏನೆಂದು ಗೋಚರವಾಗುತ್ತದೆ. ಜಮಾತೆ ಇಸ್ಲಾಮಿಯು ಮುಸ್ಲಿಮರೆಡೆಯಲ್ಲಿ ರಾಜಕೀಯದ ದುಷ್ಟ ಚಟವನ್ನು ಪ್ರಸರಿಸಿ, ಇಸ್ಲಾಮಿನ ಮುಖವಾಡವನ್ನು ಹೊತ್ತು ಕೊಂಡೇ, ಇತರ ಮುಸ್ಲಿಮರೊಂದಿಗೆ (ಆತ್ಮ ವಂಚನೆ ಮಾಡಿಕೊಂಡಾದರೂ) ಬೆರೆತುಕೊಂಡು, ಇಸ್ಲಾಂ ಧರ್ಮವನ್ನು ಸರ್ವನಾಶಮಾಡಲು ಬಂಡವಾಳಶಾಹಿ ಕ್ರೈಸ್ತ ಸಾಮ್ರಾಜ್ಯವಾದ ಅಮೇರಿಕದಿಂದ ಹೇರಳ ಧನ ಸಹಾಯವನ್ನು ಪಡೆದು ಸ್ಥಾಪನೆಗೊಂಡ "ಮುನಾಫಿಕ್ (ಕಪಟ ವಿಶ್ವಾಸಿ) ಸಂಘ" ಎಂಬುದಾಗಿ ಮೊದಲಿಂದಲೂ ಆರೋಪಿಸಲ್ಪಡುತ್ತಿದ್ದುದು ಸತ್ಯವೇ ಇರಬೇಕೆಂದು ಅವರ ಈ ನಿರೂಪಣೆಯು ತೋರಿಸಿಕೊಡುತ್ತದೆ.

ಅಹ್ಮದೀಯರ ಸರ್ವನಾಶ ಮಾಡುತ್ತಿರುವುದನ್ನು ಸಮರ್ಥಿಸಲಿಕ್ಕಾಗಿ "ಅಹ್ಮದೀಯರು ಮುಸ್ಲಿಮರ ಒಂದು ವರ್ಗವಲ್ಲ" ಎಂಬ ನ್ಯಾಯೀಕರಣವನ್ನು ಸನ್ಮಾರ್ಗವು ನೀಡುತ್ತದೆ! ಅಹ್ಮದೀಯರು ಇಸ್ಲಾಮಿನ ಒಂದು ವರ್ಗವಲ್ಲವಾದರೂ ಸಹ ಅವರನ್ನು ಸರ್ವನಾಶ ಮಾಡಬೇಕೆಂಬುದಾಗಿ ಮೌದೂದಿಗಳಿಗೆ ಯಾವ ಇಸ್ಲಾಂ ಧರ್ಮವು ಕಲಿಸಿಕೊಟ್ಟಿದೆ? ನಿಮ್ಮ ಶತ್ರುಗಳೊಡನೆಯೂ ಸಹ ನ್ಯಾಯಕ್ಕೆ ವಿರುದ್ಧವಾಗಿ ವರ್ತಿಸಬಾರದೆಂದೂ ಎಂತಹ ಸನ್ನಿವೇಶದಲ್ಲೂ ನ್ಯಾಯ, ನೀತಿ, ಮಾನವ ಸಮಾನತೆ ಇವುಗಳನ್ನು ಕೈಬಿಡಬಾರದೆಂದೂ ಪ್ರಬೋಧಿಸುವ ಪವಿತ್ರ ಖುರ್‌ಆನಿನ ತತ್ವಗಳಿಗೂ ಈ ಮೌದೂದಿಗಳ ಪ್ರಬೋಧನೆಗಳಿಗೂ ಏನು ಸಂಬಂಧವಿದೆ?

ಯಾವ ಮತಾನುಯಾಯಿಗಳಾದರೂ ಸರಿ, ಯಾವುದೇ ಉಪ ಪಂಗಡದವರಾದರೂ ಸರಿ, ಅಹ್ಮದೀಯರೋ ಮೌದೂದಿಗಳೋ ಯಾರಾದರೂ ಸರಿಯೆ, ಮನುಷ್ಯರೆಲ್ಲರೂ ಮನುಷ್ಯರೇ ಎಂಬುದನ್ನು 'ಸನ್ಮಾರ್ಗ'ವು ನಿರಾಕರಿಸಲಾರದು. ಹೀಗಿರುವಲ್ಲಿ "ಇಸ್ಲಾಮಿನಲ್ಲಿರುವ ಮಾನವ ಸಮಾನತೆಯನ್ನು" ನಿರೂಪಿಸಲು ಹೊರಟ ಸನ್ಮಾರ್ಗವು, ಅಹ್ಮದೀಯರು ಮುಸ್ಲಿಮರ ಒಂದು ವರ್ಗವಲ್ಲದ ಕಾರಣ ಅವರನ್ನು ಸರ್ವನಾಶ ಮಾಡುವುದು ಆಕ್ಷೇಪಾರ್ಹವಲ್ಲವೆಂಬ ಧಾಟಿಯಲ್ಲಿ ನಿರೂಪಿಸಿರುವುದು ಮೌದೂದಿಗಳ ದುರ್ನೀತಿಗೊಂದು ನಿದರ್ಶನ ಮಾತ್ರ. ಅಹ್ಮದೀಯರು ಮುಸ್ಲಿಮರ ಒಂದು ವರ್ಗವಲ್ಲವಾದುದರಿಂದ ಅವರನ್ನು ಸರ್ವನಾಶ ಮಾಡುವುದು ಮೌದೂದಿಗಳ ಬಳಿ ಸಮರ್ಥನೀಯವೆಂದಾದರೆ, ಮೌದೂದಿಗಳ ಕುರಿತು ಹಾಗೂ ಅವರ "ಜಮಾತೇ ಇಸ್ಲಾಮಿ" ಎಂಬ ಸಂಘಟನೆಯ ಕುರಿತು ಪ್ರಜಾ ತಾಂತ್ರಿಕ ಭಾರತದ ಪ್ರತಿಯೊಬ್ಬ ಪ್ರಜೆಯೂ ಬಹಳ ಎಚ್ಚರಿಕೆಯಿಂದಿರಬೇಕಾಗಿದೆ.

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಕುರಿತು "ಯೆಹೂದಿಗಳಿಂದ ಪ್ರಚೋದಿತವಾದಂಥ ಒಂದು ಯೋಜನೆ ಮಾತ್ರ" ಎಂದು ಸನ್ಮಾರ್ಗವು ಆರೋಪಿಸಿರುವುದಕ್ಕೆ ಓದುಗರು ಏನೂ ಬೆಲೆ ಕೊಡಲಾರರು ಎಂದು ನಾವು ಭಾವಿಸುತ್ತೇವೆ. ಕಾರಣವಿಷ್ಟೆ. ಹೇಳಿದವರು ಮೌದೂದಿಗಳಲ್ಲವೇ! ಈ ಮೌದೂದಿಗಳು ಮೊದಲು ಅಹ್ಮದಿಯಾ ಸಂಘಟನೆಯ ಕುರಿತು ಬ್ರಿಟಿಷ್ ಯೋಜನೆ ಎಂದು ಹೇಳುತ್ತಿದ್ದರು. ಈಗ ಯೆಹೂದಿಗಳ ಯೋಜನೆ ಎಂದು ಹೇಳುತ್ತಿದ್ದಾರೆ. ಇನ್ನು ಏನೇನು ಹೇಳುತ್ತಾರೋ! ಮೌದೂದಿಗಳಿಗೆ ಅದೆಲ್ಲವೂ ಬಹಳ ಸುಲಭದ ಕೆಲಸ. ರಾಜಕೀಯದ 'ಪಾಲಿಸಿ ಬದಲಾವಣೆ'-ಅಷ್ಟೆ. ತನ್ನ ದೌತ್ಯದ ಪ್ರಧಾನ

* ಅಡಿಗೆರೆ ನಮ್ಮದು—ಲೇ.

# ★ ಸಂಪಾದಕರಿಗೆ ಪತ್ರ ★

ಧಾರ್ಮಿಕ ಮತ್ತು ತತ್ವಶಾಸ್ತ್ರ ರಂಗದಲ್ಲಿ ಅಹ್ಮದಿಯಾ ಸಂಘಟನೆಯ ಶ್ಲಾಘನೀಯ ಉದ್ದೇಶವನ್ನು ಪ್ರಸಾರ ಮಾಡುವ ಕಾರ್ಯವನ್ನು ನಿಮ್ಮ ಪತ್ರಿಕೆ ಶ್ರೇಷ್ಠ ಆದರ್ಶಪ್ರಾಯ ರೀತಿಯಲ್ಲಿ ಈಡೇರಿಸುತ್ತದೆ.

**ಕಾಸರಗೋಡು**

**—ಡಾ। ಎಸ್. ಎಸ್. ನಗರ್ಕಾರ್**

X X X

ಜಾಗತಿಕವಾಗಿ ಜನರೆಲ್ಲರು ಸಜ್ಜನಿಕೆಯಿಂದಲೂ ಮಾನುಷಿಕವಾದ ವಿಚಾರದಿಂದಲೂ ಹಲವು ವಿಷಯಗಳನ್ನು ತಿಳಿದಿರುವುದು ಸೂಕ್ತವಾದೀತು. ಪ್ರಪ್ರಾಚೀನ ಕ್ರಮಗಳೇನು, ಈಗ ಸುಧಾರಿತ ರೀತಿಯೇನು, ಅದೇಕೆ ಬೇಕೆಂದು ಸಾಮಾಜಿಕರೆಲ್ಲರಿಗೆ ತಮ್ಮಲ್ಲಿಯ ವಿಶಿಷ್ಟ–ಸಾತ್ವಿಕ ಧ್ಯೇಯವೇನೆಂದು ಪ್ರಸಾರಿಸಲು ಪತ್ರಿಕೆಗಳು ಅತ್ಯವಶ್ಯವಾಗಿವೆ.

**ಸುರತ್ಕಲ್ಲು**

**—ಕೆ. ವೆಂಕಟರಾಮಾಚಾರ್ಯ, ವಿದ್ವಾನ್**

X X X

ಮುಹಮ್ಮದ್ ಪೈಗಂಬರರ ಪವಿತ್ರ ತತ್ವಗಳನ್ನು ಹೊತ್ತು ತಂದ "ಯುಗರಶ್ಮಿ" ಧಾರ್ಮಿಕ ಪತ್ರಿಕೆಯನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಅದರಲ್ಲಿ ಬರುವಂತಹ ಲೇಖನಗಳು ಜ್ಞಾನಪೂರ್ಣವಾಗಿವೆ. ಈ ನಿಮ್ಮ ಕಾರ್ಯವನ್ನು ಮನಸಾರೆ ಮೆಚ್ಚಿದ್ದೇನೆ.

**ಮಡಿಕೇರಿ**

**—ಎಂ. ಇ. ನಜೀರ್**

---

(21ನೇ ಪುಟದಿಂದ)

ಉದ್ದೇಶವೇ ಈ ಕಾಲದಲ್ಲಿ ಇಸ್ಲಾಮಿಗೆದುರಾಗಿ ಧರ್ಮಸಮರ ಸಾರಿದ ಕ್ರೈಸ್ತ ವಿಶ್ವಾಸಿಗಳ ಮಿಥ್ಯಾ ವಿಶ್ವಾಸಗಳನ್ನು ಆಧಾರ ಸಹಿತ ಖಂಡಿಸಿ ಇಸ್ಲಾಂ ಧರ್ಮದ ಸತ್ಯತೆಯನ್ನು ಲೋಕದ ಮುಂದಿಡುವುದಾಗಿದೆ ಎಂದು ಘೋಷಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರಿಂದ ಸ್ಥಾಪಿತವಾದ ಅಹ್ಮದಿಯಾ ಜಮಾಅತನ್ನು ಬ್ರಿಟಿಷ್ ಯೋಜನೆ ಎಂದು ಹೇಳಿದರೆ ಬುದ್ಧಿ ಜೀವಿಗಳೆಡೆಯಲ್ಲಿ ಈ ಕುಪ್ರಚಾರಕ್ಕೆ ಬೆಲೆ ಸಿಗದು ಎಂದು ಮನಗಂಡ ಮೌದೂದಿಗಳು ಈಗ ತಮ್ಮ ಧಾಟಿಯನ್ನು ಬದಲಾಯಿಸಿ ಯೆಹೂದ್ಯರ ಯೋಜನೆ ಎಂದೆನ್ನುತ್ತಾರೆ.

ಇವರ ರಾಜಕೀಯ ನಾಟಕಕ್ಕೆ ಇನ್ನೊಂದು ಸ್ಪಷ್ಟ ನಿದರ್ಶನವನ್ನು ನೋಡಿರಿ: ಹಿಂದೊಮ್ಮೆ ಇವರು ಆರ್. ಎಸ್. ಎಸ್.ನೊಂದಿಗೆ ಕೈ ಕೈ ಮಿಲಾಯಿಸಿ ನಡೆದರು. ಈಗ ಆರ್. ಎಸ್. ಎಸ್. ನ್ನು ಇವರು ಸಿಕ್ಕಾಪಟ್ಟೆ ಖಂಡಿಸುತ್ತಿದ್ದಾರೆ. ಇನ್ನೊಂದೆಡೆಯಲ್ಲಿ ಲೋಕದಳದೊಂದಿಗೆ ಮೈತ್ರಿ ಪ್ರಾರಂಭವಾಗಿದೆ. ಕಳಪೆ ರಾಜಕೀಯದವರಿಗೆ ಇದೆಲ್ಲವೂ ಮಾಮೂಲು ರೂಢಿ. ಅಂಥವರು, ಸರ್ವಶಕ್ತನಾದ ಅಲ್ಲಾಹನ ನಿರ್ದೇಶದಂತೆ ಸ್ಥಾಪನೆಗೊಂಡ ಒಂದು ದೈವಿಕ ಜಮಾಅತ್ ಆಗಿರುವ "ಅಹ್ಮದಿಯಾ ಮುಸ್ಲಿಂ ಜಮಾಅತ್"ನ ಕುರಿತು ಏನು ಹೇಳಿದರೂ ಅದಕ್ಕೆ ಬೆಲೆಯೇನಿದೆ ?

**—ಇಬ್ನು ಅಬ್ದುಲ್ಲಾ.**

******

# ಚುಟುಕು - ಚೂರು

ಮೌದೂದಿ ಪತ್ರಿಕೆ 'ಸನ್ಮಾರ್ಗ'ದಲ್ಲಿ ವಾಡಿಕೆಯಂತೆ ಒಂದು ಮೂಢ 'ಪ್ರಶ್ನೆ'ಗೆ ಉತ್ತರ ರೂಪದಲ್ಲಿ ಹೀಗೆ ಹೇಳಲಾಗಿದೆ: "'ಪ್ರವಾದಿ ಹಝ್ರತ್ ಮುಹಮ್ಮದ್ (ಸ)ರ ನಂತರ ಅಂತಿಮ ದಿನದ ವರೆಗೆ ಬೇರೆ ಯಾವನೇ ಪ್ರವಾದಿ ಬರಲಿಕ್ಕಿಲ್ಲ' ಎಂದು ಮೌಲಾನಾ ಮೌದೂದಿಯವರಷ್ಟು ಪ್ರಬಲವಾಗಿ 20ನೇ ಶತಮಾನದಲ್ಲಿ ಯಾರೂ ವಾದಿಸಿಲ್ಲ. 'ಖತ್ಮೆನುಬುವ್ವತ್' ಎಂಬ ಅವರ ಗ್ರಂಥ ಓದಿದರೆ ಇದು ತಿಳಿಯುತ್ತದೆ. ಪಾಕಿಸ್ತಾನದಲ್ಲಿ ಕಾದಿಯಾನಿ ಚಳವಳಿಯ ವಿರುದ್ಧ ಸ್ವರವೆಬ್ಬಿಸಿದವರಲ್ಲಿ ಇವರು ಪ್ರಮುಖರು". ('ಸನ್ಮಾರ್ಗ' 28-3-82)

● ಮೌಲವಿ ಮೌದೂದಿಯವರ 'ಖತ್ಮೆನುಬುವ್ವತ್' ಎಂಬ ಪುಸ್ತಕಕ್ಕೆ ಪ್ರತಿಕ್ರಿಯೆಯಾಗಿ ಅಹ್ಮದಿಯಾ ಜಮಾಅತಿನ ವತಿಯಿಂದ "ಅಲ್ ಕೌಲುಲ್ ಮುಬೀನ್ ಫೀ ತಫ್‌ಸೀರಿ ಖಾತಮನ್ನಬಿಯ್ಯೀನ್" ಮತ್ತು "ರಿಸಾಲ ಖತ್ಮೆನುಬುವ್ವತ್ ಪರ್ ಇಲ್ಮೀ ತಬ್ಸಿರ" ಎಂಬ ಎರಡು ಗ್ರಂಥಗಳನ್ನು ಬರೆದು ಆ ಮೂಲಕ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಕೊಡಲಿಕ್ಕಾಗಿ ಮೌಲವಿ ಮೌದೂದಿಯವರನ್ನು ಆಹ್ವಾನಿಸಿದಾಗ ಉತ್ತರಿಸಲು ದಾರಿಗಾಣದೆ ಮೌಲವಿ ಸಾಹೇಬರು ತೆಪ್ಪಗೆ ಕುಳಿತುಕೊಂಡ ಸಂಗತಿ ಪಾಪ ಮುಜೀಬ್ ಮತ್ತು ಸಂಗಡಿಗರಿಗೆ ತಿಳಿದಿಲ್ಲವಾದರೆ ಈಗಲಾದರೂ ತಿಳಿದುಕೊಳ್ಳಲಿ.

—oo— —oo— —oo—

ಅಹ್ಮದೀಯರು ಮತ್ತು ಕಾದಿಯಾನಿಗಳೆಂದರೆ ಒಂದೇ ಪಂಥೀಯರೇ? ಅಥವಾ ಬೇರೆ ಬೇರೆಯೇ? ಎಂಬ ಇನ್ನೊಂದು ಪ್ರಶ್ನೆಗೆ ಉತ್ತರವಾಗಿ 'ಸನ್ಮಾರ್ಗ'ದಲ್ಲಿ (4-4-82) ಅಹ್ಮದಿಯಾ ಜಮಾಅತಿನ ಸ್ಥಾಪಕರ ಕುರಿತು ಏಕವಚನ ಪ್ರಯೋಗಿಸಲಾಗಿದೆ.

● ಅಭಿಪ್ರಾಯಗಳಲ್ಲಿ ಭಿನ್ನತೆಯಿದ್ದರೂ ಸಹ ಪ್ರತಿಪಕ್ಷ ಗೌರವವನ್ನು ಕೈಬಿಡುವುದು ಪತ್ರಿಕಾ ಮರ್ಯಾದೆಯಲ್ಲ; ಸಭ್ಯಾಚಾರವೂ ಅಲ್ಲ. ಲೋಕದಾದ್ಯಂತ ಒಂದು ಕೋಟಿಗೂ ಹೆಚ್ಚು ಜನರು ಗೌರವಾದರಗಳಿಂದ ಕಾಣುತ್ತಿರುವ ಓರ್ವ ಮಹಾತ್ಮರನ್ನು 'ಸನ್ಮಾರ್ಗ'ವು ಏಕವಚನದಿಂದ ಕರೆದು ತನ್ನ ಸಂಸ್ಕೃತಿಯನ್ನು ಬಹಿರಂಗಪಡಿಸಿದೆ.

—oo— —oo— —oo—

"ಅವರು ಇಸ್ಲಾಮಿನಿಂದ ಹೊರ ಹೋದ ಒಂದು ಹೊ[illegible] ಪಂಥದವರೆಂದು ಜಾಗತಿಕ ಮುಸ್ಲಿಮರ ಒಮ್ಮತಾಭಿಪ್ರಾಯವಿದೆ" (ಮೇಲಿನ ಪ್ರಶ್ನೆಗೆ 'ಸನ್ಮಾರ್ಗ' ಕೊಟ್ಟ ಉತ್ತರದ ಇನ್ನೊಂದು ಭಾಗ)

● ಕೂಪಮಂಡೂಕದ 'ಜಗತ್ತು' ನೆನಪಿಗೆ ಬರುತ್ತದೆ.

—ಯೂಇ.


ಜಮಾತೆ ಇಸ್ಲಾಮಿ ಸ್ಥಾಪಕ ಮೌಲವಿ ಅಬುಲ್ ಆಲಾ ಮೌದೂದಿಯವರು ಬರೆದ "ಖತ್ಮೆನುಬುವ್ವತ್" ಎಂಬ ಕಿರುಹೊತ್ತಗೆಗೆ ಉತ್ತರವಾಗಿ ಅಹ್ಮದಿಯಾ ಜಮಾಅತಿನ ವತಿಯಿಂದ ಬರೆಯಲಾದ—

ಮೌಲವಿ ಮೌದೂದಿ ಸಾಹಿಬ್ ಕೆ ರಿಸಾಲ
"ಖತ್ಮೆನುಬುವ್ವತ್" ಪರ್ ಇಲ್ಮೀ ತಬ್ಸಿರ
ಔರ್ ಉನ್‌ಸೇ ಚಂದ್ ಸವಾಲಾತ್

ಎಂಬ ಉರ್ದು ಕೃತಿಯನ್ನು ಪಡೆಯಲಿಚ್ಛಿಸುವವರು ರೂ. 2/–ನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿರಿ :


Book Secretary
Ahmadiyya Muslim Mission
10-23/1008, Ansari Road,
Mangalore-575 001.

# ★ ಅಹ್ಮದಿಯಾ ವಾರ್ತೆಗಳು ★

## ರಬ್ವಾದಲ್ಲಿ 89ನೇ ವಾರ್ಷಿಕ ಮಹಾ ಸಮ್ಮೇಳನ-2 ಲಕ್ಷ ಪ್ರತಿನಿಧಿಗಳು

ಕಳೆದ ಡಿಸೆಂಬರ್ 26, 27 ಮತ್ತು 28ರಂದು ಪಾಕಿಸ್ತಾನದಲ್ಲಿರುವ ಅಹ್ಮದಿಯಾ ಕೇಂದ್ರದಲ್ಲಿ, 89ನೇ ವಾರ್ಷಿಕ ಮಹಾ ಸಮ್ಮೇಳನವು ಬಹಳ ವಿಜಯಕರವಾಗಿ ಸಮಾವೇಶಗೊಂಡಿತು. ದೇಶ ವಿದೇಶಗಳಿಂದ ಬಂದ ಎರಡು ಲಕ್ಷಕ್ಕೂ ಮಿಕ್ಕಿದ ಅಹ್ಮದೀ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

## ಸಿತಾರಯೆ ಅಹ್ಮದಿಯತ್ (ಅಹ್ಮದಿಯತ್ತಿನ ನಕ್ಷತ್ರ)



ರಬ್ವಾದಲ್ಲಿ 89ನೇ ಅಹ್ಮದಿಯಾ ವಾರ್ಷಿಕ ಸಮ್ಮೇನದ ದ್ವಿತೀಯ ದಿನ, ಡಿಸೆಂಬರ್ 27ರಂದು ಅಹ್ಮದಿಯಾ ಜಮಾಅತಿನ ಸರ್ವೋನ್ನತ ನಾಯಕರಾದ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ಅಹ್ಮದಿಯಾ ಸಂಘಟನೆಗೆ "ಸಿತಾರಯೆ ಅಹ್ಮದಿಯತ್" ನೀಡುವ ಚಾರಿತ್ರಿಕ ಪ್ರಕಟನೆಯನ್ನು ಮಾಡಿದರು. ಅಹ್ಮದಿಯಾ ಜಮಾಅತಿನ ಸ್ಥಾಪಕರು ತನ್ನ ಗ್ರಂಥವೊಂದರಲ್ಲಿ "ಅಹ್ಮದಿಯರೇ ನೀವು ಉತ್ತಮ ನಮೂನೆಯನ್ನು (ಅನುಸರಣೆಗೆ ಯೋಗ್ಯವಾದ ಮಾದರಿಯನ್ನು) ತೋರಿಸಿರಿ; ಅದರ ಮೂಲಕ ಆಕಾಶದ ದೇವದೂತರು ಸಹ ನಿಮ್ಮ ಸತ್ಯ ಮತ್ತು ನಿಷ್ಕಳಂಕತೆಯಿಂದ ಚಕಿತರಾಗುವಂತೆ ಆಗಲಿ. ನೀವು ಒಂದು ಮರಣವನ್ನು ಸ್ವೀಕರಿಸಿರಿ; ಅದರಿಂದ ನಿಮಗೆ ಜೀವನವು ದೊರಕುವುದು. ಭಾವಾವೇಶಗಳಿಂದ ನಿಮ್ಮ ಶರೀರಗಳನ್ನು ಮುಕ್ತವಾಗಿಡಿರಿ. ಅಲ್ಲಿ ದೇವರು ಇಳಿಯುಂತಾಗಲಿ" ಎಂದು ಬರೆದುದನ್ನು ಹಝ್ರತ್ ಖಲೀಫರು ಓದಿ ಹೇಳಿದರು.

ಈ ಸಂಘಟನೆಗೆ ಸೇರಿದ ಪ್ರತಿಯೊಬ್ಬರೂ ತಮ್ಮ ನಂಬಿಕೆಗಳ ದೃಢತೆಯಿಂದ ದೇವರ ಸಾಮಿಪ್ಯಗಳಿಸುವ ಪಥದಲ್ಲಿ ಮೇಲೇರುತ್ತಾ ಆಕಾಶದ ನಕ್ಷತ್ರಗಳಂತಾಗಲಿ ಯೆಂದು ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೃದಯ ಪೂರ್ವಕವಾಗಿ ಆಶಿಸಿದ್ದರು. ಈ ಸಂಗತಿಗಳನ್ನು ಪರಿಗಣಿಸಿ ದೀರ್ಘಾಲೋಚನೆ ಮಾಡಿ ಮತ್ತು ಪ್ರಾರ್ಥಿಸಿ ಅಹ್ಮದಿಯರಿಗೆ "ಸಿತಾರಯೆ ಅಹ್ಮದಿಯತ್" ನೀಡುವ ನಿರ್ಧಾರ ಕೈಗೊಳ್ಳಲಾಗಿದೆಯೆಂದು ಹಝ್ರತ್ ಖಲೀಫತುಲ್ ಮಸೀಹ್ ಹೇಳಿದರು. ಇದು ಈಗಾಗಲೇ ಜನಿಸಿರುವ ಮತ್ತು ಇನ್ನು ಮುಂದೆ ಲೋಕಾವಸಾನದ ವರೆಗೆ ಜನಿಸಲಿರುವ ಶೇಷ್ಠ ಅಹ್ಮದಿಯರ ಚಿಹ್ನೆಯಾಗಿರುವುದೆಂದು ಹಝ್ರತ್ ಸಾಹೇಬರು ಹೇಳಿದರು.

ಈ ನಕ್ಷತ್ರದ ಹದಿನಾಲ್ಕು ಮೂಲೆಗಳು 14 ಹಿಜರಿ ಶತಮಾನಗಳನ್ನು ಸೂಚಿಸುತ್ತವೆ.

## ಅಹ್ಮದಿಯಾ ಬುಕ್ ಡಿಪೋ ಸ್ಥಾಪನೆ

ಪಾಕಿಸ್ತಾನದಲ್ಲಿರುವ ಅಹ್ಮದಿಯಾ ಕೇಂದ್ರವಾದ ರಬ್ವಾದಲ್ಲಿ ಒಂದು ಅಹ್ಮದಿಯಾ ಬುಕ್ ಡಿಪೋವನ್ನು ಸ್ಥಾಪಿಸಲಾಗಿದೆ. ಡಿಸೆಂಬರ್ 24ರಂದು ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು "ತಫ್‌ಸೀರ್ ಸಗೀರ್" ಎಂಬ ಖುರ್‌ಆನಿನ ಉರ್ದು ವ್ಯಾಖ್ಯಾನವನ್ನು ಖರೀದಿಸಿಕೊಂಡು ಬುಕ್ ಡಿಪೋವನ್ನು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ವಿದೇಶಗಳಿಂದ ಬಂದ ಅನೇಕ ಅಹ್ಮದೀ ಅತಿಥಿಗಳು ಭಾಗವಹಿಸಿದರು.

ಪ್ರಪಂಚದ ವಿವಿಧ ಕಡೆಗಳಲ್ಲಿ ಪ್ರಕಾಶನಗೊಳ್ಳುವ ಅಹ್ಮದಿಯಾ ಸಾಹಿತ್ಯಗಳನ್ನು ಈ ಬುಕ್ ಡಿಪೋ ಮೂಲಕ ಪಡೆಯ ಬಹುದಾಗಿದೆ.

## ಪಂಜಾಬ್ ಗವರ್ನರರ ಖಾದಿಯಾನ್ ಸಂದರ್ಶನ

ಕಳೆದ ಡಿಸೆಂಬರ್ 15ರಂದು ಪಂಜಾಬ್ ಗವರ್ನರ್ ಜನಾಬ್ ಅಮೀನುದ್ದೀನ್ ಸಾಹೇಬರು ತನ್ನ ಪತ್ನಿಯೊಂದಿಗೆ ಖಾದಿಯಾನಿಗೆ ಭೇಟಿಯಿತ್ತರು. ಪಂಜಾಬ್ ಅಭಿವೃದ್ಧಿ ಸಚಿವರು ಸಹ ಅವರ ಜೊತೆಯಲ್ಲಿದ್ದರು. ಅವರ ಗೌರವಾರ್ಥ ನೀಡಲಾದ ಸತ್ಕಾರ ಕೂಟದಲ್ಲಿ ಆಫ್ರಿಕ ಮತ್ತು ಮೊರಿಷ್ಯಸ್ ದೇಶಗಳಿಂದ ಬಂದ ಅಹ್ಮದೀ ಅತಿಥಿಗಳು ಸಹ ಪಾಲುಗೊಂಡರು. ಖಾದಿಯಾನ್ ಸಂದರ್ಶಿಸಲು ಸಾಧ್ಯವಾದುದಕ್ಕೆ ಗವರ್ನರರು ತನ್ನ ಸಂತುಷ್ಟಿಯನ್ನು ಪ್ರಕಟಿಸಿ ಅಹ್ಮದಿಯಾ ಜಮಾಅತ್ ಗೈಯ್ಯುವ ಇಸ್ಲಾಂ ಧರ್ಮ ಸೇವೆಗಳನ್ನು ಶ್ಲಾಘಿಸಿದರು. ವಿಭಿನ್ನ ಸಮುದಾಯಗಳು ಪರಸ್ಪರ ಸೋದರತೆಯನ್ನೂ ಸಾಮರಸ್ಯವನ್ನೂ ಬೆಳೆಸಬೇಕೆಂಬ ಅಹ್ಮದಿಯಾ ಸಂಘಟನೆಯ ಸ್ಥಾಪಕರ ಅಧ್ಯಾಪನಗಳು ನಮಗೆ ಮಾರ್ಗದರ್ಶಕವಾಗಬೇಕೆಂದೂ ಅದಕ್ಕನುಗುಣವಾಗಿ ವರ್ತಿಸಿದರೆ ಭಾರತವನ್ನು ಸ್ವರ್ಗತುಲ್ಯವಾಗಿ ಮಾರ್ಪಡಿಸಲು ಸಾಧ್ಯವೆಂದೂ ಸನ್ಮಾನ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಅವರು ಹೇಳಿದರು.

ಪವಿತ್ರ ಖುರ್‌ಆನಿನ ಭಾಷಾಂತರ ಮತ್ತು ಇತರ ಅಹ್ಮದಿಯಾ ಸಾಹಿತ್ಯಗಳನ್ನು ಮಾನ್ಯ ಅತಿಥಿಗೆ ಪಾರಿತೋಷಕವಾಗಿ ನೀಡಲಾಯಿತು. ಗವರ್ನರರ ಪತ್ನಿಗೆ ಅಹ್ಮದಿಯಾ ವನಿತೆಯರ ವತಿಯಿಂದ ಪ್ರತ್ಯೇಕ ಸತ್ಕಾರ ನೀಡಲಾಯಿತು.

## ಯೊರುಬಾ ಭಾಷೆಯಲ್ಲಿ ಖುರ್‌ಆನ್ ಭಾಷಾಂತರದ ತೃತೀಯ ಆವೃತ್ತಿ

ನೈಜೀರಿಯಾ ಮತ್ತು ಇತರ ಕೆಲವು ಆಫ್ರಿಕನ್ ದೇಶಗಳ ಮುಖ್ಯ ಭಾಷೆ "ಯೊರುಬಾ"ದಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಖುರ್‌ಆನ್ ಭಾಷಾಂತರದ ಮೂರನೇ ಆವೃತ್ತಿ ಪ್ರಕಾಶನಗೊಂಡಿದೆಯೆಂದು ನೈಜೀರಿಯಾದ ಅಮೀರ್ ಹಾಗೂ ಮಿಶನರಿ ಮೌಲಾನಾ ಮುಹಮ್ಮದ್ ಅಜ್ಮಲ್ ಸಾಹೇಬರು ತಿಳಿಸಿರುವರು.

## ಇನ್ನೂ 3 ಪಾಶ್ಚಾತ್ಯ ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರ

ಬೇರೆ ಮೂರು ಪಾಶ್ಚಾತ್ಯ ಭಾಷೆಗಳಲ್ಲಿ ಸಹ ಖುರ್‌ಆನಿನ ಭಾಷಾಂತರ ಮಾಡಲು ಆರಂಭಿಸಲಾಗಿದೆಯೆಂದು ಅಹ್ಮದಿಯಾ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬರು ತಿಳಿಸಿದರು. 15 ತಿಂಗಳುಗಳೊಳಗೆ ವ್ಯಾಖ್ಯಾನ ಸಹಿತ ಆ ಖುರ್‌ಆನ್ ಭಾಷಾಂತರಗಳು ಪೂರ್ತಿಗೊಳ್ಳುವುವೆಂದೂ ಪ್ರತಿಯೊಂದು ಸುಮಾರು 1400 ಪುಟಗಳಿಂದ ಕೂಡಿರುವುದೆಂದೂ ಅವರು ಹೇಳಿದರು.

ಲೋಕದ ವಿವಿಧ ಭಾಷೆಗಳಲ್ಲಿ ಈಗಾಗಲೇ ಅಹ್ಮದಿಯಾ ಜಮಾಅತಿನ ವತಿಯಿಂದ ಖುರ್‌ಆನ್ ಭಾಷಾಂತರಿಸಲ್ಪಟ್ಟು ಪ್ರಕಾಶನಗೊಂಡಿದೆ. ಫ್ರೆಂಚ್ ಮತ್ತು ಸ್ಪಾನಿಷ್ ಭಾಷೆಗಳಲ್ಲಿ ಭಾಷಾಂತರ ಪೂರ್ತಿಗೊಂಡ ನಂತರ ರಶ್ಯನ್ ಮತ್ತು ಚೀನೀ ಭಾಷೆಗಳಲ್ಲಿ ಸಹ ಭಾಷಾಂತರ ಮಾಡಲಾಗುವುದೆಂದು ಖಲೀಫರು ಹೇಳಿದರು.

## ಖುರ್‌ಆನ್ ಭಾಷಾಂತರಕ್ಕೆ ಮುಟ್ಟುಗೋಲು

ಪಾಕಿಸ್ತಾನದ ಪಂಜಾಬ್ ಸರಕಾರ ಅಹ್ಮದಿಯಾ ಸಂಘಟನೆಯ ವತಿಯಿಂದ ಹಲವು ವರ್ಷಗಳಿಂದೀಚೆಗೆ ಪ್ರಕಟಗೊಳ್ಳುತ್ತಿರುವ ಪವಿತ್ರ ಖುರ್‌ಆನಿನ ಇಂಗ್ಲಿಷ್ ಭಾಷಾಂತರಕ್ಕೆ ಈಗ ಪಂಜಾಬ್ ಪ್ರಾಂತ್ಯದಲ್ಲಿ ಮುಟ್ಟುಗೋಲು ಹಾಕಿದೆ. ಈ ಭಾಷಾಂತರವನ್ನು ಮಾಡಿದವರು ದಿವಂಗತ ಮೌಲಾನಾ ಷೇರ್ ಅಲಿ ಸಾಹೇಬರು. ಅಹ್ಮದಿಯಾ ಜಮಾಅತಿನ ದ್ವಿತೀಯ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್‌ರವರು ಅದಕ್ಕೆ ಮುನ್ನುಡಿ ಬರೆದಿರುವರು.

1955ರಲ್ಲಿ ಹೋಲೇಂಡಿನಲ್ಲಿ ಅದು ಮೊತ್ತ ಮೊದಲಿಗೆ ಪ್ರಕಾಶನಗೊಂಡಿತು. ಅನಂತರ ಅದರ ಅನೇಕ ಆವೃತ್ತಿಗಳು ಪ್ರಕಟಗೊಂಡಿವೆ.

## ಮಾನಪತ್ರ ಮತ್ತು ಪದಕಗಳಿಗೆ ನಿಷೇಧ

ಪಾಕಿಸ್ತಾನ ಸರಕಾರ ಹೊರಡಿಸಿದ ವಿಚಿತ್ರವಾದೊಂದು ಪ್ರಕಟನೆಯಲ್ಲಿ ಇನ್ನು ಮುಂದೆ ಮಾನಪತ್ರವಾಗಲಿ ಪದಕವಾಗಲಿ ನೀಡುವ ಹಕ್ಕು ವ್ಯಕ್ತಿಗಳಿಗಾಗಲಿ ಸಂಸ್ಥೆಗಳಿಗಾಗಲಿ ಇರುವುದಿಲ್ಲವೆಂದು ಬಹಿರಂಗಪಡಿಸಿದೆ. ಮಾತ್ರವಲ್ಲ ಅದು ಶಿಕ್ಷಾರ್ಹವಾದ ಅಪರಾಧ ಸಹ ಆಗುವುದಂತೆ.

(ಅಹ್ಮದಿಯಾ ಜಮಾಅತಿನ ಖಲೀಫ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೇಬ್‌ರವರು ಮೂರು ವರ್ಷಗಳ ಮೊದಲು ಮಾಡಿದ ಘೋಷಣೆಯೊಂದರಲ್ಲಿ ಪಾಕಿಸ್ತಾನದ ಯುನಿವರ್ಸಿಟಿಗಳಲ್ಲಿ ಯಾವ ವಿಷಯದಲ್ಲೂ ಪ್ರಥಮ, ದ್ವಿತೀಯ, ತೃತೀಯ ರ್‍ಯಾಂಕ್ ಪಡೆಯುವ ಅಹ್ಮದಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸ್ವರ್ಣ ಪದಕ ನೀಡಲಾಗುವುದೆಂದು ಪ್ರಸ್ತಾವಿಸಿದ್ದರು. ಕಳೆದ ಮೂರು ವರ್ಷಗಳಲ್ಲಿ 30ಕ್ಕೂ ಮಿಕ್ಕ ಅಹ್ಮದಿ ವಿದ್ಯಾರ್ಥಿ ವಿದ್ಯಾರ್ಥಿನಿಯರು ಪ್ರಸ್ತುತ ಪದಗಳಿಸಿದ್ದರೆಂಬುದನ್ನು ಇಲ್ಲಿ ನೆನಪಿಸಬಹುದು)

## ಲೋಕಮತ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿ

ಕಳೆದ ಒಕ್ಟೋಬರ್ 3ನೇ ವಾರದಲ್ಲಿ ಕೊಚ್ಚಿಯಲ್ಲಿ ನಡೆದ ಲೋಕಮತ ಸಮ್ಮೇಳನದಲ್ಲಿ ಅಹ್ಮದಿಯಾ ಪ್ರತಿನಿಧಿಯಾದ ಡಾ। ಹಾಫಿಝುಸ್ ಸಾಲಿಹ್ ಮುಹಮ್ಮದ್ ಅಲ್ಲಾದೀನ್ ಅವರು ಭಾಷಣ ಮಾಡಿದರು. ಯಥಾರ್ಥ ಮತವೂ ಯಥಾರ್ಥ ವಿಜ್ಞಾನವೂ ಸಾಮರಸ್ಯವನ್ನು ಹೊಂದಿವೆ; ವಿರಸವನ್ನಲ್ಲವೆಂದು ಅವರು ಹೇಳಿದರು. ಡಾ। ಸಾಲಿಹ್ ಮುಹಮ್ಮದ್ ಸಾಹೇಬರು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಖಗೋಳ ಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದಾರೆ.

## 155 ಮಂದಿ ಅಹ್ಮದೀಯರಾದರು

ಹೈದರಾಬಾದಿನಿಂದ 200 ಕಿ. ಮೀ. ದೂರವಿರುವ ಒಂದು ಗ್ರಾಮದಲ್ಲಿ 155 ಮಂದಿ ಅಹ್ಮದಿಯಾ ಜಮಾಅತಿಗೆ ಸೇರಿರುವರು. ಮಕ್ಕಳ ಸಹಿತ ಅವರ ಒಟ್ಟು ಸಂಖ್ಯೆ ಸುಮಾರು 350.

## ಕೆನಡಾದಲ್ಲಿ 40 ಎಕ್ರೆ ಸ್ಥಳ

ಕೆನಡಾದ ಕಲ್‌ಗರಿ ಪಟ್ಟಣದಿಂದ ಏಳು ಮೈಲು ದೂರದಲ್ಲಿ ಅಹ್ಮದಿಯಾ ಜಮಾಅತ್‌ಗಾಗಿ 40 ಎಕ್ರೆ ಸ್ಥಳವನ್ನು ಖರೀದಿಸಲಾಗಿದೆ. ಅಲ್ಲಿ ದೊಡ್ಡದಾದೊಂದು ಮಸೀದಿಯನ್ನೂ ಪ್ರಚಾರ ಕೇಂದ್ರವನ್ನೂ ಸ್ಥಾಪಿಸಲಾಗುವುದು.

ಟೊರೊಂಟೋದಲ್ಲಿ ಮಿಶನ್ ಕೇಂದ್ರಕ್ಕಾಗಿ ಎರಡಂತಸ್ತಿನ ಒಂದು ಕಟ್ಟಡವನ್ನು ಖರೀದಿಸಲಾಗಿದೆ.

## ಖಾದಿಯಾನದಲ್ಲಿ ಪೈಗಂಬರರ ದಿನಾಚರಣೆ

ಅಹ್ಮದಿಯಾ ಕೇಂದ್ರಸ್ಥಾನವಾದ ಖಾದಿಯಾನದ ಮಸ್ಜಿದ್ ಅಕ್ಸಾದಲ್ಲಿ ಜನವರಿ 9ರಂದು ಪೈಗಂಬರರ ದಿನವನ್ನು ಆಚರಿಸಲಾಯಿತು. ಅಂದು ಬೆಳಿಗ್ಗೆ 9-30 ಗಂಟೆಗೆ ಸಮಾವೇಶಗೊಂಡ ಸಭೆಯ ಅಧ್ಯಕ್ಷತೆಯನ್ನು ಮಲಿಕ್ ಸಲಾಹುದ್ದೀನ್ ಸಾಹೇಬರು ವಹಿಸಿದ್ದರು.

ಮೌಲವಿ ಝಹೀರ್ ಅಹ್ಮದ್ ಸಾಹೇಬರ ಖುರ್ ಆನ್ ಪಾರಾಯಣದೊಂದಿಗೆ ಸಭೆಯು ಆರಂಭಿಸಿತು. ಮೌಲಾನಾ ಶರೀಫ್ ಅಹ್ಮದ್ ಅಮೀನಿ, ಮೌಲವಿ ಕರೀಮುದ್ದೀನ್, ಹಕೀಂ ಮುಹಮ್ಮದುದ್ದೀನ್ ಮೊದಲಾದವರು ಪೈಗಂಬರರ ಜೀವನದ ವಿವಿಧ ಘಟ್ಟಗಳ ಕುರಿತು ಭಾಷಣ ಮಾಡಿದರು.

## ಸಿರಿಯನ್ ಕ್ರೈಸ್ತರ ಧರ್ಮಗುರುವಿಗೆ ಅಹ್ಮದಿಯಾ ಸಾಹಿತ್ಯಗಳು

ಸಿರಿಯನ್ ಕ್ರೈಸ್ತರ ಧರ್ಮಗುರು ಎಂಟಿಯೋಕ್ ಮತ್ತು ಆಲ್ ದಿ ಈಸ್ಟ್‌ನ ಪ್ರಿನ್ಸ್ ಪೇಟ್ರಿಯಾರ್ಕ್ ಮೋರನ್ ಮಾರ್ ಇಗ್ನೇಶಿಯಸ್ ಝಕ್ಕಾ-I ಅವರು ಮಾರ್ಚ್ 15ರಂದು ಮಂಗಳೂರು ಸಂದರ್ಶಿಸಿದಾಗ ಸ್ಥಳೀಯ ಅಹ್ಮದೀಯರ ವತಿಯಿಂದ ಅವರಿಗೆ ಅಹ್ಮದಿಯಾ ಸಾಹಿತ್ಯಗಳನ್ನು ನೀಡಲಾಯಿತು.

## ಖುರ್‌ಆನ್ ಅರ್ಥ-ವ್ಯಾಖ್ಯಾನ ಸ್ಪರ್ಧೆ

ಅಹ್ಮದೀ ಯುವಜನರಿಗಾಗಿ ಖುರ್‌ಆನಿನ ಅರ್ಥ ಮತ್ತು ವ್ಯಾಖ್ಯಾನ ಹೇಳುವ ಸ್ಪರ್ಧೆಯೊಂದನ್ನು ಮಾರ್ಚ್ 13ರಂದು ಮಂಜೇಶ್ವರದಲ್ಲಿ ಏರ್ಪಡಿಸಲಾಗಿತ್ತು. ಎಂ. ಪಿ. ಇಬ್ರಾಹಿಂ, ಕೆ. ಕೆ. ಬದ್ರುದ್ದೀನ್ ಮತ್ತು ಮುಹಮ್ಮದ್ ಇಸ್ಮಾಯಿಲ್ ಎಂಬವರು ಅನುಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಪಡೆದರು. ಜನಾಬ್ ಎಂ. ಅಬ್ದುರ್ರಶೀದ್ ಸಾಹೇಬರು ವಿಜೇತರಿಗೆ ತನ್ನ ವತಿಯಿಂದ ಬಹುಮಾನ ವಿತರಣೆ ಮಾಡಿದರು.

ಪುಸ್ತಕ ವಿಭಾಗ

# ಇಸ್ಲಾಂ ಮತ ತತ್ತ್ವಜ್ಞಾನ

**( 15 )**

ಗ್ರಂಥಕರ್ತ: **ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**

ಅನುವಾದಕ: **ಮುಹಮ್ಮದ್ ಯೂಸುಫ್**

## ಮಹಾತ್ಮರ ಕಷ್ಟಾನುಭವ

ಜ್ಞಾನಸಿದ್ಧಿಯ ಮೂರನೆಯ ಮಾರ್ಗ ದೈವಾಸ್ತಿತ್ವದ ಕುರಿತು 'ಹಕ್ಕುಲ್ ಯಖೀನ್' ಅಥವಾ 'ಅನುಭವ ಜ್ಞಾನ'ಕ್ಕೆ ತುಲ್ಯವಾದ ಸ್ವಾನುಭವವಾಗಿದೆ. ಎಂದರೆ, ದೇವನಿಯುಕ್ತರಾದ ಪ್ರವಾದಿಗಳೂ ಸತ್ಯಸಂಧರಾದ ಸತ್ಪುರುಷರೂ ಶತ್ರುಗಳ ಕೈಗಳಿಂದಾಗಲಿ ದೈವವಿಧಿಯಿಂದಾಗಲಿ ಸಹಿಸಬೇಕಾಗಿ ಬರುವ ಕಷ್ಟಾನುಭವಗಳೂ ಕ್ಲೇಶಗಳೂ. ಈ ರೀತಿಯ ಕಷ್ಟಾನುಭವಗಳ ಕಾರಣದಿಂದ ಮನುಷ್ಯನ ಹೃದಯದಲ್ಲಿ ಜ್ಞಾನರೂಪದಲ್ಲಿದ್ದ ಧರ್ಮ ನಿರ್ದೇಶಗಳೂ ಧರ್ಮಶಾಸನಗಳೂ ಅನುಷ್ಠಾನಕ್ಕೆ ಬಂದು ಆ ಮೂಲಕ ಅವು ಅನುಭವದಶೆ ಅಥವಾ ಪೂರ್ಣತೆಯನ್ನು ಪಡೆಯುತ್ತವೆ. ಹೀಗೆ, ಹೃದಯದಲ್ಲಿ ರೂಪಗೊಂಡ ಭಾವನಾ ಜ್ಞಾನಗಳನ್ನು ಯಥಾರೀತಿ ಜೀವಿತದಲ್ಲಿ ಪ್ರತಿಬಿಂಬಿಸುವವನು ಆ ದಿವ್ಯಮಾರ್ಗೋಪದೇಶದ ಮಾದರಿ ಪುರುಷನಾಗುತ್ತಾನೆ. ಮಸ್ತಿಷ್ಕದಲ್ಲೂ ಮನಸ್ಸಿನಲ್ಲೂ ಜ್ಞಾನರೂಪದಲ್ಲಿ ತುಂಬಿಕೊಂಡಿರುವ ಕ್ಷಮೆ, ಪ್ರತಿಕ್ರಿಯೆ, ಸಹನೆ, ದಯೆ ಮುಂತಾದ ಗುಣಗಳೆಲ್ಲಾ ಕ್ರಿಯಾರೂಪದಲ್ಲಿ ಮನುಷ್ಯನ ಬಾಹ್ಯ ಮತ್ತು ಆಂತರಿಕವಾದ ಸಕಲ ಇಂದ್ರಿಯಗಳಲ್ಲೂ ಪ್ರತಿಚ್ಛಾಯೆ ಮೂಡಿಸತೊಡಗುತ್ತವೆ. ತನ್ಮೂಲಕ, ಆತನಿಗೆ ಆ ಗುಣಗಳು ನಾಮಮಾತ್ರ ಗುಣಗಳಾಗಿರದೆ ಆತನ ಸಕಲ ಅವಯವಗಳಲ್ಲಿ ಪ್ರತಿಫಲಿಸಿ ಕಾಣುವ ಯಥಾರ್ಥ ಗುಣಗಳಾಗಿ ಶೋಭಿಸುತ್ತವೆ. ಈ ವಿಷಯದಲ್ಲಿ ಅಲ್ಲಾಹು ಖುರ್‌ಆನಿನಲ್ಲಿ ಹೀಗೆ ಹೇಳುತ್ತಾನೆ:

ವ ಲನಬ್ಲುವನ್ನಕುಂ ಬಿಶೈಇನ್ ಮಿನಲ್ ಖೌಫಿ ವಲ್‌ಜೂಇ ವ ನಕ್ಸಿನ್ ಮಿನಲ್ ಅಮ್ವಾಲಿ ವಲ್ ಅನ್‌ಫುಸಿ ವ ಸ್ಸಮರಾತಿ ವ ಬಶ್ಶಿರಿ ಸ್ಸಾಬಿರೀನಲ್ಲದೀನ ಇದಾ ಅಸಾಬತ್‌ಹುಂ ಮುಸೀಬತುನ್ ಕಾಲೂ ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಉಲಾಇಕ ಅಲೈಹಿಂ ಸಲವಾತುನ್‌ಮಿನ್ ರ್ರಬ್ಬಿಹಿಂ ವ ರಹ್ಮತುನ್ ವ ಉಲಾಇಕ ಹುಮುಲ್ ಮುಹ್ತದೂನ್ (2:156–158).

ನಾವು ನಿಮ್ಮನ್ನು ಭಯ ಮತ್ತು ಹಸಿವೆಯ ಮೂಲಕವೂ ಧನ ಮತ್ತು ಜೀವಹಾನಿ ಮೂಲಕವೂ ಪ್ರಯತ್ನವನ್ನು ನಿಷ್ಫಲಗೊಳಿಸಿಯೂ ಸಂತಾನವನ್ನು ನಷ್ಟಗೊಳಿಸಿಯೂ ಪರೀಕ್ಷೆಗೊಳಪಡಿಸುವೆವು. (ಎಂದರೆ ಈ ರೀತಿಯ ದು:ಖಾನುಭವಗಳು ದೈವನಿಯತಿ ಪ್ರಕಾರ ಅಥವಾ ಶತ್ರುಗಳ ಕೈಯಿಂದ ನಿಮಗುಂಟಾಗುವುವು). ತಮಗೆ ಆಪತ್ತುಗಳು ಎದುರಾಗುವಾಗ 'ನಾವು ಖಂಡಿತವಾಗಿಯೂ ದೇವನಿಗಾಗಿರುವವರೂ ಅವನೆಡೆಗೆ ಹಿಂತೆರಳುವವರೂ ಆಗಿದ್ದೇವೆ' ಎಂದು ಹೇಳುವ ಸಹನಾಶೀಲರಿಗೆ ಶುಭವಾರ್ತೆ ನೀಡು. ಈ ಜನರಿಗೆ ದೇವನ ಅನುಗ್ರಹ ಮತ್ತು ಕೃಪಾಕಟಾಕ್ಷವಿದೆ. ಸನ್ಮಾರ್ಗದಲ್ಲಿ ಪರಿಪೂರ್ಣತೆ ಹೊಂದಿದವರು ಇವರೇ ಆಗಿದ್ದಾರೆ.

ಇದರಿಂದ ತಿಳಿದು ಬರುವುದೇನೆಂದರೆ. ಮಸ್ತಿಷ್ಕ ಮತ್ತು ಹೃದಯದಲ್ಲಿ ಶೇಖರಿಸಲ್ಪಟ್ಟ, ಜೀವಿತಾನುಷ್ಠಾನದಲ್ಲಿ ಬಾರದ ಅರಿವಿಗೆ ಯಾವ ಶ್ರೇಷ್ಠತೆಯೂ ಇಲ್ಲ. ಮೆದುಳಿನಿಂದ ನಿರ್ಗಮಿಸಿ ಕ್ರಿಯಾರೂಪದಲ್ಲಿ ಹೊರಬಂದು ಸಕಲೇಂದ್ರಿಯಗಳಲ್ಲೂ ಪ್ರತಿಬಿಂಬಿಸುವ ಅರಿವೇ ಯಥಾರ್ಥ ಜ್ಞಾನ. ಒಟ್ಟಾಗಿ, ಒಬ್ಬನ ಜ್ಞಾನ ಸುದೃಢವಾಗಲಿಕ್ಕೂ

ವೃದ್ಧಿಹೊಂದಲಿಕ್ಕೂ ಉತ್ತಮ ಮಾರ್ಗ, ಅದನ್ನು ಕ್ರಿಯಾರೂಪದಲ್ಲಿ ತಂದು ಅದರ ಪ್ರತಿಚ್ಛಾಯೆಯನ್ನು ತನ್ನ ಇಂದ್ರಿಯಾದಿಗಳಲ್ಲಿ ಸ್ವರೂಪಿಸುವುದಾಗಿದೆ. ಚಿಕ್ಕದಾದೊಂದು ಕಾರ್ಯಕ್ಕೆ ಸಂಬಂಧಿಸಿದ ಅರಿವಾದರೂ ಕ್ರಿಯಾರೂಪದಲ್ಲಿ ಬಾರದ ಹೊರತು ಅಪೂರ್ಣವಾಗಿರುತ್ತದೆ. ಉದಾಹರಣೆಗೆ, ರೊಟ್ಟಿ ಮಾಡುವುದು ಸುಲಭವೆಂದೂ ಪ್ರಯಾಸಕರವಲ್ಲವೆಂದೂ ನಮಗೆ ತಿಳಿದಿದ್ದರೂ ಅದನ್ನು ಮಾಡಿದ ಅನುಭವ ಪಡೆಯದಿರುವ ತನಕ ತಿಳುವಳಿಕೆ ಪೂರ್ಣವಾಗಲಿಕ್ಕಿಲ್ಲ. ಆ ಬಗ್ಗೆ ಅನುಭವವಿಲ್ಲದೆ, ಯಾರಾದರೂ ರೊಟ್ಟಿಮಾಡಲು ತೊಡಗುವನಾದರೆ ಅವನು ಬಹಳ ಕಷ್ಟಪಡುವನು ಮಾತ್ರವಲ್ಲ ತುಂಬಾ ಹಿಟ್ಟಿನ್ನೂ ಅಪವ್ಯಯ ಮಾಡುವನು. ಸಾಮಾನ್ಯ ವಿಷಯದಲ್ಲಿ ಕೂಡ ಕ್ರಿಯಾಚರಣೆ ಇಲ್ಲದ ತಿಳುವಳಿಕೆಯ ಸ್ಥಿತಿ ಈ ರೀತಿಯಾಗಿರುವಾಗ ಗಂಭೀರ ವಿಷಯಗಳಲ್ಲಿ ಭಾವನಾತ್ಮಕ ಜ್ಞಾನವನ್ನು ಮಾತ್ರ ಆಶ್ರಯಿಸಿಕೊಂಡರೆ ಪ್ರಯೋಜನವೇನು? ಒಟ್ಟಿನಲ್ಲಿ, ದೇವನು ಪರೀಕ್ಷಣಾರ್ಥ ನಮ್ಮ ಜೀವಿತದಲ್ಲಿ ತಂದೊಡ್ಡುವ ಕಷ್ಟ-ಕ್ಲೇಶಗಳು ನಮಗೆ ಅನುಭವಜ್ಞಾನ ಲಭಿಸುವಂತೆ ಮಾಡಲಿಕ್ಕಿರುವ ದಾರಿಗಳೆಂದು ಮೇಲೆ ಉದ್ಧರಿಸಲಾದ ಖುರ್‌ಆನ್ ವಚನಗಳು ನಮಗೆ ಬೋಧಿಸುತ್ತವೆ. ಬೇರೆ ಮಾತಿನಲ್ಲಿ ಹೇಳುವುದಾದರೆ, ಕಷ್ಟಾನುಭವಗಳ ಮೂಲಕ, ಜ್ಞಾನರೂಪದ ಸ್ಥಿತಿಯಲ್ಲಿರುವ ಸದ್ಗುಣಗಳು ಅನುಷ್ಠಾನದಲ್ಲಿ ಬಂದು ತದ್ವಾರಾ ಜ್ಞಾನವು ಪೂರ್ಣತೆಯನ್ನು ಪಡೆಯುತ್ತದೆ.

ಮತ್ತೊಂದೆಡೆಯಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ:

> ಲತುಬ್ಲವುನ್ನ ಫೀ ಅಮ್ವಾಲಿಕುಂ ವ ಅನ್
> ಫುಸಿಕುಂ ವ ಲತಸ್ಮಉನ್ನ ಮಿನಲ್ಲದೀನ ಊತುಲ್
> ಕಿತಾಬ ಮಿನ್ ಕಬ್ಲಿಕುಂ ವ ಮಿನಲ್ಲದೀನ ಅಶ್ರಕೂ
> ಅದನ್ ಕಸೀರಾ-ವ ಇನ್ ತಸ್‌ಬಿರೂ ವ ತತ್ತಕೂ
> ಫಇನ್ನ ದಾಲಿಕ ಮಿನ್ ಅಸ್‌ಮಿಲ್ ಉಮೂರ್
> (3 : 187).

ನಿಮ್ಮ ಸಂಪತ್ತು ಮತ್ತು ಜೀವಗಳ ಸಂಬಂಧಿಸಿ ನೀವು ಪರೀಕ್ಷಿಸಲ್ಪಡುವಿರಿ. ಎಂದರೆ, ಜನರು ನಿಮ್ಮ ಸಂಪತ್ತುಗಳನ್ನು ಕಸಿದುಕೊಂಡು ನಿಮ್ಮನ್ನು ಕೊಲೆ ಮಾಡುವರು. ಯಹೂದ, ಕ್ರೈಸ್ತ ಮತ್ತು ಬಹುದೈವಾರಾಧಕರ ಕೈಯಿಂದ ನೀವು ದ್ರೋಹಿಸಲ್ಪಡುವಿರಿ; ಅವರ ಮುಖದಿಂದ ಅಸಹನೀಯ ಅನೇಕ ಸಂಗತಿಗಳನ್ನು ಕೇಳಬೇಕಾದೀತು. ಆದರೆ ನೀವು ತಾಳ್ಮೆವಹಿಸಿ, ಅನುಚಿತ ಕಾರ್ಯಗಳನ್ನು ಕೈಗೊಳ್ಳದಿದ್ದರೆ ಅದೊಂದು ಶ್ರೇಷ್ಠ ಹಾಗೂ ಘನತರ ಕೃತ್ಯವಾಗುವುದು.

ಈ ಎಲ್ಲಾ ವಚನಗಳ ತಾತ್ಪರ್ಯ, ಕರ್ಮರೂಪದಲ್ಲಿ ಪ್ರಕಾಶಿತವಾಗುವ ಜ್ಞಾನ ಅನುಗ್ರಹೀತವೂ ಅನುಷ್ಠಾನದಲ್ಲಿ ಬಾರದ ಭಾವನಾತ್ಮಕ ತಿಳುವಳಿಕೆ ಫಲಶೂನ್ಯವೂ ಎಂದಾಗಿದೆ.

## ಪೈಗಂಬರರ ಜೀವಿತದ ಎರಡು ಘಟ್ಟಗಳು

ವ್ಯಾಪಾರದಿಂದ ಧನ ವೃದ್ಧಿಗೊಳ್ಳುವಂತೆಯೇ ಜ್ಞಾನವು ಕ್ರಿಯಾತ್ಮಕ ರಂಗದಲ್ಲಿ ಪ್ರವೇಶಿಸುವ ಮೂಲಕ ಅದರ ಆಧ್ಯಾತ್ಮಿಕ ವಿಕಾಸವನ್ನು ಪಡೆಯುತ್ತದೆ. ಆದುದರಿಂದ ಜ್ಞಾನವನ್ನು ಪರಿಪೂರ್ಣತೆಗೆ ತಲಪಿಸುವ ಉತ್ತಮ ಮಾರ್ಗ, ಅದನ್ನು ಪ್ರಯೋಗದಲ್ಲಿ ತರುವುದೇ ಆಗಿದೆ. ಹಾಗೆ ಮಾಡುವುದರಿಂದ ಅದು ಶೋಭಾಯಮಾನವಾಗುತ್ತದೆ. ಅದರ ಎಲ್ಲಾ ಅಂಶಗಳನ್ನು ಪ್ರಯೋಗಾತ್ಮಕವಾಗಿ ಪರೀಕ್ಷಿಸುವುದೇ ಅದನ್ನು "ಹಕ್ಕುಲ್ ಯಖೀನ್" ಎಂಬ ಅನುಭವಾವಸ್ಥೆಗೆ ತಲಪಿಸುತ್ತದೆ. ಇಸ್ಲಾಮಿಕ ತತ್ವಗಳ ಸಂಬಂಧಿಸಿ ಇದನ್ನೇ ಕಾಣಬಹುದು. ಪವಿತ್ರ ಖುರ್‌ಆನಿನ ಮೂಲಕ ಲೋಕಕ್ಕೆ ನೀಡಲ್ಪಟ್ಟಿರುವ ತತ್ವಗಳು ಕರ್ಮರೂಪದಲ್ಲಿ ಪ್ರಕಾಶಿಸಲ್ಪಡಲಿಕ್ಕೂ ಅದರ ಆಧ್ಯಾತ್ಮಿಕ ಪ್ರಭೆ ಪ್ರತಿಬಿಂಬಿಸಲ್ಪಡಲಿಕ್ಕೂ ಸರ್ವಶಕ್ತನಾದ ದೇವನು ಪೈಗಂಬರರಿಗೂ ಸಹಚರರಿಗೂ ಸಂದರ್ಭ ಒದಗಿಸಿ ಕೊಟ್ಟಿದ್ದನು. ಈ ಆವಶ್ಯಾರ್ಥಕ್ಕಾಗಿ ದೇವನು ಪೈಗಂಬರರ ಜೀವನ ಕಾಲವನ್ನು ಎರಡು ಹಂತಗಳಾಗಿ ವಿಂಗಡಿಸಿರುವನು. ಒಂದು: ದುಃಖ, ಕಷ್ಟ, ಕ್ಲೇಶಗಳ ಕಾಲ. ಇನ್ನೊಂದು: ವಿಜಯೋತ್ಸವ ಮತ್ತು ಅಧಿಕಾರಾರೋಹಣದ ಕಾಲ. ಈ ರೀತಿಯಲ್ಲಿ ಎರಡು ಹಂತಗಳಾಗಿ ವಿಂಗಡಿಸಿದ್ದು ಪೈಗಂಬರರ ಎರಡು ಬಗೆಯ ಶ್ರೇಷ್ಠ ಗುಣಗಳು ಪ್ರಕಾಶಿಸಲ್ಪಡಲಿಕ್ಕಾಗಿದೆ. ಎಂದರೆ ಕಷ್ಟಾರಿಷ್ಟತೆಗಳ ಅವಸ್ಥೆಯಲ್ಲಿ ಬಹಿರಂಗ ಪಡಬೇಕಾದ ಸದ್ಗುಣಗಳು ಆ ಹಂತದಲ್ಲೂ ವಿಜಯೋತ್ಸವ ಮತ್ತು ಅಧಿಕಾರಾ

ರೂಢ ಕಾಲದಲ್ಲಿ ಅಭಿವ್ಯಕ್ತಿಗೊಳ್ಳಬೇಕಾದ ಮಹದ್ಗುಣಗಳು ಆ ಹಂತದಲ್ಲೂ ಪ್ರಕಟಗೊಂಡವು. ಈ ಪ್ರಕಾರದಲ್ಲಿ ಎರಡು ವಿಭಿನ್ನ ಹಂತಗಳಲ್ಲಿ ಪೈಗಂಬರರ ಮಹತ್ತಾದ ನೈತಿಕ ಗುಣಗಳು ಪರೀಕ್ಷೆಗೊಳಗಾಗಿ ಅವು ಪರಿಪೂರ್ಣವಾದ ರೀತಿಯಲ್ಲಿ ಪ್ರಕಾಶಿಸಲ್ಪಟ್ಟವು. ಮಕ್ಕಾ ಜೀವನ ಕಾಲದಲ್ಲಿ ಹದಿಮೂರು ವರ್ಷಗಳ ವರೆಗೆ ಕಷ್ಟ-ಕ್ಲೇಶಗಳ ಅವಸ್ಥೆಯನ್ನು ಲಕ್ಷ್ಯವಿಟ್ಟು ಅಧ್ಯಯನ ಮಾಡುವುದಾದರೆ ಸತ್ಯಭಕ್ತರಾದ ಸಿದ್ಧಪುರುಷರು ಕಷ್ಟಾನುಭವ ಕಾಲದಲ್ಲಿ ಪ್ರಕಟಪಡಿಸಬೇಕಾದ ಸಕಲ ನೈತಿಕ ಗುಣಗಳನ್ನು ಸಹ ಅತ್ಯಂತ ಮಹತ್ತರವಾದ ರೀತಿಯಲ್ಲಿ ಪೈಗಂಬರರು ತನ್ನ ಜೀವಿತದಲ್ಲಿ ತೋರಿಸಿದ್ದರೆಂದು ಸ್ಪಷ್ಟವಾಗುತ್ತದೆ. ದೇವನೊಡನಿರುವ ಅಸಂದಿಗ್ಧ ವಿಶ್ವಾಸ ಮತ್ತು ಪ್ರತ್ಯಾಶೆ, ಅಚಂಚಲವಾದ ದೃಢಮನಸ್ಕತೆ, ಕರ್ತವ್ಯ ನಿಷ್ಠೆ, ಸ್ಥಿರೋತ್ಸಾಹ, ನಿರ್ಭಯತೆ ಇತ್ಯಾದಿ ಸಕಲ ಶೇಷ್ಠ ಗುಣಗಳು ಪೈಗಂಬರರ ಜೀವನದಲ್ಲಿ ಕಂಡು ಆಕರ್ಷಿತರಾದ ಅವಿಶ್ವಾಸಿಗಳು, ವಿಶ್ವಾಸಿಗಳಾಗಿ ಪರಿವರ್ತಿತರಾಗಿ, ದೇವನಲ್ಲಿ ಪರಿಪೂರ್ಣವಾದ ಭರವಸೆಯನ್ನಿಡುವ ಒಬ್ಬ ದಿವ್ಯ ಪುರುಷನಿಗಲ್ಲದೆ ಇಂತಹ ಪರೀಕ್ಷಾಘಟ್ಟದಲ್ಲಿ ಸ್ಥಿರನಿಷ್ಠೆ ಮತ್ತು ಸಹನೆ ತೋರ್ಪಡಿಸಲಿಕ್ಕೆ ಸಾಧ್ಯವಿಲ್ಲವೆಂದು ಸಾಕ್ಷ್ಯವಹಿಸಿದರು.

ಅನಂತರ ಪೈಗಂಬರರ ಜೀವನದ ಎರಡನೆಯ ಹಂತವಾದ ವಿಜಯ, ಅಧಿಕಾರಶಕ್ತಿ ಮತ್ತು ಐಶ್ವರ್ಯದ ಕಾಲ ಮದೀನದಲ್ಲಿ ಆರಂಭಿಸಿತು. ಈ ಕಾಲದಲ್ಲಿ ಪೈಗಂಬರರ ಶ್ರೇಷ್ಠ ಗುಣಗಳ ಇನ್ನೊಂದು ರೂಪ – ಕ್ಷಮಾಶೀಲತೆ, ಉದಾರತೆ, ಧೀರತೆ ಮೊದಲಾದವು – ಪೂರ್ಣವಾಗಿ ಗೋಚರಿಸಿತು. ಈ ಮಹತ್ತಾದ ಗುಣಗಳನ್ನು ಕಂಡು ಅವಿಶ್ವಾಸಿಗಳಲ್ಲಿ ಹಲವರು ಇಸ್ಲಾಂ ಮತವನ್ನು ಸ್ವೀಕರಿಸಿದರು. ಪೈಗಂಬರರು ತನ್ನನ್ನು ಪೀಡಿಸಿದವರಿಗೆ ಕ್ಷಮೆ ನೀಡಿದರು; ತನ್ನನ್ನು ಸ್ವದೇಶದಿಂದ ಹೊರ ಅಟ್ಟಿದವರಿಗೆ ಅಭಯ ನೀಡಿ ಅವರ ಪೈಕಿ ಬಡವರನ್ನು ಐಶ್ವರ್ಯವಂತರನ್ನಾಗಿ ಮಾಡಿದರು; ತನ್ನ ಶಕ್ತಿಗೆ ಅಧೀನರಾದ ಬದ್ಧವೈರಿಗಳಿಗೆ ಯಾವ ರೀತಿಯ ಶಿಕ್ಷೆ ವಿಧಿಸಲೂ ತನಗೆ ಸಾಧ್ಯವಿದ್ದರೂ ಅವರನ್ನು ಶಿಕ್ಷಿಸದೆ ಕ್ಷಮಿಸಿದರು. ಆ ಮಹಾತ್ಮರ ಈ ತರದ ಸದ್ಗುಣಗಳಿಂದ ಆಕರ್ಷಿತರಾದ ಅಧಿಕಾಂಶ ಜನರು ದೇವನಿಯುಕ್ತರಾದ ಓರ್ವ ಸತ್ಯಪುರುಷನಿಗಲ್ಲದೆ ಇಂತಹ ಮಹದ್ಗುಣಗಳನ್ನು ಪ್ರದರ್ಶಿಸಲು ಸಾಧ್ಯವಿಲ್ಲವೆಂದು ಸಾಕ್ಷ್ಯವಹಿಸಿದರು. ಈ ಕಾರಣದಿಂದಲೇ ಶತ್ರುಗಳಿಗೆ ಪೈಗಂಬರರ ಮೇಲಿದ್ದ ಹಳೆಯ ವಿದ್ವೇಷ ಸ್ನೇಹವಾಗಿ ರೂಪಾಂತರಗೊಂಡಿತು.

ಪೈಗಂಬರರು ತನ್ನ ಜೀವನದಲ್ಲಿ ಪ್ರತಿಬಿಂಬಿಸಿದ ಶ್ರೇಷ್ಠ ಗುಣಗಳಲ್ಲಿ ಒಂದರ ಕುರಿತು ಖುರ್‌ಆನ್ ಹೀಗೆ ಹೇಳುತ್ತದೆ:

> ಕುಲ್ ಇನ್ನ ಸಲಾತೀ ವ ನುಸುಕೀ ವ ಮಹ್ಯಾಯ ವ ಮಮಾತೀ ಲಿಲ್ಲಾಹಿ ರಬ್ಬಿಲ್ ಆಲಮೀನ್ (6 : 163)
>
> ಅವರೊಡನೆ ಹೇಳು: ನನ್ನ ಪ್ರಾರ್ಥನೆ ನನ್ನ ತ್ಯಾಗ, ನನ್ನ ಜೀವನ, ನನ್ನ ಮರಣ ಎಲ್ಲವೂ ದೈವ ಮಾರ್ಗದಲ್ಲಿ.

ಎಂದರೆ, ದೇವನ ಮಹಿಮೆಯನ್ನು ಬಹಿರಂಗಪಡಿಸಲಿಕ್ಕಾಗಿಯೂ ಅವನ ಸೃಷ್ಟಿಗಳಾದ ಮನುಷ್ಯರಿಗೆ ಸ್ವಮರಣದಿಂದ ಒಂದು ಜೀವನ ಪ್ರಾಪ್ತವಾಗುವೋಪಾದಿಯಲ್ಲಿ ಹಿತವನ್ನುಂಟು ಮಾಡಲಿಕ್ಕಾಗಿಯೂ. ಇಲ್ಲಿ, ದೈವಪಥದಲ್ಲೂ ಮನುಷ್ಯರ ಕ್ಷೇಮಾಭಿವೃದ್ಧಿಗಾಗಿಯೂ ಮರಣ ಎಂದು ಹೇಳಿದುದರ ತಾತ್ಪರ್ಯ, ಪೈಗಂಬರರು ಅಜ್ಞರಂತೆ ಅಥವಾ ಮತಿಭ್ರಮೆಗಳಂತೆ ತನ್ನನ್ನು ತಾನೇ ಕೊಲ್ಲುವುದರ ಮೂಲಕ ಇತರರಿಗೆ ಹಿತವನ್ನುಂಟು ಮಾಡಬಹುದೆಂಬ ಭ್ರಮೆಯಿಂದ ಆತ್ಮಹತ್ಯೆಗೆ ಉದ್ಯುಕ್ತರಾದರೆಂದು ಯಾರೂ ತಪ್ಪು ಭಾವಿಸಬಾರದು. ಪೈಗಂಬರರು ಈ ರೀತಿಯ ಬುದ್ಧಿಶೂನ್ಯ ವರ್ತನೆಯನ್ನು ಕಠಿಣವಾಗಿ ವಿರೋಧಿಸಿದ್ದರು. ಆತ್ಮಹತ್ಯೆ ಮಾಡುವವನನ್ನು ಖುರ್‌ಆನ್ ಮಹಾ ಪಾತಕಿಯೆಂದೂ ಶಿಕ್ಷಾರ್ಹನೆಂದೂ ಪರಿಗಣಿಸಿದೆ. ಅದು ಹೀಗೆ ಹೇಳುತ್ತದೆ:

> ವಲಾ ತುಲ್‌ಖೂ ಬಿಐದೀಕುಂ ಇಲತ್ತಹ್ಲುಕತಿ (2 : 196).
>
> ನೀವು ಆತ್ಮಹತ್ಯೆ ಮಾಡಬಾರದು, ಸ್ವಂತ ಕೈಗಳಿಂದ ನೀವು ನಿಮ್ಮನ್ನೇ ನಾಶಪಡಿಸಬೇಡಿರಿ.

ಖಾಲಿದನ ಹೊಟ್ಟೆನೋವನ್ನು ಕಂಡು ದಯೆದೋರಿ ರೈಯ್ದ್ ತನ್ನ ತಲೆಯನ್ನು ಜಜ್ಜಿಕೊಂಡರೆ, ಖಾಲಿದನ ಹೊಟ್ಟೆನೋವು ಶಮನವಾಗದೆಂದೂ ಹಾಗೆ ಮಾಡುವುದು ರೈಯ್ದನ ಮೂರ್ಖತನವೆಂಬುದೂ ಸ್ಪಷ್ಟವಷ್ಟೆ. ರೈಯ್ದ್ ತನ್ನ ತಲೆಯನ್ನು ಜಜ್ಜಿಕೊಳ್ಳುವುದರ ಬದಲು ಖಾಲಿದನಿಗೆ ಯೋಗ್ಯವಾದ ಶುಶ್ರೂಷೆ ನೀಡುವುದಾದರೆ ಅದು ಪ್ರಯೋ

ಜನಕರ ವೆನಿಸೀತು. ಸಂಕ್ಷಿಪ್ತವಾಗಿ, ಮೊದಲು ಉದ್ಧರಿಸಲಾದ ಖುರ್‍ಆನ್ ವಚನದ ತಾತ್ಪರ್ಯವೇನೆಂದರೆ, ಮನುಷ್ಯರನ್ನು ಸಕಲ ವಿಧ ಅನುಚಿತ ಬಂಧಗಳಿಂದ ವಿಮುಕ್ತಗೊಳಿಸಿ ಅವರಿಗೆ ಒಳಿತುಂಟುಮಾಡಲಿಕ್ಕಾಗಿ ಪೈಗಂಬರರು ತನ್ನ ಜೀವವನ್ನು ಅರ್ಪಿಸಿಕೊಂಡು, ಪ್ರಾರ್ಥನೆ ಮತ್ತು ಬೋಧನೆ ಮೂಲಕವೂ ವಿವೇಕಯುತ ಮಾರ್ಗದಿಂದಲೂ ಅವರನ್ನು ಉದ್ಧರಿಸಲು ಯತ್ನಿಸುತ್ತಾ, ಅವರ ಕಡೆಯಿಂದ ಉಪದ್ರವಗಳನ್ನು ಕ್ಷಮಾಪೂರ್ವಕ ಸಹಿಸುತ್ತಾ ತನ್ನ ಸರ್ವ ಸುಖಕ್ಷೇಮಾದಿಗಳನ್ನು ಕಡೆಗಣಿಸಿದ್ದರು. ಈ ಮಹತ್ತಾದ ಪರಿತ್ಯಾಗವನ್ನು ಸೂಚಿಸುತ್ತಾ ಪವಿತ್ರ ಖುರ್‍ಆನ್ ಪೈಗಂಬರರನ್ನು ಹೀಗೆ ಸಂಬೋಧಿಸುತ್ತದೆ:

ಲಅಲ್ಲಕ ಬಾಖಿಉನ್ ನಫ್ಸಕ ಅಲ್ಲಾ ಯಕೂನೂ ಮೂಅ್‌ಮಿನೀನ್ (26 : 4).

ಜನರು ಸತ್ಯವನ್ನು ಸ್ವೀಕರಿಸದಿರುವುದರ ಬಗ್ಗೆ ಚಿಂತಿಸಿಯೂ ಅವರಿಗಾಗಿ ಕಠಿಣ ಪ್ರಯತ್ನ ಮಾಡಿಯೂ ನೀನು ಜೀವವನ್ನು ನಾಶಪಡಿಸುವಿಯೂ?

ಇನ್ನೊಂದೆಡೆಯಲ್ಲಿ ಹೀಗೆ ಹೇಳುತ್ತದೆ:

ಫಲಾ ತದ್‌ಹಬ್ ನಫ್‌ಸುಕ ಅಲೈಹಿಂ ಹಸರಾತ್ (35:9).

ಸತ್ಯವನ್ನು ಅಂಗೀಕರಿಸದ ಜನರ ಕುರಿತು ವ್ಯಥೆಪಟ್ಟು ನೀನು ಜೀವವನ್ನು ನಾಶಪಡಿಸಬೇಡ.

ಒಟ್ಟಾರೆ, ಜನರಿಗಾಗಿ ಆತ್ಮತ್ಯಾಗ ಮಾಡುವ ಯಥೋಚಿತ ರೀತಿಯೇನೆಂದರೆ ಅವರ ಕ್ಷೇಮಾಭಿವೃದ್ಧಿಗಾಗಿ ಪ್ರಕೃತ್ಯಾನುಸಾರವೂ ಪ್ರಯೋಜನಕರವೂ ಆದ ಉತ್ತಮ ಮಾರ್ಗವನ್ನವಲಂಬಿಸಿ ಪರಿಶ್ರಮಿಸುವುದರಲ್ಲಿ ಜೀವನವನ್ನೇ ಅರ್ಪಿಸಿ, ಆ ಮಾರ್ಗದಲ್ಲಿ ತಡೆಯೊಡ್ಡುವ ಕಠಿಣ ತರದ ಪ್ರತಿಬಂಧಕಗಳನ್ನೂ ಕ್ಲೇಶಗಳನ್ನೂ ಅಚಂಚಲತೆಯಿಂದ ಎದುರಿಸುವುದಾಗಿದೆ. ಹಾಗಲ್ಲದೆ, ಜನರು ಭಯಂಕರವಾದ ಆಪತ್ತಿನಲ್ಲಿ ಅಥವಾ ಅಧರ್ಮ ಕೂಪದಲ್ಲಿ ಸಿಲುಕಿರುವುದನ್ನು ಕಂಡಾಗ ತನ್ನ ತಲೆಯನ್ನು ಚಚ್ಚಿಕೊಳ್ಳುವುದಾಗಲಿ ವಿಷ ಸೇವಿಸಿ ಸ್ವಯಂ ನಾಶಪಡುವುದಾಗಲಿ ಅಲ್ಲ. ತನ್ನ ಈ ಅವಿವೇಕತನದಿಂದ ಅಧರ್ಮದಲ್ಲಿ ತೊಳಲಾಡುತ್ತಿರುವವರಿಗೆ ವಿಮೋಚನೆ ಲಭಿಸುವುದೆಂದು ಯಾರಾದರೂ ಭಾವಿಸಿ ತೃಪ್ತಿಪಡುವವರಾದರೆ ಅದು ಬರೇ ಮೂರ್ಖತನವಾಗುತ್ತದೆ. ಜೀವನದಲ್ಲಿ ಎದುರಾಗುವ ಕಷ್ಟ-ದು:ಖಗಳನ್ನು ಸಹಿಸಲಾಗದೆ ಆತ್ಮಹತ್ಯೆಗೆ ಉದ್ಯುಕ್ತರಾಗುವವರು ಅಂಜುಕುಳಿಗಳು. ಈ ಬಗೆಯ ಆತ್ಮಹತ್ಯೆಯನ್ನು ಆ ಮೇಲೆ ಹೇಗೆ ವ್ಯಾಖ್ಯಾನಿಸಿದರೂ ಅದು ಅವಿವೇಕದ ಫಲವೂ ವಿವೇಕಿಗಳು ಇಷ್ಟಪಡದ ಭೀರುತ್ವವೂ ಎಂಬುದೂ ಸಂದೇಹಾತೀತ.

ಒಬ್ಬನ ಜೀವಿತದಲ್ಲಿ ಕಷ್ಟ-ಕ್ಲೇಶಗಳ ಕಾಲದಂತೆಯೇ ಅಧಿಕಾರ ಶಕ್ತಿ ಮತ್ತು ಐಶ್ವರ್ಯದ ಕಾಲ ಸಹ ಬಂದೊದಗದೆ ಆತನ ನಿಜವಾದ ಸ್ವಭಾವಗಳು ಸ್ಪಷ್ಟಗೊಳ್ಳಲಾರವು. ಪ್ರತೀಕಾರ ಮಾಡುವ ಸಂದರ್ಭ ಲಭಿಸದೆ ಸದಾ ಪೀಡನೆಗೆ ಗುರಿಯಾದ ಒಬ್ಬನ ಸಹನೆ ಮತ್ತು ಅನಾಕ್ರಮಣ ಸ್ವಭಾವವು ನಿಜವಾದ ಅವನ ಕ್ಷಮಾಗುಣವೆಂದು ಪರಿಗಣಿಸಲ್ಪಡದು. ಕಾರಣವೇನೆಂದರೆ, ಸೇಡು ತೀರಿಸುವ ಅವಕಾಶ ಸಿಕ್ಕಿದರೆ ಅವನು ವಿರೋಧಿಗಳೊಡನೆ ಹೇಗೆಲ್ಲಾ ವರ್ತಿಸುವನೆಂದು ತೀರ್ಮಾನಿಸಲು ಸಾಧ್ಯವಿಲ್ಲ. ಅದೇ ಪ್ರಕಾರ ಒಬ್ಬನು ಅಶಕ್ತನೂ ಅಧಿಕಾರರಹಿತನೂ ದರಿದ್ರನೂ ಆಗಿರುವ ಸ್ಥಿತಿಯಲ್ಲಿ ಅನ್ಯರ ಮರ್ದನವನ್ನು ಸಹಿಸಿಕೊಂಡು ಕಾಲಕಳೆದು, ಅಧಿಕಾರಶಕ್ತಿ ಮತ್ತು ಐಶ್ವರ್ಯವನ್ನು ಹೊಂದದೆಯೇ ಮರಣಪಡುವನಾದರೆ ಅವನ ಸ್ವಭಾವವನ್ನು ನಿರ್ಣಯಿಸಲಿಕ್ಕೆ ಸಾಧ್ಯವಿಲ್ಲ. ಅವನು ಒಮ್ಮೆಯೂ ಯುದ್ಧರಂಗದಲ್ಲಿ ಕಾಲಿಡದಿದ್ದ ಪಕ್ಷದಲ್ಲಿ ಅವನ ಧೈರ್ಯವಾಗಲಿ ಭೀರುತ್ವವಾಗಲಿ ಸಾಬೀತಾಗದು; ಮಾತ್ರವಲ್ಲ, ಅವನ ಮನೋಧರ್ಮದ ಕುರಿತು ನಮಗೆ ಏನೂ ಹೇಳಲಿಕ್ಕೆ ಸಾಧ್ಯವಿಲ್ಲ. ಹೀಗೆ, ವಿಭಿನ್ನ ಪರಿಸ್ಥಿತಿಗಳು ಒಬ್ಬನ ಜೀವಿತದಲ್ಲಿ ಎದುರಾಗದೆ ಅವನ ಸದ್ಗುಣಗಳ ಸಂಬಂಧಿಸಿ ನಿಶ್ಚಿತವಾಗಿ ಹೇಳಲಾಗದು. ಅವನು ಶತ್ರುಗಳ ಮೇಲೆ ಜಯ ಸಾಧಿಸಿದರೆ ಅವರೊಡನೆ ಹೇಗೆ ವರ್ತಿಸುವನೆಂದೂ ಧನಾಢ್ಯನಾದ ಪಕ್ಷದಲ್ಲಿ ದರಿದ್ರರಿಗೂ ನಿರ್ಗತಿಕರಿಗೂ ಧಾನಧರ್ಮ ಮಾಡುವನೋ ಯಾ ಧನವನ್ನೆಲ್ಲಾ ಕಟ್ಟಿಡುವನೋ ಎಂದೂ ಯುದ್ಧ ಕಣಕ್ಕೆ ಇಳಿಯಬೇಕಾಗಿ ಬಂದರೆ ಬೆನ್ನು ತೋರಿಸಿ ಓಡಿಹೋಗುವನೋ ಅಥವಾ ಧೀರತೆಯಿಂದ ಹೋರಾಡುವನೋ ಎಂದೂ ಆಯಾಯ ಸಂದರ್ಭ ಒದಗದಿದ್ದಲ್ಲಿ ನಮಗೆ ನಿರ್ಣಯಿಸಲು ಅಸಾಧ್ಯ. ಆದರೆ ದೇವನ ವಿಶೇಷವಾದ ಕೃಪಾಕಟಾಕ್ಷದಿಂದ ಪೈಗಂಬರರಿಗೆ ತನ್ನ ಜೀವಿತಕಾಲದಲ್ಲಿ ಸಕಲ ನೈತಿಕ ಗುಣಗಳನ್ನೂ ಪ್ರತಿಬಿಂಬಿಸಿ ತೋರಿಸುವರೆ ಸೌಭಾಗ್ಯ ಸಿದ್ಧಿಸಿದೆ. ಹೀಗೆ, ಚರಿತ್ರೆಯು ಹಾಳೆಗಳಲ್ಲಿ ಎಲ್ಲಿಯೂ ಗೋಚರಿಸದಂತಹ ನಿಸ್ತುಲ್ಯವಾದ ಔದಾರ್ಯ, ಧೀರತೆ, ಸಹನೆ,

ಕ್ಷಮಾಶೀಲತೆ, ನೀತಿನಿಷ್ಠೆ ಮೊದಲಾದ ಗುಣಗಳೆಲ್ಲಾ ಪೈಗಂಬರರ ಜೀವನದಲ್ಲಿ ಪೂರ್ಣವಾಗಿ ಪ್ರಕಟಗೊಂಡಿವೆ. ಅಶಕ್ತಿ ಮತ್ತು ಶಕ್ತಿಪ್ರತಾಪದ ಕಾಲದಲ್ಲಿ, ದಾರಿದ್ರ್ಯ ಮತ್ತು ಐಶ್ವರ್ಯದ ಕಾಲದಲ್ಲಿ ಎಲ್ಲಾ ತಾನು ಉತ್ಕೃಷ್ಟವಾದ ನೈತಿಕ ಗುಣಗಳ ಮತ್ತು ಮನೋಧರ್ಮಗಳ ತುಂಬಿದ ಪಾತ್ರೆಯೆಂದು ಪೈಗಂಬರರು ಲೋಕಕ್ಕೆ ತೋರಿಸಿಕೊಟ್ಟಿರುವರು. ಪೈಗಂಬರರ ಭಾಸುರ ಜೀವಿತದಲ್ಲಿ ಪ್ರತಿಬಿಂಬಿಸಿ ಕಾಣದಿರುವ ಯಾವುದೇ ಮಾನವಿಕ ಪರಿಪೂರ್ಣತೆಯಾಗಲಿ ಮಹದ್ಗುಣವಾಗಲಿ ಇಲ್ಲವೆಂದೇ ಹೇಳಬಹುದು.

### ಇಸ್ಲಾಮಿಕ ಯುದ್ಧ

ಹೌದು, ನಿರಪರಾಧಿಗಳಾದ ಮುಸ್ಲಿಮರಿಗೆದುರಾಗಿ ತೀವ್ರವಾದ ಅಕ್ರಮ ಮತ್ತು ಅನ್ಯಾಯವೆಸಗಿ, ಅವರಲ್ಲಿ ಅನೇಕರನ್ನು ನಿರ್ದಯವಾಗಿ ವಧಿಸಿ ಇಸ್ಲಾಂ ಧರ್ಮವನ್ನು ನಿರ್ಮೂಲನ ಮಾಡಲು ಅಹರ್ನಿಶಿ ಪ್ರಯತ್ನಪಟ್ಟ ದುಷ್ಟರಾದ ಶತ್ರುಗಳನ್ನು ದೇವನು ಶಿಕ್ಷಿಸದೆ ಬಿಡಲಿಲ್ಲವೆಂಬುದು ವಾಸ್ತವ. ಅಂತಹ ದುಷ್ಟರನ್ನು ಶಿಕ್ಷಿಸದೆ ಬಿಡುವುದು, ಅವರ ಪಾದಗಳಡಿಯಲ್ಲಿ ಮರ್ದನಗಳಿಗೆ ಗುರಿಯಾಗಿ ನಾಶಗೊಳ್ಳಲಿಕ್ಕೆ ಸತ್ಯಭಕ್ತರನ್ನು ಬಿಟ್ಟುಕೊಡುವುದಕ್ಕೆ ತುಲ್ಯ.

ಪೈಗಂಬರರ ಆಜ್ಞೆ ಪ್ರಕಾರ ಮುಸ್ಲಿಮರು ಮಾಡಿದ ಯಾವುದೇ ಯುದ್ಧವಾಗಲಿ ಅನ್ಯರನ್ನು ಕೊಲ್ಲುವ ಉದ್ದೇಶದಿಂದಾಗಿರಲಿಲ್ಲ. ನಿರ್ದಯಿಗಳಾದ ವೈರಿಗಳು ಪೈಗಂಬರರನ್ನೂ ಸಹಚರರನ್ನೂ ಸ್ವದೇಶದಿಂದ ಹೊರಗೆ ಅಟ್ಟಿದರು; ನಿರಪರಾಧಿಗಳಾದ ಅನೇಕ ಮುಸ್ಲಿಂ ಸ್ತ್ರೀ ಪುರುಷರನ್ನು ನಿಷ್ಕರುಣೆಯಿಂದ ವಧಿಸಿದರು. ಅಷ್ಟು ಮಾತ್ರವಲ್ಲ, ಇಸ್ಲಾಂ ಮತದ ಬೋಧನೆಗಳನ್ನು ಸಂಪೂರ್ಣವಾಗಿ ತಡೆಯಲಿಕ್ಕೂ ಹಾಗೆ ಇಸ್ಲಾಮನ್ನು ಬೇರು ಸಹಿತ ಕಿತ್ತುಹಾಕಲಿಕ್ಕೂ ಅವರು ಮುಸ್ಲಿಮರಿಗೆದುರಾಗಿ ಯುದ್ಧಕ್ಕಿಳಿದರು. ಹೀಗೆ ಮರ್ದನಗಳಿಗೆ ಗುರಿಯಾದವರನ್ನು ರಕ್ಷಿಸಲಿಕ್ಕಾಗಿ ಸತ್ಯ ಸಂರಕ್ಷಕನಾದ ದೇವನು ಇಚ್ಛಿಸಿದುದರಿಂದ ಖಡ್ಗಧಾರಿಗಳಾಗಿ ಬಂದ ಶತ್ರುಗಳನ್ನು ಖಡ್ಗದಿಂದಲೇ ಎದುರಿಸಲು ಅಪ್ಪಣೆ ಕೊಡಲಾಯಿತು. ಸಂಕ್ಷಿಪ್ತವಾಗಿ, ಸತ್ಯಭಕ್ತರಾದ ಆ ಶಾಂತಿಪ್ರಿಯರನ್ನು ನಿರ್ಮೂಲನ ಮಾಡಲಿಕ್ಕಾಗಿ ಯುದ್ಧಕ್ಕಿಳಿದವರಿಗೆದುರಾಗಿತ್ತು ಪೈಗಂಬರರು ಯುದ್ಧಮಾಡಿದ್ದು. ಇಂತಹ ಆಪತ್ಕಾರಿ ಘಟ್ಟಗಳಲ್ಲಿ ಆತ್ಮರಕ್ಷಣೆಗಾಗಿ ಆಯುದ್ಧವೆತ್ತಲು ಇಸ್ಲಾಂ ಒಪ್ಪಿಗೆ ನೀಡದಿರುತ್ತಿದ್ದರೆ ಸ್ತ್ರೀಯರೂ ಮಕ್ಕಳೂ ಸಹಿತ ಸಾವಿರಗಟ್ಟಲೆ ನಿರಪರಾಧಿಗಳು ವಧಿಸಲ್ಪಟ್ಟು ಕೊನೆಗೆ ಇಸ್ಲಾಂ ಮೊಳಕೆಯಲ್ಲೇ ನಾಶಗೊಳ್ಳುತಿತ್ತು.

ದೈವಪ್ರೋಕ್ತವಾದ ಮತದಲ್ಲಿ ವೈರಿಗಳ ಆಕ್ರಮಣವನ್ನು ತಡೆಯಲಿಕ್ಕಾಗಲಿ ಅಪರಾಧಿಗಳನ್ನು ಶಿಕ್ಷಿಸಲಿಕ್ಕಾಗಲಿ ಯಾವುದೇ ನಿಯಮ ನಿರ್ದೇಶನ ಇರಬಾರದೆಂದೂ ದೇವನ ಪ್ರೀತಿಯೂ ಕರುಣೆಯೂ ಸದಾ ಸೌಮ್ಯವೂ ಶಾಂತವೂ ಆದ ರೂಪದಲ್ಲಲ್ಲದೆ ಪ್ರಕಟವಾಗಬಾರದೆಂದೂ ಆಕ್ಷೇಪಕರು ಭಾವಿಸಿಕೊಂಡಿದ್ದಾರೆ. ಅವರು ತಮ್ಮ ಕಲ್ಪನೆ ಪ್ರಕಾರ ದೇವನ ಸರ್ವಶ್ರೇಷ್ಠ ಗುಣಗಳನ್ನು ಸೌಮ್ಯತೆ ಮತ್ತು ಶಾಂತತೆಗೆ ಮಾತ್ರ ಸೀಮಿತಗೊಳಿಸಿ, ತಾವು ದೇವನನ್ನು ಗೌರವಿಸುವುದಾಗಿ ತಿಳಿದುಕೊಂಡಿದ್ದಾರೆ. ಆದರೆ ಅವರ ಈ ಕಲ್ಪನೆ ತಪ್ಪೆಂದು ಚಿಂತಿಸುವವರಿಗೆ ಸುಲಭವಾಗಿ ವ್ಯಕ್ತವಾಗುತ್ತದೆ. ದೈವಿಕವಾದ ಪ್ರಕೃತಿ ನಿಯಮಗಳನ್ನು ವೀಕ್ಷಿಸಿದರೆ ದೇವನು ದಯಾಮಯನೆಂದು ಗೋಚರವಾಗುವುದಾದರೂ ಅವನ ದಯೆ ಸದಾ ಒಂದೇ ರೀತಿಯಲ್ಲಿ ಶಾಂತವೂ ಮೃದುಲವೂ ಆದ ರೂಪದಲ್ಲಿ ಪ್ರಕಟವಾಗುವುದಿಲ್ಲವೆಂದು ಕಾಣಬಹುದು. ಅವನು ಒಬ್ಬ ದಕ್ಷ ವೈದ್ಯನಂತೆ ಕೆಲವೊಮ್ಮೆ ರುಚಿಕರ ಮಧುರ ಪಾನೀಯ ನೀಡುವುದು ಹಾಗೂ ಕೆಲವೊಮ್ಮೆ ಕಹಿ ಕಷಾಯ ಕುಡಿಸುವುದು ಸಹ ತನ್ನ ಅತಿರೇಕವಾದ ಕಾರುಣ್ಯದಿಂದಲೇ ಆಗಿದೆ. ತನ್ನ ಸೃಷ್ಟಿಗಳ ಮೇಲೆ ಅವನು ದಯೆ ತೋರಿಸುವುದು ನಾವು ನಮ್ಮ ಸ್ವಂತ ದೇಹಗಳ ಮೇಲೆ ದಯೆ ತೋರಿಸುವ ರೀತಿಯಲ್ಲಾಗಿದೆಯೆಂದು ಹೇಳಬಹುದು. ನಮ್ಮಲ್ಲಿ ಪ್ರತಿಯೊಬ್ಬನು ಅವನವನ ದೇಹವನ್ನು ಪ್ರೀತಿಸುವನೆಂಬುದರಲ್ಲಿ ಸಂದೇಹವಿಲ್ಲ. ಯಾರೂ ತನ್ನ ದೇಹಕ್ಕೆ ತುಸು ನೋವಾದರೂ ಉಂಟಾಗುವುದನ್ನು ಇಷ್ಟಪಡುವುದಿಲ್ಲ. ಇಂತಹ ಒಂದು ಆತ್ಮಸ್ನೇಹ ನಮ್ಮ ಸರ್ವಾಂಗಗಳಲ್ಲೂ ವ್ಯಾಪಿಸಿಕೊಂಡಿದೆ. ಯಾವುದೇ ಅವಯವಕ್ಕೂ ಹಾನಿಯುಂಟಾಗುವರೆ ಇಷ್ಟಪಡದೆ ನಾವು ಸಕಲಾಂಗಗಳನ್ನೂ ಪ್ರೀತಿಸುವೆವಾದರೂ ಎಲ್ಲವನ್ನೂ ಒಂದೇ ತರದಲ್ಲಿ ಪ್ರೀತಿಸುವುದಿಲ್ಲವೆಂಬುದು ಸ್ಪಷ್ಟ. ಜೀವಿತೋದ್ದೇಶ ನಿರ್ವಹಣಕ್ಕಾಗಿ ಅತ್ಯಂತ ಉಪಯೋಗಕರ ಶ್ರೇಷ್ಠ ಅವಯವಗಳ ಮೇಲಿರುವ ಪ್ರೀತಿಯೂ ಜಾಗರೂಕತೆಯೂ ನಮ್ಮ ಹೃದಯದಲ್ಲಿ ಗಣ್ಯ ಸ್ಥಾನವನ್ನು ಪಡೆದಿರುತ್ತದೆ. ಇದೇ ಪ್ರಕಾರ ಯಾವುದಾದರೊಂದು ಅಂಗದ ಮೇಲೆ ಮಾತ್ರವಿರುವುದಕ್ಕಿಂತಲೂ

ಹೆಚ್ಚು ಪ್ರೀತಿಯೂ ಗಮನವೂ ನಮ್ಮ ಎಲ್ಲಾ ಅಂಗಗಳ ಮೇಲೆಯೂ ಸಮಷ್ಟಿಯಾಗಿ ಇರುತ್ತದೆ. ಒಟ್ಟಾರೆ, ಅಪ್ರಧಾನವಾದ ಒಂದು ಅಂಗವನ್ನು ಗಾಯಗೊಳಿಸುವುದರಿಂದಾಗಲಿ ಭೇದಿಸುವುದರಿಂದಾಗಲಿ ಬೇರೊಂದು ಪ್ರಧಾನ ಅವಯುವದ ರಕ್ಷಣೆಯೂ ತದ್ವಾರಾ ಶರೀರಕ್ಕೆ ಸ್ವಾಸ್ಥ್ಯವು ಲಭಿಸುವುದೆಂದು ತೋರುವುದಾದರೆ ನಾವು ಆ ಅಂಗವನ್ನು ಭೇದಿಸಲಿಕ್ಕೂ ಸಿದ್ಧರಾಗುತ್ತೇವೆಯಷ್ಟೆ. ಆಗ ನಮಗೆ ಮನೋವೇದನೆಯುಂಟಾಗುವುದಾದರೂ ಹಾಗೆ ಮಾಡದಿದ್ದರೆ ಒಂದು ಅವಯವಕ್ಕೆ ಅಂಟಿದ ಕೇಡು ಸರ್ವಾಂಗಗಳಿಗೂ ವ್ಯಾಪಿಸುವುದೆಂಬ ಭಯದಿಂದ ಆ ಶಸ್ತ್ರಕ್ರಿಯೆಗೆ ನಾವು ನಿರ್ಬಂಧಿತರಾಗುತ್ತೇವೆ. ಇದೇ ಪ್ರಕಾರ, ಸತ್ಯಭಕ್ತರಾದ ಸಾಧುಜನರು ದುಷ್ಟರ ಕೈಯಿಂದ ನಾಶಗೊಳ್ಳುವುದಾಗಿಯೂ ಭೂಮಿಯಲ್ಲಿ ಗಲಭೆ ವರ್ಧಿಸುವುದಾಗಿಯೂ ಕಾಣುವಾಗ ಕರುಣಾನಿಧಿಯಾದ ದೇವನು ಸಹ ಸಜ್ಜನರ ಸಂರಕ್ಷಣೆಗಾಗಿಯೂ ಸಮಾಧಾನ ಸಂಸ್ಥಾಪನಕ್ಕಾಗಿಯೂ ಸಂದರ್ಭೋಚಿತ ಮಾರ್ಗಗಳನ್ನು ಕೈಗೊಳ್ಳುತ್ತಾನೆ. ಅವನು ಅಗಾಧ ಜ್ಞಾನಿಯೂ ಆಗಿರುವ ಕಾರಣ ದುಷ್ಟಜನರಿಗೆ ಆಕಾಶದಿಂದಾಗಲಿ ಭೂಮಿಯಿಂದಾಗಲಿ ಶಿಕ್ಷೆ ಬಂದೆರಗುವಂತೆ ಮಾಡುತ್ತಾನೆ.


ಅಲ್‌ಹಮ್ದು ಲಿಲ್ಲಾಹಿ ರಬ್ಬಿಲ್ ಆಲಮೀನ್.

ಅಖಿಲ ಲೋಕ ಸೃಷ್ಟಿಕರ್ತನಾದ, ಸರ್ವ ಸೃಷ್ಟಿ ಪರಿಪಾಲಕನಾದ ಸರ್ವರಕ್ಷಕನಾದ ದೇವನಿಗೆ ಸಕಲ ಸ್ತುತಿಸ್ತೋತ್ರಗಳು ಸಲ್ಲುತ್ತವೆ.

★

( ಮುಗಿಯಿತು )






ಸ್ಪೈನಿನಲ್ಲಿ ಇಸ್ಲಾಂ ಅವನತಿಗೊಂಡು ಸುಮಾರು 750 ವರ್ಷಗಳು ಸಂದ ಬಳಿಕ ಪೆಡ್ರೋ ಆಬಾದ್ ಎಂಬಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ನಿರ್ಮಿಸಲ್ಪಟ್ಟ ಪ್ರಥಮ ಮಸೀದಿ. ಇದರ ಉದ್ಘಾಟನೆ ಬರುವ ಸಪ್ಟೆಂಬರ್ ತಿಂಗಳಲ್ಲಿ ನಡೆಯಲಿದೆ.

Regd. with the Registrar of Newspapers for India. Regd. No. R. N. 27354/75
**YUGARASHMI Kannada Quarterly, April 1982 / Shahadat 1361**

## English Translation of the HOLY QUR'AN with Arabic Text & Extensive Index




**Price : Rs. 15-00**

**Postal Charge Extra**

---

### AHMADIYYA ENGLISH LITERATURE

| | | |
|---|---|---|
| 1 | INTRODUCTION TO THE STUDY OF HOLY QURA'N<br>by Hazrath Mirza Bashiruddin Mahmud Ahmad | 16-00 |
| 2 | THE TEACHINGS OF ISLAM<br>by Hazrath Mirza Ghulam Ahmad | 6-00 |
| 3 | JESUS IN INDIA<br>by Hazrath Mirza Ghulam Ahmad | 2-25 |
| 4 | WHERE DID JESUS DIE ?<br>by J. D. Shams, Ex-Imam, London Mosque | 2-25 |
| 5 | THE TOMB OF JESUS<br>by Soofi Mutiurrahman Bengali, M A. | 1-00 |

**Write to: NAZIR DAWAT-O-TABLIGH, Qadian [Punjab]-143 516**

Edited and Published by Muhammad Yusuf on behalf of Jamath Ahmadiyya
at 10-23/1008, Ansari Road, Bunder, Mangalore-575 001.
Printed at Karavali Printers Azizuddin Road, Bunder, Mangalore-575 001.